ಹಿತ್ತಲಗಿಡ


ಚಾತುರ್ಮಾಸಿಕ

ಪೈರು ೪, ಕೊಯಿಲು ೨, ೧೯೯೮

(Vol. 3 No.2-3, April - September, 1998 - New)

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು,
ರೈತ ಮೂಲದ ಅನುಶೋಧನೆ, ಸ್ಥಳೀಯ
ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತಶಕ್ತಿ
ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ
ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಬಿಡಿ ಪತ್ರಿಕೆ : ರೂ. 20/-



ಸುಸ್ಥಿರ ಅಭಿವೃದ್ಧಿಯ ಪಂಚ ಮುದ್ರೆಗಳು

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು
ಹುಟ್ಟುಹಾಕುವ ಪ್ರಯತ್ನ

ಹಿತ್ತಲಗಿಡ

ಪೈರು ೪, ಕೊಯಿಲು ೨, ೧೯೯೮
(Vol. 3, No.2 & 3, April-September 1998 - New)

'ಹಿತ್ತಲಗಿಡ' ರೈತ, ವಿಜ್ಞಾನಿ, ವಿದ್ಯಾರ್ಥಿ,
ಸ್ವಾಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು,
ರೈತ ಮೂಲದ ಅನುಶೋಧನೆ, ಸ್ಥಳೀಯ
ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತಶಕ್ತಿ
ಇವುಗಳ ಮೂಲಕ "ಸುಸ್ಥಿರ ಕೃಷಿ" ಅಭಿವೃದ್ಧಿ
ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ.

ಸಂಪಾದಕ ಮಂಡಳಿ

ಸಂಪಾದಕೀಯ

ಸರುಗ್ರಾಮದಲ್ಲಿ ನಡೆದ 'ಹಿತ್ತಲಗಿಡ' ಬಳಗದ ಸಭೆ ಹಲವಾರು ದೃಷ್ಟಿಕೋನದಿಂದ ಮಹತ್ವದ್ದಾಗಿದ್ದು, ನಮ್ಮ ವಿಶ್ವಾಸ ಹೆಚ್ಚಿಸಲು ಸಹಕಾರಿಯಾಗಿದೆ. ಕೃಷ್ಣಪ್ರಸಾದರ 'ಅಪರೂಪದ ನಾಟಿ ಬೀಜಗಳ' ವಿವರ ನೋಡಿ, ನಮ್ಮ "ಸಮೃದ್ಧಿ"ಯ ಬಗ್ಗೆ ಹೆಮ್ಮೆಯೆನಿಸಿದೆ. ಧಾರ್ಮಿಕ ಆಚರಣೆಗಳು ಪರಿಸರ ಸಂರಕ್ಷಣೆಯಲ್ಲಿ ಎಂತಹ ಮಹತ್ವದ ಪಾತ್ರ ಒದಗಿಸುತ್ತವೆ ಎನ್ನುವುದಕ್ಕೆ ವಾಲ್ಮೀಕಿ ಶ್ರೀನಿವಾಸ ಅಯ್ಯಂಗಾರ್‌ರ ಲೇಖನವೇ ಸಾಕ್ಷಿ. ಜೊತೆಗೆ ಅಭಿವೃದ್ಧಿಗೆ ರೈತಶಕ್ತಿ ಕೈಗೂಡಿಸಿದರೆ ಎಂತಹ ಅದ್ಭುತ ಫಲಿತಾಂಶ ಬರಬಹುದೆನ್ನಲು ಚಿಕ್ಕಪಡಸಲಗಿ ಅಣೇಕಟ್ಟು ಉದಾಹರಣೆ. ಇದಕ್ಕೆ ಸಿದ್ದುನ್ಯಾಮಗೌಡರಂತಹ ಸಮರ್ಥ ನಾಯಕತ್ವ ದೊರಕಿದರಂತೂ ಈ ದೇಶದಲ್ಲಿ ಬಡತನವೆಂಬುದು ಒಂದು ಅಪವಾದವಾಗಿ ಉಳಿಯುವ ದಿನ ದೂರವಿರದು. ಇವೆಲ್ಲಾ ಪ್ರಯತ್ನಗಳಿಗೆ ಇಂಬುಗೊಡುವಂತೆ ದೇಶದ ಸಾಂಸ್ಕೃತಿಕ ಹೃದಯವಾದ ವಾರಣಾಸಿಯಲ್ಲಿ ಭಾರತೀಯ ವಿಜ್ಞಾನದ ತೃತೀಯ ಕಾಂಗ್ರೆಸ್ಸಿಗೆ ಸಿದ್ಧತೆ ನಡೆಯುತ್ತಿದ್ದು ಇದರಲ್ಲಿ ಹನೀಬಿ, ಹಿತ್ತಲಗಿಡ ಮತ್ತು ಅದರ ಸಹೋದರ ಪತ್ರಿಕೆಗಳ ಪ್ರತ್ಯೇಕ ಗೋಷ್ಠಿಯೊಂದಕ್ಕೆ ಅವಕಾಶ ದೊರೆತಿರುತ್ತದೆ. ಇದು ನಮ್ಮೆಲ್ಲಾ ಪ್ರಯತ್ನಕ್ಕೆ ದೊರೆತ ಗೌರವದ ಸಂಕೇತವಾಗಿದೆ. ಪ್ರೊ. ಗುಪ್ತಾರ 'ಶೋಧಯಾತ್ರೆ'ಯು ವಿಜ್ಞಾನ ತಂತ್ರಜ್ಞಾನವನ್ನು ಜನತೆಗೆ ಕೊಂಡೊಯ್ಯುವ ಪ್ರಯತ್ನಕ್ಕೆ ಪರ್ಯಾಯವಾಗಿ ಅವರಿಂದಲೇ ಅವನ್ನು ಪಡೆಯುವ ಅನನ್ಯ ಪಯತ್ನವೊಂದಕ್ಕೆ ನಾಂದಿ ಹಾಡಿದೆ. ಹಿತ್ತಲಗಿಡದ ಕಾರ್ಯಕ್ಕೆ ರೋಹಿಣಿ ಶರ್ಮ, ಜಿ.ಎನ್. ರಾಮಕೃಷ್ಣ ಮತ್ತು ಪದ್ಮರಾಜ ಗೋಪಾಲ್‌ರಂತವರು ಕೈಗೂಡಿಸುತ್ತಿರುವುದು ನಮಗೆ ಮತ್ತಷ್ಟು ಶಕ್ತಿ ತಂದಿದೆ. ಅಂತಿಮವಾಗಿ ಪರಿಸರ ಚಳುವಳಿಗೆ ಮಹಿಳಾ ಆಯಾಮವನ್ನು ಸಮರ್ಥವಾಗಿ ಜೋಡಿಸಿದ್ದ ಡಾ. ಕುಸುಮಾ ಸೊರಬ ನಮ್ಮನ್ನಗಲಿರುವುದು ತುಂಬಲಾರದ ನಷ್ಟವಾಗಿದೆ.

ಡಾ. ಟಿ.ಎನ್. ಪ್ರಕಾಶ್‌ಕಮ್ಮರಡಿ

ದೇಶೀಯ ಹತೋಟಿ ಕ್ರಮಗಳು

ಕೆಂಪು ಮೂತಿ ಕೀಟಗಳ ಹತೋಟಿ

ಕೆಂಪು ಮೂತಿ ಕೀಟಗಳ ಹಾವಳಿಗೆ ಸಾವಿರಾರು ತೆಂಗಿನ ಮರಗಳು ಬಲಿಯಾಗುತ್ತಿವೆ. ತೆಂಗಿನ ಮರಗಳು ಸಂಪೂರ್ಣ ನಾಶವಾದಾಗಲೇ ಕೀಟಗಳ ಸುಳಿವು ಗೋಚರವಾಗುವುದು. ಈ ಕೀಟಗಳ ಸಂಪೂರ್ಣನಾಶ ಬಹಳ ಕಷ್ಟ. 3-15 ವರ್ಷದ ಮರಗಳಲ್ಲಿ ಇವುಗಳ ಹಾವಳಿ ಕಂಡು ಬರುತ್ತದೆ. 20 ಅಡಿ ಎತ್ತರದವರೆಗೂ ಇವು ಹಾರಬಲ್ಲದು.

ಈ ಕೀಟದ ಜೀವನ ಚಕ್ರ 45 ದಿನಗಳಾಗಿದ್ದು, ಕೋಶಾವಸ್ಥೆಯಿಂದ ಹೊರಬಂದ ಕೀಟ "ಕಲ್ಲು ತಿಗಣೆ" ಗಿಂತ ದಪ್ಪನಾಗಿದ್ದು, ಮೂತಿ ಕೆಂಪಾಗಿ ಮೈ ಕಪ್ಪಾಗಿ ಕೆಂಪು ಗೆರೆಗಳನ್ನು ಹೊಂದಿರುತ್ತದೆ. ಈ ಕೀಟ ಗಿಡ ಮರಗಳ ಮೃದುವಾದ ಭಾಗದಲ್ಲಿ ರಂಧ್ರಮಾಡಿ 100-150 ಮೊಟ್ಟೆಗಳನ್ನು ಇಡುತ್ತದೆ. ಮೂರು ನಾಲ್ಕು ದಿನಗಳಲ್ಲಿ ಮೊಟ್ಟೆ ಒಡೆದು ಸಣ್ಣ ಬಿಳಿ ಹುಳುಗಳು ಹೊರಬರುತ್ತವೆ. ಈ ಹುಳುಗಳು ಮರದ ಮೃದುಭಾಗವನ್ನು ತಿನ್ನಲು ಪ್ರಾರಂಭಿಸುತ್ತವೆ. 10-15 ದಿನಗಳಲ್ಲಿ ಇವುಗಳ ಗಾತ್ರ ಹೆಚ್ಚಿ ನೊರನೊರನೆ ಶಬ್ದಮಾಡುತ್ತಾ ತಿನ್ನಲು ಪ್ರಾರಂಭಿಸುತ್ತವೆ. ಈ ವೇಳೆಗಾಗಲೇ ಮರದ ಮಧ್ಯ ಭಾಗವನ್ನು ಸಂಪೂರ್ಣ ತಿಂದು, ಗೊಬ್ಬರದಲ್ಲಿ ಸಿಗುವ ಗೊಣ್ಣೆ ಹುಳು (ರೈನೋಸೆರಸ್‌ನ ಹಿಂದಿನ ಹಂತ) ರೂಪದಲ್ಲಿ ಕಂಡು ಕೆಂಪು ಮೂತಿ ಹೊಂದಿರುತ್ತದೆ. 25-30ನೇ ದಿನಗಳಲ್ಲಿ ಕೋಶಾವಸ್ಥೆಗೆ ಹೋಗುತ್ತದೆ. 45ನೇ ದಿನ ಚಿಟ್ಟೆ ರೂಪ ತಾಳಿ ಗಂಡು ಹೆಣ್ಣು ಚಿಟ್ಟೆಗಳಾಗಿ ಹೊರಬರುತ್ತವೆ. ಹೊರಬಂದ ಕೀಟಗಳಲ್ಲಿ ಸಂಪರ್ಕವೇರ್ಪಟ್ಟು ಸಂತಾನ ವೃದ್ಧಿಯಾಗುತ್ತದೆ, ಹೆಣ್ಣು ಚಿಟ್ಟೆಯ ಕುತ್ತಿಗೆ ಭಾಗದಲ್ಲಿ ಸಣ್ಣ ಸಣ್ಣ ಮೊಟ್ಟೆಗಳು ಕಪ್ಪಾಗಿ ಕಂಡು ಬರುತ್ತವೆ. ಈ ಚಿಟ್ಟೆ ಬೇರೆ ಕಡೆ ಹಾರಿ ಹೋಗಿ ತೆಂಗಿನ ಮರಗಳ ಮೃದುವಾದ ಭಾಗಗಳಲ್ಲಿ ರಂಧ್ರಮಾಡಿ ಮೊಟ್ಟೆ ಇಡುತ್ತದೆ. ಕೆಲವು ದಿನಗಳ ನಂತರ ಈ ಚಿಟ್ಟೆ ಸಾಯುತ್ತದೆ.

ಈ ಕೀಟಗಳ ಹಾವಳಿಗೆ ಗುರಿಯಾದ ಗಿಡಮರಗಳ ಸುಳಿ ಹಳದಿ ಬಣ್ಣಕ್ಕೆ ತಿರುಗುತ್ತದೆ. ನಂತರ 30 ದಿನಗಳಲ್ಲಿ ಸಂಪೂರ್ಣ ನಾಶವಾಗುತ್ತದೆ. ಬುಡದ ಭಾಗಕ್ಕೆ ಬಿದ್ದರೆ, ಆ ಭಾಗವನ್ನು ಸಂಪೂರ್ಣ ತಿಂದು ಬೋನಿನ ರೀತಿ ಟೊಳ್ಳುಮಾಡುತ್ತವೆ.

ಫಲ ಬಿಡುವ 10-20 ಅಡಿ ಎತ್ತರದ ಮರಗಳ ಶಿರದ ಭಾಗಕ್ಕೆ ಹಾರಿ ಹೋಗಿ ಮೃದುಭಾಗವನ್ನು (ಗಿಣ್ಣದ ಭಾಗ) ತಿಂದು ಟೊಳ್ಳುಮಾಡುತ್ತವೆ. ಸುಳಿ ಹಳದಿ ಬಣ್ಣಕ್ಕೆ ತಿರುಗಿ ಎರಡು ಮೂರನೇ ಸುತ್ತಿನ ಗರಿಗಳ ಹಿಂಭಾಗದ ಮೊಟ್ಟೆಗಳಲ್ಲಿ ಕಂದು ಬಣ್ಣದ ಚುಕ್ಕೆಗಳು ಗೋಚರಿಸಿ, ಆ ಭಾಗದಲ್ಲಿ ಅಂಟು ದ್ರವ ಶೇಖರವಾಗುವುದು (ಗೋಂದಿನ ರೂಪದ) ಮೇಲಿನ ಸುತ್ತಿನ ಹರಳುಗಳು ಆಕಾರದಲ್ಲಿ ಉದ್ದನಾಗಿ ಸೀಳಿರುತ್ತವೆ. ಈ ವೇಳೆಗಾಗಲೇ ಮರದ ಶಿರದ ಸಂಪೂರ್ಣಭಾಗವನ್ನು ತಿಂದು ಹಾಕಿರುತ್ತವೆ.

ವಿಜ್ಞಾನಿಗಳು ಈ ಕೀಟಗಳ ನಾಶಕ್ಕೆ 8 ಮಿ.ಲಿ. "ನುವಾಕ್ರಾನ್" ಔಷಧವನ್ನು ಬೇರಿನ ಮೂಲಕ ಕೊಡಲು ಸಲಹೆ ಮಾಡುತ್ತಾರೆ.

ಈ ವರ್ಷ ಜನವರಿಯಿಂದ ಈ ಕೀಟಗಳ ಹಾವಳಿಯಿಂದ ಸಾವಿರಾರು ಗಿಡಮರಗಳು ನನ್ನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಬಲಿಯಾದವು. ನನ್ನ ತೋಟದಲ್ಲಿ ಏಪ್ರಿಲ್ ತಿಂಗಳಲ್ಲಿ 15 ಅಡಿ ಎತ್ತರದ ಮರ ಬಲಿಯಾಯಿತು. ನನ್ನ ಬುದ್ಧಿ ಚುರುಕಾಗಿ ಒಂದು ಪ್ರಯೋಗ ಮಾಡಿದೆ. "ಕತ್ತಾಳೆ (Agave)ಯ ಗಡ್ಡೆ" (ಮಧ್ಯದ ಬಿಳಿ ಭಾಗ) ಕಿತ್ತು ತಂದು, 1 ಲೋಟ ನೀರಿಗೆ (150 ಮಿ.ಲಿ.) 2 ಉಂಡೆ ಬೆಲ್ಲ (20 ಗ್ರಾಂ) ಹಾಕಿ, ಕಾಯಿಸಿ ಆರಿಸಿ ಗಡ್ಡೆಗೆ ಲೇಪನಮಾಡಿ, ಒಂದು ತಟ್ಟೆಯಲ್ಲಿ ನೀರು ಹಾಕಿ ಮಧ್ಯಭಾಗದಲ್ಲಿ ನೀರಿನ ಮಟ್ಟಕ್ಕಿಂತ ಎತ್ತರವಾಗಿ ಚಪ್ಪಟೆಯಾದ ಕಲ್ಲುಇಟ್ಟು ಆ ಕಲ್ಲಿನ ಮೇಲೆ ಕತ್ತಾಳೆಗಡ್ಡೆ ಇಟ್ಟೆ. ಮೂರು ದಿನಗಳ ನಂತರ ನೋಡಿದಾಗ ಎರಡು ಚಿಟ್ಟೆಗಳು ಈ ಗಡ್ಡೆಯನ್ನು ರಂಧ್ರವಮಾಡಿ ತಿನ್ನಲು ಪ್ರಾರಂಭಿಸಿದ್ದವು. ಸುಲಭವಾಗಿ ಹಿಡಿದು ಕೊಂದೆ. ಈ ರೀತಿ ಮುನ್ನೆಚ್ಚರಿಕೆ ಕ್ರಮ ವಹಿಸಿ 100 ತೆಂಗಿನ ಗಿಡಗಳ ಮಧ್ಯ ಎರಡು ಗಡ್ಡೆಗಳನ್ನು ಮೇಲಿನ ಕ್ರಮವಹಿಸಿ ಇಟ್ಟು ಸುಲಭವಾಗಿ ನಿಯಂತ್ರಿಸಬಹುದು.

ಬಿ.ಬಸವರಾಜು, ಸಂತೇಶಿವರ.

* * * * * * *

ಭತ್ತದ ಕಾಂಡ ಕೊರಕಕ್ಕೆ

ತ್ರಿಪುರ ಪ್ರದೇಶದಲ್ಲಿ ಸ್ಥಳೀಯವಾಗಿ ಕುಚ್ಚ ಎಂದು ಕರೆಯುವ ಕೊಡಚೆಗಾ ಅಥವಾ ಕುರ್ಚಿ *(Holarrhena antidysentrica)* ಗಿಡವನ್ನು ಭತ್ತದ ಕಾಂಡಕೊರಕ ನಿಯಂತ್ರಣಕ್ಕೆ ಉಪಯೋಗಿಸುತ್ತಾರೆ. ಈ ಗಿಡದ ಗೆಲ್ಲುಗಳನ್ನು ಮುಂಗಾರು ಭತ್ತದ ಗದ್ದೆಗಳಲ್ಲಿ ಎಳೆದಾಡುವುದರಿಂದ ಶೇ.70 ರಷ್ಟು ನಿಯಂತ್ರಣ ಸಾಧ್ಯವಂತೆ. ಸುಮಾರು 30-40 ಗೆಲ್ಲುಗಳನ್ನು 0.16 ಹೆಕ್ಟೇರ್ ಜಾಗದಲ್ಲಿ ಎಳೆಯುತ್ತಾರೆ.

ಮೂಲ : ಎಸ್.ಕೆ. ಪ್ರದಾನ್
ಹನಿ ಬೀ 9 (1) 1998

ತರಕಾರಿ ಕೀಟಗಳ ನಿಯಂತ್ರಣ

2 ತಿಂಗಳು ಬೆಳೆದ ಚೀನಿ, ಬದನೆ, ಕುಂಬಳ ಗಿಡಗಳ ಎಲೆಗಳ ಮೇಲೆ ಕೆಲವು ಹನಿ ಸೀಮೆ ಎಣ್ಣೆ ಸಿಂಪಡಿಸಿ ನಂತರ ಹಳೆ ವಿಭೂತಿ (ಬೆರಣಿ ಸುಟ್ಟ ಬೂದಿ)ಯನ್ನು ಚೆಲ್ಲುವುದರಿಂದ ಸಾಮಾನ್ಯವಾಗಿ ಈ ಗಿಡಗಳ ಮೇಲೆ ಬರುವ ಕೀಟಗಳು ಇರುವುದಿಲ್ಲವಂತೆ. ಇದೇ ಕ್ರಮವನ್ನು ಮತ್ತೊಮ್ಮೆ ಹೂ ಬಿಡುವ ಕೆಲವು ದಿನಗಳ ಮುಂಚಿತವಾಗಿ ಮಾಡುವುದರಿಂದ ಕೀಟಗಳ ನಿಯಂತ್ರಣ ಸಾಧ್ಯ.

ಮೂಲ: ಅಮಿತ್ ರಾಯ್ ಮತ್ತು ಮೊಂಡಾಲ್
ಹನಿ ಬೀ 9 (1) :1998

ಸಸ್ಯಗಳಿಗೆ ಕಚಗುಳಿ

ನಮಗೆ ಯಾರಾದರೂ ಕಚಗುಳಿ ಕೊಟ್ಟರೆ ನಾವು ನಗುತ್ತೇವೆ. ಸಸ್ಯಗಳಿಗೆ ಕೊಟ್ಟರೆ ಅವುಗಳು ದಪ್ಪವಾಗುತ್ತವಂತೆ. ಸಸ್ಯ ವಿಜ್ಞಾನದ ಪ್ರಾಧ್ಯಾಪಕ ಜೈಲ್ ಟೈಲರ್ ಪ್ರಕಾರ ಕಚಗುಳಿ ಗಿಡದ ಬೆಳವಣಿಗೆಯನ್ನು ಕುಂಠಿತಗೊಳಿಸುವು ದಂತೆ. ದಿನಕ್ಕೊಂದು ಹತ್ತುಬಾರಿ ಗಿಡಗಳನ್ನು ಮುಟ್ಟುವುದರಿಂದ ಗಿಡಗಳು ಕುಳ್ಳಗಾಗಿ ಅವುಗಳ ಕಾಂಡಗಳು ದಪ್ಪವಾಗುತ್ತವಂತೆ. ಸಸ್ಯಗಳಿಗೆ ನರವ್ಯೂಹವಿಲ್ಲದಿದ್ದರೂ ಹೊರಗಿನ ಪ್ರಚೋದನೆಗಳಿಗೆ ಪ್ರತಿಕ್ರಿಯಿಸುವ ಕಿಣ್ವಗಳಿರುವುದರಿಂದ ಹೀಗಾಗುತ್ತದಂತೆ.

ಮೂಲ : ಹನಿ ಬೀ, 9(1): 1998,
ಅನುವಾದ : ಶ್ರೀನಿವಾಸ ಬಾಲನಕೊಪ್ಪ

ದೇಶೀಯ ಸಂಗ್ರಹಣಾ ಪದ್ಧತಿಗಳು

ಧಾನ್ಯ ಸಂಗ್ರಹಣೆ

■ ತೊಗರಿ, ಅವರೆ ಮೊದಲಾದ ದ್ವಿದಳ ಧಾನ್ಯಗಳಿಗೆ ಸಂಗ್ರಹಣಾ ಕೀಟ *(Storage pest)* ಗಳ ಕಾಟ ಜಾಸ್ತಿ. ಹಸುವಿನ ಗಂಜಲದಲ್ಲಿ ಬಿತ್ತನೆ ಬೀಜಗಳನ್ನು ತೊಳೆದು, ನೆರಳಲ್ಲಿ ಒಣಗಿಸಿ ಸಂಗ್ರಹಿಸಿಟ್ಟರೆ, ಕೀಟಗಳ ಕಾಟ ಇರುವುದಿಲ್ಲ.

■ ಆರಕದ ಜೊತೆಯಲ್ಲಿ ದ್ವಿದಳ ಧಾನ್ಯಗಳನ್ನು ಸಂಗ್ರಹಿಸಿಟ್ಟರೆ, ಹುಳು ಬೀಳುವುದಿಲ್ಲ.

■ ಹರಳು *(Castor)* ಬೀಜಗಳನ್ನು ಹುಳು ಬೀಳುವ ಯಾವುದೇ ಬೀಜಗಳ ಜೊತೆ, ವಿಶೇಷವಾಗಿ ಅಲಸಂದೆ, ಅವರೆ ಮತ್ತು ತೊಗರಿಯ ಜೊತೆ ಬೆರೆಸಿ ಇಡುವುದರಿಂದ, ಹುಳುಗಳ ಕೀಟವನ್ನು ನಿವಾರಣೆ ಮಾಡಿಕೊಳ್ಳಬಹುದು.

■ ಚೌಳನ್ನು (ಜೌಗು ಪ್ರದೇಶದಲ್ಲಿ ಬೆಳ್ಳಗೆ ಇರುವ ಕ್ಷಾರೀಯ ಮಣ್ಣು ಚಿತ್ರದುರ್ಗ, ತುಮಕೂರು ಜಿಲ್ಲೆಯ ಬರಪೀಡಿತ ಪ್ರದೇಶದಲ್ಲಿ ಸಾಮಾನ್ಯ) ಬಳ್ಳಿ ನೆಲಗಡಲೆ ಕಾಯಿಯ ಜೊತೆ ಸೇರಿಸಿ ಇಟ್ಟರೆ ಹುಳು ಬೀಳುವುದಿಲ್ಲ.

■ ತೊಗರಿ ಬೀಜಗಳಿಗೆ ಸಂಗ್ರಹಣಾ ಕೀಟಗಳ ಹಾವಳಿ ತೀರಾ ಜಾಸ್ತಿ, ಇದರ ನಿವಾರಣೆಗೆ ರೈತರೇ ಕಂಡುಕೊಂಡ ಸುಲಭ ಪರಿಹಾರ ಹೀಗಿದೆ ; ತೊಗರಿ ಬೀಜಗಳನ್ನು ಚೆನ್ನಾಗಿ ಬಿಸಿಲಲ್ಲಿ ಒಣಗಿಸಿ, ರಾತ್ರಿ ಪೂರ್ತಿ ಬಯಲಲ್ಲೇ ಬಿಡಬೇಕು. ಮುಂಜಾನೆ ಇಬ್ಬನಿಯಲ್ಲಿ ನೆನೆದ ಮರಳನ್ನು ಮಣ್ಣಿನ ಕುಡಿಕೆಯ ತಳಭಾಗದಲ್ಲಿ ಸ್ವಲ್ಪಹಾಕಿ, ಅದರ ಮೇಲೆ ತೊಗರಿ ಬೀಜ ಹರಡಬೇಕು, ನಂತರ ಬೀಜದ ಮೇಲೆ ಮತ್ತಷ್ಟು ಮರಳು ತುಂಬಿ ಎತ್ತಿಟ್ಟರೆ, ಕೀಟಗಳ ಕಾಟ ಇರುವುದಿಲ್ಲ.

■ ಹರಳು ಬೀಜಗಳನ್ನು ಹುರಿದು, ಕುಟ್ಟಿ ಪುಡಿ ಮಾಡಿಕೊಳ್ಳಬೇಕು, ಆ ಪುಡಿಯಿಂದ ತೊಗರಿ ಬೀಜಗಳನ್ನು ತಿಕ್ಕಿ ಸಂಗ್ರಹಿಸಿದರೆ ಹುಳು ಬೀಳುವುದಿಲ್ಲ.

ಮಾಹಿತಿ : ಗೌರಮ್ಮ, ಗೊಲ್ಲಹಳ್ಳಿ, ತಳಿ, ತಮಿಳುನಾಡು.

ಸಂಗ್ರಹ : ಜಿ. ಕೃಷ್ಣಪ್ರಸಾದ್, ತಳಿ

■ ಅಕ್ಕಿಯ ಜೊತೆಗೆ ಒಂದಷ್ಟು ಒಣ ಮೆಣಸಿನಕಾಯಿಯನ್ನು ಬೆರೆಸಿ ಸಂಗ್ರಹಿಸಿದರೆ ಅಕ್ಕಿಗೆ ಹುಳು ಬೀಳುವುದಿಲ್ಲವೆಂಬುದು ಆಂಧ್ರಪ್ರದೇಶದ ಜನರ ಅನುಭವವಂತೆ. ಒಂದು ಮೂಟೆ ಅಕ್ಕಿಗೆ 10-15 ಒಣ ಮೆಣಸಿನಕಾಯಿ ಸಾಕಂತೆ.

ಮೂಲ : ಹನಿ ಬೀ 9 (1) : 1998

ಮರಮಟ್ಟುಗಳ ಸಂಗ್ರಹಣೆ

ಮರವನ್ನು ಕಡಿದ ನಂತರ ಹಾಗೆ ಒಣಗಿಸಿ ಬಹಳ ಕಾಲ ಇಡುವುದರಿಂದ ಮರವು ಕೀಟಗಳ ಹಾವಳಿಗೆ ತುತ್ತಾಗಿ, ತನ್ನ ಗಟ್ಟಿತನವನ್ನು ಕಳೆದುಕೊಳ್ಳುವುದು. ಆದ್ದರಿಂದ ಬಹಳ ಕಾಲ ಗಟ್ಟಿ ಮುಟ್ಟಾದ ಮರ ಸಂಗ್ರಹಿಸಲು ಈ ಕೆಳಗಿನ ಪದ್ಧತಿಗಳು ಬಹಳ ಉಪಯುಕ್ತವಾಗಿವೆ.

■ ಕಡಿದ ತಕ್ಷಣ ಮರವನ್ನು ಒಣಗಲು ಬಿಟ್ಟು, ಅದರ ಮೇಲಿನ ಚಕ್ಕೆ(Bark)ಯನ್ನು ತೆಗೆಯುವುದರಿಂದ ದೊಣ್ಣೆ ಹುಳುವಿನ ನಿವಾರಣೆಯಾಗುವುದು.

■ ಒಣಗಿದ ಮರವನ್ನು ನೀರಿಗೆ ಹಾಕಿ 15-30 ದಿನಗಳ ನಂತರ ಹೊರತೆಗೆದು ಬಿಸಿಲಿಗೆ ಹಾಕುವುದರಿಂದ ಕೀಟದ ಹಾವಳಿಯನ್ನು ತಡೆಯುವ ಶಕ್ತಿಯನ್ನು ಪಡೆಯುತ್ತದೆ.

■ ಮರಮಟ್ಟುಗಳಿಗೆ ದನದ ಗಂಜಲ (urine) ಬಳಿಯುವುದರಿಂದ ಹುಳುಗಳನ್ನು ದೂರವಿಡಬಹುದು.

ಹುಲ್ಲಿನ ಸಂಗ್ರಹಣೆ

■ ಭತ್ತ ಅಥವಾ ರಾಗಿ ಹುಲ್ಲನ್ನು ಬಣವೆ ಹಾಕುವಾಗ, ಬಣವೆಯ ಕೆಳಗೆ ಉದ್ದಕ್ಕೂ ಎರಡು ಮರದ ದಿಮ್ಮಿಗಳನ್ನು ಅಥವಾ ಉದ್ದವಾದ ಕಟ್ಟಿಗೆಯನ್ನು ಒಂದು ಅಡಿ ಎತ್ತರಕ್ಕೆ ಬರುವಂತೆ ಜೋಡಿಸಿ ಬಣವೆ ಹಾಕುವುದರಿಂದ ಭತ್ತದ ಹುಲ್ಲು ಬಹಳ ಕಾಲದವರೆಗೆ ಹಾಳಾಗದೆ ಕಾಪಾಡಬಹುದು.

■ ಹುರುಳಿ ಹೊಟ್ಟು, ಶೇಂಗಾ (Ground Nut) ಹೊಟ್ಟನ್ನು ಬಣವೆ ಹಾಕುವಾಗ ಅದರ ಮೇಲೆ ಮತ್ತು ಕೆಳಗೆ ಭತ್ತದ ಹುಲ್ಲಿನ ಒಂದು ಅಡಿ ದಪ್ಪ ಹೊದಿಕೆ ಕೊಡುವುದರಿಂದ ಹೊಟ್ಟು ಆರೋಗ್ಯವಾಗಿ ಮತ್ತು ಸತ್ವಭರಿತ ವಾಗಿರುವುದು. ಮಳೆಗಾಲದಲ್ಲಿ ಮಳೆಯಿಂದ ಕೊಳೆಯದಂತೆ ಕಾಪಾಡಬಹುದು. ಗೆದ್ದಲು ಹುಳುವಿನ ಬಾಧೆ ತಪ್ಪಿಸಬಹುದು.

■ ರಾಗಿ ಕಡ್ಡಿ, ಜೋಳದ ಕಡ್ಡಿ, ಸಜ್ಜೆ ಕಡ್ಡಿಯನ್ನು ಸಿವುಡು (Heap) ಕಟ್ಟಿ ಗೋಪು ರೋಪಾದಿಯಲ್ಲಿ, ಬುಡ ಮೇಲೆ ಮಾಡಿ ಪೋಣಿಸುವುದರಿಂದ ಹುಲ್ಲು ಹಾಳಾಗದೆ ಇರುವುದು. ಅಲ್ಲದೆ ಸುಲಭವಾಗಿ ತೆಗೆದುಕೊಳ್ಳಬಹುದು. ಮಳೆಯ ನೀರು ಇಳಿಜಾರಿನಲ್ಲಿ ಸರಾಗವಾಗಿ ಇಳಿದು ಹೋಗುವುದು. ಇದರಿಂದ ಹುಲ್ಲು ಕೊಳೆಯದೇ, ಗೆದ್ದಲು ಹುಳುವಿನ (White ant) ಬಾಧೆಯಿಂದ ದೂರವಿಡಬಹುದು.

ಸಂಗ್ರಹ : ನಾಗರತ್ನ

■ ಲಕ್ಕಿ ಗಿಡ *(Vitex negudo)*ದ ಎಲೆಗಳನ್ನು ಭತ್ತದ ಮೂಟೆಗಳನ್ನು ಪೇರಿಸಿಡುವಲ್ಲಿ ಮೇಲೆ ಕೆಳಗೆ ಸುತ್ತಮುತ್ತಲೂ ಇಡುವುದರಿಂದ, ಭತ್ತದ ಬೀಜಕ್ಕೆ ಬೀಳುವ ಹುಳುಗಳು ಕಡಿಮೆಯಾಗುತ್ತವಂತೆ ಹಳ್ಳಿಗಳಲ್ಲಿ ಈ ಗಿಡದ ಎಲೆಗಳನ್ನು ಕಾಮಾಲೆ ರೋಗಕ್ಕೂ ಉಪಯೋಗಿಸುತ್ತಾರೆ.

ಮೂಲ : ಅಮಿತ್ ರಾಯ್ ಮತ್ತು ಮೊಂಡಾಲ್

ಹನಿ ಬೀ 9 (1): 1998

ವಿಶೇಷ ಸೂಚನೆ

ಹಿತ್ತಲ ಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.


ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ. ಸಂ.

ಹಳ್ಳಿ ಗಾಡಿನಲ್ಲಿ ಬಿತ್ತನೆ ಬೀಜ ಸಂರಕ್ಷಿಸುವ ವಿಧಾನಗಳು

ಒಂದು ಹೊಸ ಮಡಿಕೆಯನ್ನು ಕಂಭಾರರ ಮನೆಯಿಂದ ತಂದು ಇದಕ್ಕೆ ಹಸುವಿನ ಗಂಜಲವನ್ನು ಒಳಗೆ ಮತ್ತು ಹೊರಗೆ ಬಳಿಯಬೇಕು. ಮೊದಲದಿನ ನೆರಳಿನಲ್ಲಿ 2ನೇ ದಿನ ಬಿಸಿನಲ್ಲಿ ಒಣಗಿಸಿ ಇದಕ್ಕೆ ಬಿತ್ತನೆ ಬೀಜಗಳನ್ನು ತುಂಬಬೇಕು ಅವರೆ, ಅಲಸಂದೆ, ತೊಗರಿ ಈ ಬೀಜಗಳ ಜೊತೆಯಲ್ಲಿ ಒಣ ಮೆಣಸಿನ ಕಾಯಿ ಪುಡಿಮಾಡಿ ಬೆರಸಬೇಕು.ಹೀಗೆ ಮಾಡುವುದರಿಂದ 1 ರಿಂದ 2 ವರ್ಷ ಹುಳುಗಳಿಂದ ರಕ್ಷಿಸಬಹುದು. ಮಡಿಕೆಯ ಮಂಡಲವನ್ನು ಮೂತ್ರ ಸಗಣಿಯಿಂದ ಮೆತ್ತಬೇಕು.

ಒಂದು ಹೊಸ ಮಡಿಕೆಯನ್ನು ತೆಗೆದುಕೊಂಡು ಇದಕ್ಕೆ ಬಿತ್ತನೆ ಬೀಜ ಮತ್ತು ಮರಳು ಸಮಪ್ರಮಾಣವಾಗಿ ತುಂಬಿ ಮುಚ್ಚಳವನ್ನು ಸಗಣಿಯಿಂದ ಮೆತ್ತಬೇಕು ನಮಗೆ ಬೇಕಾಗುವಾಗ ಈ ಮುಚ್ಚಳವನ್ನು ತೆಗೆದು ದೊಡ್ಡ ಜರಡಿಯಲ್ಲಿ ಹಾಕಿ ತಿರುವಿದಾಗ ಮರಳು ಕೆಳಕ್ಕೆ ಬಿದ್ದು ಅವರೆ ತೊಗರಿ ಮೇಲೆ ಉಳಿಯುತ್ತದೆ. ಹೀಗೆ ಬೇರೆ ಮಾಡಿ ಉಪಯೋಗಿಸಬಹುದು 1 ರಿಂದ 2 ವರ್ಷಗಳ ಕಾಲ ಸಂರಕ್ಷಿಸಬಹುದು.

ಒಂದು ಮಡಿಕೆಗೆ ಅವರೆ ಕಾಳನ್ನು ತುಂಬಲು 100 ಗ್ರಾಂ ಹರಳಿನ ಎಣ್ಣೆಯನ್ನು ತೆಗೆದುಕೊಂಡು ಅವರೇ ಕಾಳಿಗೆ ಸವರಿ ಸ್ವಲ್ಪ ಹೊತ್ತು ಆರಿಸಿ ನಂತರ ಮಡಿಕೆಗೆ ತುಂಬಬೇಕು ಮುಚ್ಚಳವನ್ನು ಸಗಣಿಯಿಂದ ಮೆತ್ತಿದರೆ 1 ರಿಂದ 2 ವರ್ಷ ಹುಳುವಿನಿಂದ ಸಂರಕ್ಷಿಸ ಬಹುದು.



ಸಂಪ್ರದಾಯಿಕ ನೇಗಿಲು ಪೂಜೆಯಿಂದ ತಿಳಿದುಬರುವ ಆಧುನಿಕ ಜರ್ಮೀನೇಷನ್ ಪರೀಕ್ಷೆ


ತಮಿಳುನಾಡಿನ ಡಂಕಣಿ ಕೋಡೆಯ ತಾಲೋಕಿನ ಸಾವಿರಭತ್ತ ಎಂಬ ಊರಿನಲ್ಲಿ ಯುಗಾದಿಯ ದಿನ ಮಾಡುವ ಈ ನೇಗಿಲು ಪೂಜೆ, ನಮ್ಮ ಸಂಪ್ರದಾಯದ ಪ್ರತೀಕವಾಗಿದ್ದು ಆಧುನಿಕ ಮತ್ತು ವೈಜ್ಞಾನಿಕ ವಿವರಣೆಯನ್ನು ಹೊಂದಿದೆ. ಇಲ್ಲಿನ ರೈತರು ಯುಗಾದಿಯ ದಿನ ಎರಡು ಹೊಸ ನೇಗಿಲನ್ನು ತಂದು ಅಡಿಕೆ ಪಟ್ಟೆಯಿಂದ ಒಂದು ಸಣ್ಣ ಜೊಪ್ಪೆ ಮಾಡಿ ಅದಕ್ಕೆ ಸಗಣಿ ಮತ್ತು ಗೊಬ್ಬರವನ್ನು ಹಾಕಿ ಅದಕ್ಕೆ ಪೂಜೆಯನ್ನು ಸಲ್ಲಿಸಿ 5 ವಿಧಧ ಧಾನ್ಯಗಳು ಅಥವಾ 9 ವಿವಿಧ ಧಾನ್ಯಗಳನ್ನು ಆ ಜೊಪ್ಪೆಯಲ್ಲಿ ಮೊಳಕೆಗೆ ಬಿತ್ತುತ್ತಾರೆ. ಇಲ್ಲಿ ರಾಗಿ, ಭತ್ತ, ಹುರಳಿ, ಸಾಸಿವೆ, ಅವರೆ, ಅಲಸಂದೆ, ಹುಚ್ಚೆಳ್ಳು, ಬಿಳಿ ಜೋಳವನ್ನು ಬಳಸಬಹುದಾಗಿದೆ. ಹೀಗೆ ಮೊಳಕೆಗೆ ಹಾಕಿದ ನಂತರ 9 ದಿನಗಳು ಅದಕ್ಕೆ ನೀರು ಹಾಕಿ 9 ನೇ ದಿನ ಆ ಧಾನ್ಯಗಳಲ್ಲಿ ಯಾವುದು ಒಳ್ಳೆಯ ಮೊಳಕೆ ಬಂದು ಫಲವತ್ತಾಗಿ ಬೆಳೆದಿರುತ್ತದೆಯೋ ಆ ಬೆಳೆಗಳು ಈ ವರ್ಷ ಚೆನ್ನಾಗಿ ಆಗುತ್ತದೆ ಎಂಬ ನಂಬಿಕೆ ಮತ್ತು ಅನುಭವವನ್ನು ಈ ಊರಿನ ರೈತರು ಹೊಂದಿದ್ದಾರೆ.

ಈ ಪೂಜೆ ಯುಗಾದಿ ದಿನ ಮಾಡುವ ಉದ್ದೇಶ ಯುಗಾದಿ ಕಳೆದ ನಂತರ ಮಳೆಗಾಲ ಪ್ರಾರಂಭವಾಗಲಿದ್ದು ರಜೆ ಕಾಲದ ರೈತರನ್ನು ಎಚ್ಚರಿಸಿ ತಮ್ಮ ಸಂಪ್ರದಾಯಿಕ ಒಕ್ಕಲುತನಕ್ಕೆ ಸಿದ್ಧತೆ ನಡೆಸುವ ಸಂಕೇತವೂ ಆಗಿದೆ.

ವೈಜ್ಞಾನಿಕ ವಿವರಣೆ

1) ಈ ಪೂಜೆಯಿಂದ ರೈತರು ವ್ಯವಸಾಯದ ಸಲಕರಣೆಗಳನ್ನು ಸಿದ್ದಪಡಿಸುವಂತೆ ಪ್ರೇರೇಪಿಸಲ್ಪಡುತ್ತದೆ. ನಮ್ಮ ಮನೆಯಲ್ಲಿರುವ ಬೀಜಗಳು ಬಿತ್ತನೆಗೆ ಯೋಗ್ಯವೋ ಇಲ್ಲವೊ ತಿಳಿಯಬಹುದು. ಅದು ಹೇಗೆ ಎಂದರೆ ಯಾವುದು ಸರಿಯಾಗಿ ಮೊಳಕೆ ಬಂದಿಲ್ಲವೆಂದರೆ ಆ ಬೀಜ ಸರಿಯಲ್ಲವೆಂದು ಅರ್ಥಮಾಡಿಕೊಂಡು ಬೇರೆ ಬೀಜವನ್ನು ಬಿತ್ತನೆಗೆ ಬಳಸಬಹುದು. ಇದು ನಮ್ಮ ಮನೆಯಲ್ಲಿರುವ ಬಿತ್ತನೆ ಬೀಜದ ಪರೀಕ್ಷೆ ಮಾಡಿದ ಹಾಗೆ ಆಗುತ್ತದೆ.

2) ಈ ಪೂಜೆಯಿಂದ ಮುಂದೆ ಆಗುವ ಹಾನಿಯನ್ನು ತಪ್ಪಿಸಬಹುದು. ಒಂದು ವೇಳೆ ಹುಟ್ಟುವಳಿ ಆಗದೇ ಇರುವ ಬೀಜವನ್ನು ಹೊಲಕ್ಕೆ ಹಾಕುವುದರಿಂದ ರೈತರಿಗೆ ಆಗುವ ನಷ್ಟವನ್ನೂ ತಪ್ಪಿಸಬಹುದು. ಇಂತಹ ಸಂಪ್ರದಾಯಿಕ ಪೂಜೆಯಿಂದ ಇಷ್ಟೆಲ್ಲಾ ಅನುಕೂಲತೆಯಿರುವುದರಿಂದ ನಾವು ಎಲ್ಲರೂ ಮಾಡಿ ಈ ಸನಾತನ ಸಂಸ್ಕೃತಿಗೆ ಜೀವ ಕೊಡುವುದರಲ್ಲಿ ಯಾವ ತಪ್ಪಿದೆ ?



ಹೆಸರು ಕಾಳು ಕರೀ ಉದ್ದಿನ ಸಂರಕ್ಷಣೆಗೆ

ಚೆನ್ನಾಗಿ ಒಣಗಿದ ಹೆಸರು ಕಾಳು ಇಲ್ಲವೆ ಕರೀ ಉದ್ದಿನ ಕಾಳನ್ನು ಮನೆಯಲ್ಲಿ ಅಡುಗೆ ಮಾಡುವಾಗ ಉತ್ಪತ್ತಿಯಾದ ಬೂದಿಯನ್ನು ಬೆರೆಸಿ ಮಡಿಕೆಗೆ ತುಂಬಬೇಕು. 1 ಕೆ.ಜಿ. ಕಾಳು ಇದ್ದರೆ 1/2 ಕೆ.ಜಿ. ಯಷ್ಟು ಬೂದಿ ಬೆರೆಸಬೇಕು. ಹೀಗೆ ಮಡಿಕೆಗೆ ತುಂಬಿದ ನಂತರ ಮುಚ್ಚಳದ ಬದಲು ಬಟ್ಟೆಯನ್ನು ಕಟ್ಟಿ ಮೇಲೆ ಬಾಯಿಯ ಬಳಿ ಬೂದಿಯನ್ನು ಸ್ವಲ್ಪ ಜಾಸ್ತಿ ಹಾಕಬೇಕು. ಹೀಗೆ 2 ರಿಂದ 3 ವರ್ಷ ಹುಳುಕಾಟದಿಂದ ರಕ್ಷಿಸಬಹುದು. ಇದು ರೈತರ ಅನುಭವವಾಗಿದೆ.

ಸಂಗ್ರಹ
ಜಿ.ಎಸ್.ರಾಮಕೃಷ್ಣ ಗುಂಜೂರು.

ಪಶುಚಿಕಿತ್ಸೆಯಲ್ಲಿ ಅನುಸರಿಸುವ ಕೆಲವು ನಾಟಿ ಔಷಧ ವಿಧಾನಗಳು

ಸಂಗ್ರಹ : ಜಗದೀಶ ಎಸ್.ಮಟ್ಟಿ ಮತ್ತು ರೇಖಾ ಎಸ್.ಟಿ. ಪಶುವೈದ್ಯಕೀಯ ಕಾಲೇಜು ಬೆಂಗಳೂರು

ಕಾಲುಬಾಯಿ ಜ್ವರ

■ ಮೊದಲು ಬಾಯಿಯಲ್ಲಿನ ಗಾಯಗಳನ್ನು ಪಟಿಕದ ನೀರಿನಿಂದ ತೊಳೆಯಬೇಕು. ನಂತರ, ಗಸಗಸೆ, ಹಸಿಜೀರಿಗೆ, ಮರಾಟಮೊಗ್ಗು (*Illicium verum*), ಕಲ್ಲು ಹೂ, ಕೆಂಪುಕೇಸರಿ ಸೊಪ್ಪು, ನೆಲತಾವರಿಕೆ ಸೊಪ್ಪು (*Cassia angustifolia*), [illegible] (*Andrographis paniculata*), ಎಲ್ಲವನ್ನೂ ಕುಟ್ಟಿ, ಜೇನು ತುಪ್ಪದಲ್ಲಿ ಮಿಶ್ರಮಾಡಿ ಬಾಯಿಗೆ ಸವರತಕ್ಕದ್ದು.

■ ಕಾಲಿನಲ್ಲಿರುವ ಗಾಯಗಳಿಗೆ ಬಂದರಿಕೆ ಸೊಪ್ಪು (*Dodonaea viscosa*), ತಂದು ಕಾಲಿಗೆ ಕಟ್ಟಬೇಕು.

■ ಪಟಿಕ (10 ಗ್ರಾಂ) ತಂದು ಅರೆದು ಬಿಸಿನೀರಿನಲ್ಲಿ ಕದಡಿ ಬಾಯಿ ತೊಳೆಯಬೇಕು. ಕಷಾಯ ಮೂಲಿಕೆಗಳು - ಸಾಸಿವೆ 1 ಪಾವು, ಅರಿಶಿನ, 75ಗ್ರಾಂ, ಒಣಶುಂಠಿ 75ಗ್ರಾಂ, 1 ಕೆ.ಜಿ., ಈರುಳ್ಳಿ, ಒಣಮೆಣಸಿನಕಾಯಿ 1/4 ಕೆ.ಜಿ., ತೋಟಿಸೊಪ್ಪು (*Apium graveolens*), (5 ಹಿಡಿ), ಉತ್ತರಾಣಿ ಸೊಪ್ಪು (*Achyranthes aspera*) (3 ಹಿಡಿ) ಔಡಲಚಕ್ಕೆ (3 ಹಿಡಿ), ಇಸಗಿಸೊಪ್ಪು (3 ಹಿಡಿ), ಚಿರಾಯುತ (*Swertia chiratta*) (30ಗ್ರಾಂ), ಹಿಪ್ಪಲಿ (*Piper longum*) (30ಗ್ರಾಂ), ಹುಣಸೆಹಣ್ಣು 1/4 ಕೆ.ಜಿ. ಇವುಗಳೆಲ್ಲವನ್ನೂ ಸಣ್ಣಗೆ ಕುಟ್ಟಿ, ಪಾತ್ರೆಯಲ್ಲಿ ಹಾಕಿ ನೀರು ಸೇರಿಸಿ, ಕದಡಿ, ಬಿಸಿಮಾಡಿ, ಆರಿಸಿ 1 ಲೋಟ ರಸಕ್ಕೆ 4 ಲೋಟ ನೀರು ಬೆರೆಸಿ ದಿನಕ್ಕೆ ಒಂದು ಸಾರಿಯಂತೆ ಮೂರು ದಿನಗಳವರೆಗೆ ಕೊಡಬೇಕು. ಮೇಲೆ ಹೇಳಿರುವ ಕಷಾಯ ಸುಮಾರು 6-8 ಪ್ರಾಣಿಗಳಿಗೆ ಆಗುತ್ತದೆ.

■ ಕಾಲಿನಲ್ಲಿರುವ ಗಾಯಗಳಿಗೆ ಬೇವಿನ ಎಣ್ಣೆ ಮತ್ತು ಕರ್ಪೂರ ಸೇರಿಸಿ ಹಚ್ಚಬೇಕು.

■ ವಿಷಮುಧಾರಿ (*Clerodendron Inermis*) ಸೊಪ್ಪನ್ನು ಅರೆದು ಬಿಸಿಮಾಡಿ ಗಂಟಲಿಗೆ ತಿಕ್ಕಬೇಕು.

■ ಬಾಳೆಹಣ್ಣಿನಲ್ಲಿ ಗೇರುಬೀಜವನ್ನು ಇಟ್ಟು ತಿನ್ನಿಸಬೇಕು.

■ ಆಹಾರ : ಮೆಂತ್ಯೆ ಮತ್ತು ನವಣೆಯನ್ನು ಹುರಿದು, ಪುಡಿಮಾಡಿ ಅಂಬಲಿ ಮಾಡಿ ಕುಡಿಸಬೇಕು. ಬಾಳೆಹಣ್ಣು ಮತ್ತು ಹೆಸರುಬೇಳೆಯನ್ನು ಅಂಬಲಿಯಲ್ಲಿ ತಿನ್ನಿಸಬೇಕು

ಕೆಚ್ಚಲು ಬಾವು

ಬಿಸಿನೀರಿನಲ್ಲಿ ನೆಲನೆಲ್ಲಿ(*Phyllanthus neruri*) ಸೊಪ್ಪನ್ನು ಹಾಕಿ ರಸವನ್ನು ಕೆಚ್ಚಲಿಗೆ ಹಚ್ಚಬೇಕು. ಕೆಚ್ಚಲನ್ನು ಬಿಸಿನೀರಿನಿಂದ ತೊಳೆದ ಮೇಲೆ ಪಚ್ಚಕರ್ಪೂರ, ಕುಂಕುಮ ಮತ್ತು ಬಾಳೆಹಣ್ಣನ್ನು ಮಿಶ್ರ ಮಾಡಿ, ಆ ಮಿಶ್ರಣವನ್ನು ಕೆಚ್ಚಲಿಗೆ ಹಚ್ಚಬೇಕು. ಇದರಿಂದ ಬಾವು ಕಮ್ಮಿಯಾಗುತ್ತದೆ.

ತುಗ್ಗಿಚಕ್ಕೆ ಮತ್ತು ಸೊಪ್ಪು, ಬ್ಯಾಟಿಚಕ್ಕೆ, ಆಡುಮುಟ್ಟದ ಸೊಪ್ಪು (*Tylophora asthmatica*), ಲಕ್ಕಿಸೊಪ್ಪು (*Vitex negundo*), ಔಡಲಚಕ್ಕೆ, ಕೊರಟಿಗನ ಚಕ್ಕೆ (*Pergularia extensa*), ಬೋಡುಕ, ಚಿರಾಯುತ, ಹಿಪ್ಪಲಿಮೋಡಿ, ನುಗ್ಗೆ ಸೊಪ್ಪು, ಒಳಮುಚ್ಚಕ ಮತ್ತು ಜೀರಿಗೆ. ಇವುಗಳೆಲ್ಲವನ್ನೂ ರುಬ್ಬಿ ಮಜ್ಜಿಗೆಯಲ್ಲಿ ಅಥವಾ ನೀರಿನಲ್ಲಿ ಹಾಕಿ ಕುಡಿಸಬೇಕು.

ಅಮೃತಬಳ್ಳಿ ಸೊಪ್ಪನ್ನು ಅರೆದು ರಸವನ್ನು ಕೆಚ್ಚಲಿಗೆ ಹಚ್ಚಬೇಕು.

ಬಿಳಿದಾಸವಾಳದ ಬೇರು ಎರಡು ಹಿಡಿಯಷ್ಟು, ತೆಗೆದುಕೊಂಡು ಮಜ್ಜಿಗೆಯ ಜೊತೆ ಚೆನ್ನಾಗಿ ಅರೆದು ದಿವಸಕ್ಕೆ ಎರಡು ಸಲದಂತೆ ಎರಡು ದಿವಸ ಕುಡಿಸಬೇಕು.

ಆಶಾಡಿ ಬೇರು (*Asparagus falcatus*) (3 ಹಿಡಿ), ಕಲ್ಲುಸಕ್ಕರೆ (1 ಹಿಡಿ) ಮತ್ತು ಕಲ್ನಾರು(ಅರ್ಧ ಅಥವಾ1 ಹಿಡಿ) ಇವುಗಳನ್ನು ಚೆನ್ನಾಗಿ ಅರೆದು ತಿನ್ನಿಸಬೇಕು.

ಬಿಳಿಹಾಲಿನ ಸೊಪ್ಪು, ಆಡುಮುಟ್ಟದ ಸೊಪ್ಪು, ಬೆಳ್ಳಿ ಮರದ ಹಾರೇ ಸೊಪ್ಪು, ಅರಿಶಿನ ಪುಡಿ 100ಗ್ರಾಂ, ತೊಂಡೆ ಸೊಪ್ಪು, ಒಳ್ಳೆಣ್ಣೆ 1/4 ಲೀಟರ್ ಇವುಗಳೆಲ್ಲವನ್ನು ಕುದಿಸಿ ಹಚ್ಚತಕ್ಕದ್ದು.

ಆಹಾರ : ಅಕ್ಕಿ, ಮೆಂತ್ಯೆಕಾಳು, ಒಡೆದು ಪುಡಿಮಾಡಿ ಅಂಬಲಿ ಮಾಡಿ ಕುಡಿಸಬೇಕು.

ಹೊಟ್ಟೆ ಊದುವುದು

ಕಷಾಯ - ಸಾಸಿವೆ 100 ಗ್ರಾಂ, ಅರಿಶಿನ 100 ಗ್ರಾಂ, ಅಜ್ವಾನ 100 ಗ್ರಾಂ, ಸೋಂಪಿನ ಕಾಳು 75 ಗ್ರಾಂ, ಒಣಕೊಬ್ಬರಿ 100 ಗ್ರಾಂ, ಔಡಲಚಕ್ಕೆ (1 ಹಿಡಿ), ಈರುಳ್ಳಿ (1/2 ಕೆ.ಜಿ.), ಒಣಮೆಣಸಿನ ಕಾಯಿ ಪುಡಿ 50 ಗ್ರಾಂ, ಕುರುಟಿಗನ ಸೊಪ್ಪು (1 ಹಿಡಿ) ಇವುಗಳಿಂದ ಕಷಾಯಮಾಡಿ ದಿನಕ್ಕೊಂದು ಬಾರಿಯಂತೆ ಎರಡು ದಿವಸ ಕುಡಿಸಬೇಕು.

ಹುಚ್ಚುನಾಯಿ ಕಡಿತಕ್ಕೆ

ಮುಡಜಾಲಿ ಬೀಜ 20 ಗ್ರಾಂ, ಮಾವಿನ ಚಕ್ಕೆ, ಮಾವಿನ ಸೊಪ್ಪು, ನೆಲಮಾವಿನ ಸೊಪ್ಪು, ಮೆಣಸಿನಕಾಳು 100 ಗ್ರಾಂ, ಬೆಳ್ಳುಳ್ಳಿ, ಸಾಸಿವೆ 50 ಗ್ರಾಂ, ಒಣಶುಂಠಿ, ಔಡಲಚಕ್ಕೆ, ಆಡುಮುಟ್ಟದ ಸೊಪ್ಪು, ಇಸಗಿ ಸೊಪ್ಪು, ಲಕ್ಕಿಸೊಪ್ಪು, ಚಿರಾಯುತ, ಇವುಗಳೆಲ್ಲವನ್ನು ಕುಟ್ಟಿ ಬಿಸಿನೀರಿನಲ್ಲಿ ಅಥವಾ ಮಜ್ಜಿಗೆಯಲ್ಲಿ ಹಾಕಿ ಕುಡಿಸಬೇಕು.

ಗಿಡಮೂತಿ ಗೆಡ್ಡೆ / ಬಲುಮದ್ದಿನ ಗಡ್ಡೆ / ಮರಾಲೆ ದಂಟು / ಹಾಲೆ ಸೊಪ್ಪು / ಕೊರಟಿ ಸೊಪ್ಪು ಇವುಗಳಲ್ಲಿ ಯಾವುದಾದರೊಂದನ್ನು ತೇದು ಗಾಯದ ಭಾಗಕ್ಕೆ ಹಚ್ಚಬೇಕು.

ಗಜ್ಜಗದ ಸೊಪ್ಪು ಮತ್ತು ಅರಿಶಿನವನ್ನು ಅರೆದು ಕಡಿದ ಭಾಗಕ್ಕೆ ಹಚ್ಚಬೇಕು. ಇದರಿಂದ ನಂಜು ಕಡಿಮೆಯಾಗುತ್ತದೆ. ನಂಜು ಕಡಿಮೆಯಾಗದಿದ್ದಲ್ಲಿ, ಇಂಗಾರದ ಮರದ ಚಕ್ಕೆಯನ್ನು ನಿಂಬೆರಸದಲ್ಲಿ ತೇದು ಕಡಿದ ಭಾಗಕ್ಕೆ ಹಚ್ಚಬೇಕು. ಪಟಿಕವನ್ನು ನೀರಿನಲ್ಲಿ ಕಲಸಿ ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ಗಾಯವನ್ನು ತೊಳೆಯುವುದು. ಕೀವು ಮತ್ತು ರಕ್ತ ಉಳಿಯದಂತೆ ಗಾಯವನ್ನು ಸ್ವಚ್ಛ ಮಾಡುತ್ತಿರಬೇಕು.

ಸೆಲೆ

ಕೆಳಗಿನ ಪದಾರ್ಥಗಳ ಮಿಶ್ರಣವನ್ನು ಕೊಡತಕ್ಕದ್ದು. ವಿಳ್ಳೇದೆಲೆ ತೊಟ್ಟು-4, ಹಾಗಲಸೊಪ್ಪು 1 ಹಿಡಿ, ತೊಂಡೆಸೊಪ್ಪು 1 ಹಿಡಿ, ಬಳ್ಳಿಮರದ ಹಾಲೆ ಸೊಪ್ಪು 1 ಹಿಡಿ, ಆಡುಮುಟ್ಟದ ಸೊಪ್ಪು 1 ಹಿಡಿ, ಬಿಳಿ ಎಕ್ಕೆ

ಹೂ (1 ಗೊನೆ), ಅಜ್ವಾನ (125 ಗ್ರಾಂ) ಮೆಣಸಿನಕಾಳು (11 ರಿಂದ 61 ಕಾಳಿನವರೆಗೆ) ಬಜೇ (4 ಇಂಚಿನ ಬೇರು, 20 ಗ್ರಾಂ) ಬೆಳ್ಳುಳ್ಳಿ ಬೇಳೆ (11) ನೀರುಳ್ಳಿ (ಬಿಳಿ)-2, ಇಂಗು (1 ಪೊಟ್ಟಣ), ಬೆಲ್ಲ (1 ಕುಡಿಕೆ) ಉಪ್ಪು (2 ಚಮಚ), ಚಿರಾಯುತ ಕಡ್ಡಿ, ಹಿಪ್ಪಲಿ ಮೋಡಿ ಮತ್ತು ಸೈಂದ್ರುಲವಣ.

ಮಾಹಿತಿ : ಬಸಳ್ಳಾರ ಚನ್ನಬಸಪ್ಪ, ಸೂಗೂರು, ನಾಟಿವೈದ್ಯರು ಮತ್ತು *ನಾಗರಾಜ,* ಕುರುವ, ಶಿವಮೊಗ್ಗ ಜಿಲ್ಲೆ.

ಕೋಳಿಗಳ ಅತಿಸಾರಕ್ಕೆ

ಅ) ಈರುಳ್ಳಿ ಅಥವಾ ನಿಂಬೆಹಣ್ಣಿನ ರಸವನ್ನು ಆಹಾರದೊಂದಿಗೆ ಕೊಡುವುದು. ಆ) ಅರಿಶಿನ ಪುಡಿಯನ್ನು ತಿನ್ನುವ ಉಪ್ಪಿನೊಂದಿಗೆ ಬೆರೆಸಿ ಕೊಡುವುದು ಅಥವಾ ಈ) 1 ಚಮಚ ಕಳ್ಳನ್ನು (ದೇಶೀಯ ಮದ್ಯ)ವನ್ನು ಕೋಳಿಗಳಿಗೆ ಕುಡಿಸುವುದರಿಂದ ಅತಿಸಾರ ಭೇದಿ ಕಡಿಮೆಯಾಗುತ್ತದೆ.

ಕಾವು ಕೂರದಂತೆ ಮಾಡಲು

ಕೋಳಿಗಳು ಮೊಟ್ಟೆ ಇಟ್ಟೊಡನೆ ಕಾವು ಕೊಡಲು ಕೂರುತ್ತವೆ. ಒಂದು ವೇಳೆ ನೀವು ಮೊಟ್ಟೆಯುಲ್ಲವನ್ನು ತೆಗೆದು ಉಪಯೋಗಿಸಿದರೂ ಕೋಳಿಗಳು ಸುಮ್ಮನೆ 20-25 ದಿನ ಕುಳಿತುಬಿಡುತ್ತವೆ. ಹೀಗಾಗಿ ಮುಂದಿನ ಮೊಟ್ಟೆ ಇಡುವ ಸಮಯ ತಡವಾಗುತ್ತದೆ ಈ ರೀತಿ ಕೂರುವುದನ್ನು ಬಿಡಿಸಲು ಮಂಡ್ಯ ರೈತರದ್ದು ಒಂದು ಉಪಾಯ. ಕೋಳಿ ಮೊಟ್ಟೆ ಇಟ್ಟ ನಂತರ ಅದರ ಮೂಗಿನ ಸಮೀಪ ಒಂದು ರಂಧ್ರ ಮಾಡಿ ಅದರೊಳಗೆ ಒಂದು ಕೋಳಿ ಗರಿಯನ್ನೇ ಸಿಕ್ಕಿಸುತ್ತಾರೆ. ಆಗ ಕೋಳಿಗೆ ಕೂತಲ್ಲಿ ಕೂರಲೂ ಆಗದೆ ನಿಂತಲ್ಲಿ ನಿಲ್ಲಲೂ ಆಗದೇ ಓಡಾಡ ತೊಡಗುತ್ತದೆ. ಒಂದೆರಡು ದಿನಗಳಲ್ಲಿ ಗರಿ ತೆಗೆಯುವುರಂತೆ. ಇದಲ್ಲದಿದ್ದರೆ ಕಾವಿಗೆ ಕೂತ ಕೋಳಿಯನ್ನು ನೀರಿನಲ್ಲಿ ಅದ್ದುತ್ತಾರಂತೆ. ಹಾಗಾಗಿ ಅದು ಚುರುಕಾಗುವುದು ಮತ್ತು ಬೇಗ ಮೊಟ್ಟೆ ಇಡಲು ಪ್ರಾರಂಭಿಸುತ್ತದೆ.

ಮೂಲ : ಹನಿ ಬೀ 9 (1) : 1998

ಶ್ರೀನಿವಾಸ್ ಬಾಲನಕೊಪ್ಪ.

ಕರಾವಳಿಯ ಪದ್ಧತಿಗಳು

ಕೆಚ್ಚಲು ಬಾವಿಗೆ : ದನ ಕರು ಹಾಕಿದ ದಿನದಿಂದ ತೊಡಗಿ 3 ದಿನಗಳವರೆಗೆ ಪ್ರತಿದಿನ 3 ಚಮಚ ಅರಶಿನ ಪುಡಿ ಮತ್ತು 4 ಚಮಚ ತೆಂಗಿನೆಣ್ಣೆ ಹಾಕಿ 150 ಗ್ರಾಂ ಅಕ್ಕಿಯ ಗಂಜಿ ಮಾಡಿ ಕುಡಿಸಿದರೆ ಕೆಚ್ಚಲು ಬಾವು ಬರುವುದನ್ನು ತಡೆಯಬಹುದು. ಎಲ್ಲಾ ದನಗಳಿಗೂ ಕೊಡಬಹುದು.

ಒಂದೊಂದು ಹಿಡಿ ಮದ್ಧರಸನ *(Rejoua dichotoma)* ಕೆತ್ತೆ (ತೊಗಟೆ), ನಂದಿಬಟ್ಟಲು ಗಿಡದ ಎಲೆ, ದಾಸವಾಳದ ಎಲೆ, ನೈಕ್ಕುಳೊವು ಎಲೆ,

ನೀಲಿಸಪ್ಪು, ಚಿರ್‌ದಾಳಿ ಬಳ್ಳಿಯ ಎಲೆ (6 ಬಗೆ) ಸೇರಿಸಿ ಅರೆದು ಕೆಚ್ಚಲಿಗೆ ಲೇಪ ಹಾಕಬೇಕು. 34 ದಿನಗಳೊಳಗೆ ವಾಸಿಯಾದೀತು. ಹಾಲು ಹಿಂಡುವಾಗ ಮೊಲೆಗಳನ್ನು ಮಾತ್ರ ತೊಳೆದುಕೊಂಡರೆ ಸಾಕು. 3 ದಿನ ಆದ ಮೇಲೆ ಕಲಗಚ್ಚು ನೀರಿನಿಂದ ಕೆಚ್ಚಲು ಪೂರ್ತಿಯಾಗಿ ತೊಳೆಯಬೇಕು.

ಕೆಂಪು ಕೆಚ್ಚಲು ಬಾವಿಗೆ : (ಕೆಚ್ಚಲಿಡೀ ಕಡು ಹಳದಿ ಯಾ ನಸುಗೆಂಪಾಗಿರುತ್ತದೆ)

ಕುಂಬಳ ಸೊಪ್ಪು, ಕುಂಬಳ ಮರದ ಎಲೆ, ಒಂದೆಲಗ ಈ ಮೂರನ್ನು ಒಂದೊಂದು ಹಿಡಿ ಸೇರಿಸಿ ಅದಕ್ಕೆರಡು ಚಮಚ ಉಪ್ಪು ಹಾಕಿ ಚೆನ್ನಾಗಿ ಅರೆದು ಕೆಚ್ಚಲಿಗೆ ಆಗಾಗ ಲೇಪಿಸುತ್ತಿರಬೇಕು 4 ದಿನಗಳಲ್ಲಿ ವಾಸಿಯಾದೀತು.

ಪಲ್ಲೆ ಬಾವಿಗೆ : (ಒಂದು ಮೊಲೆಯ ಮೇಲ್ಭಾಗದಲ್ಲಿ ಪಲ್ಲೇಕಾಯಿ (ಗಣಪೆ)ಯ ಹಾಗೆ ಬಾತುಕೊಂಡಿದ್ದರೆ) ನಾಲ್ಕು ಪಲ್ಲೆ ಕಾಯಿ, ಪಲ್ಲೆ ಬಳ್ಳಿಯ ತೊಗಟೆ, ಒಂದು ಹಿಡಿ ಶುದ್ಧ ಸೇಡಿ (ಚೈನಾಕ್ಲೇ) ಮದ್ದರಸನ ಎಲೆ ಒಂದು ಹಿಡಿ ಒಟ್ಟು ಮಾಡಿ 3 ಚಮಚ ಉಪ್ಪು ಸೇರಿಸಿ ಅರೆದು ಅರಾರ ಲೇಪಿಸಬೇಕು. ಗುಣವಾದೀತು.

ಮೊಲೆ ಬೀಗಿದರೆ : (ಇಡೀ ಕೆಚ್ಚಲು ಬೀಗದೆ ಒಂದು ಮೊಲೆ ಮಾತ್ರ ಬಾತರೆ) ನೀಲಿ ಸೊಪ್ಪು, ನಂದಿಬಟ್ಲು ಎಲೆ, ಮದ್ದರಸ ಸೊಪ್ಪು ಒಂದೊಂದು ಹಿಡಿಯಂತೆ ತೆಗೆದುಕೊಂಡು ಅದಕ್ಕೆ 1 ಚಮಚ ಜೀರಿಗೆ ಸೇರಿಸಿ ಅರೆದು ಲೇಪ ಹಾಕಿದರೆ 23 ದಿನದೊಳಗೆ ವಾಸಿಯಾದೀತು.

ಜ್ವರಕ್ಕೆ : (ಆಹಾರ ತಿನ್ನದಿರುವುದು ಮುದುಡಿ ನಿಂತಿರುವುದು ಮುಡೆ ಜ್ವರ ಲಕ್ಷಣ) ಇದಕ್ಕೆ ನಾಣಿಗಲು ಮರದ ಕೆತ್ತೆ ಎದ್ರೋಳಿ ಸೊಪ್ಪು *(Ixora nigricans)* 3 ಹಿಡಿ, ಕೆಂಪು ಕಿಸ್ಕಾರ ಎಲೆ 3 ಹಿಡಿ, ದಡ್ಡಾಲ ಮರದ ಕೆತ್ತೆ 5 ಹಿಡಿ ಒಟ್ಟು ಮಾಡಿ 12 ಕುಡ್ತೆ ನೀರಲ್ಲಿ ಕಷಾಯ ಕುದಿಸಿ 6 ಕುಡ್ತೆಗೆ ಬತ್ತಿಸಿ ದಿನಕ್ಕೆರಡು ಬಾರಿ (ಬೆಳಗ್ಗೆ - ಸಂಜೆ) ಅರ್ಧ ಕುಡ್ತೆ ಪ್ರಕಾರ 3 ದಿನ ಕುಡಿಸಬೇಕು.

ಉಬ್ಬಸ ಜ್ವರಕ್ಕೆ : (ಹೊಟ್ಟೆಯುಬ್ಬರ, ದಪ್ಪ ಶ್ವಾಸ ಬಿಡುವುದು, ಬಾಯಿಗೆ ಬೆರಳಿಟ್ಟರೆ ತುಂಬಾ ಬಿಸಿ ಇರುವುದು) ಇದಕ್ಕೆ ಓಮ 2 ಚಮಚ, ಕರಿಮೆಣಸು 3 ಚಮಚ, 20 ಬೆಳ್ಳುಳ್ಳಿ ಬೀಜ ಈ 3 ಬಗೆ ಅರೆದು 8 ಕುಡ್ತೆ ನೀರಿನಲ್ಲಿ ಕಷಾಯ ಕುದಿಸಿ ಕುಡ್ತೆಗೆ ಬತ್ತಿದಾಗ ಇಳಿಸಿ ತಣಿಸಿ ಬೆಳಗ್ಗೆ-ಸಂಜೆ ಒಂದೊಂದು ಕುಡ್ತೆ ಪ್ರಕಾರ ಕುಡಿಸಬೇಕು. 2 ದಿನ ಒಟ್ಟು 4 ಬಾರಿ.

(ವಿ.ಸೂ. 1 ಲೀಟರ್ = 6 ಕುಡ್ತೆ)

ಕೂರ್ಮ ಜ್ವರ : (ಊಂ..... ಊಂ..... ಎಂದು ನರಳುತ್ತಿರುತ್ತದೆ. ಬಾಯಿಯಲ್ಲಿ ಜೊಲ್ಲು, ಸೆಗಣಿಯಲ್ಲಿ ಲೋಳೆ ಹೆಚ್ಚಿರುತ್ತದೆ.) ಮೊದಲಾಗಿ ಉಪ್ಪು 1 ಚಮಚ, ಗಾಂಧಾರಿ ಮೆಣಸು 2 ಚಮಚ ಹುಡಿ ಮಾಡಿ ಅದನ್ನ ಮೊಳ ಉದ್ದದ ಮುಂಡಿ ದಂಡು ತಂದು ಕಡಿದ ಜಾಗದಲ್ಲಿ ಒಂದು ಹೊಂಡ ಮಾಡಿ ಅದರಲ್ಲಿ ಮೇಲೆ ಹೇಳಿದ ಮದ್ದನ್ನಿಟ್ಟು ದನದ ಬಾಯಿಯೊಳಗೆ ಗಂಟಲಿನವರೆಗೂ ತಳ್ಳಿ 6-8 ಸಲ ಹಿಂದೆ ಮುಂದೆ ಚಲಿಸಬೇಕು. ಆಗ ಕಫವೆಲ್ಲಾ ವಾಂತಿಯಾಗಿ ಹೊರಬೀಳುತ್ತದೆ. ಅನಂತರ ಮೊದಲೆ ಮುಂಡಿ ತೆಗೆದಿಟ್ಟು ಗೇರು ಹಣ್ಣಿನ ರಸ 25 ಮಿ.ಲಿ.ಯಲ್ಲಿ (ಔಂಸು) 4 ಬೆಳ್ಳುಳ್ಳಿ ಬೀಜ ಮತ್ತು 1 ಚಮಚ ಕರಿಮೆಣಸು ಸಹ ಜಜ್ಜಿ ಸೇರಿಸಿ ಕುಡಿಸಬೇಕು. ಪ್ರತಿ 3 ಗಂಟೆಗೊಮ್ಮೆಯಂತೆ ದಿನಕ್ಕೆ 3 ಬಾರಿಯಂತೆ 2 ದಿನ (ಒಟ್ಟು 6 ಬಾರಿ) ಕುಡಿಸಬೇಕು.

ಮೂಲ : ನಿಸರ್ಗ ಲೋಕ, ಡಿಸೆಂಬರ್-97.

ಜ್ವರಕ್ಕೆ ಕೆಲವು ಮನೆ ಔಷಧಿ

• ಚಿಕ್ಕಮಕ್ಕಳಿಗೆ ತುಂಬೆ ಸೊಪ್ಪನ್ನು ಸ್ವಲ್ಪ (ಚಿಟಿಕೆ) ಸುಣ್ಣ, 4-6 ಹನಿ ನಿಂಬೆ ಹುಳಿ, ಚಿಟಿಕೆ ಅರಿಶಿನ ಪುಡಿಯೊಂದಿಗೆ ಸೇರಿಸಿ ರಸವನ್ನು ಹಾಲಿನೊಂದಿಗೆ ಅಥವಾ ಜೇನು ತುಪ್ಪದಲ್ಲಿ ತಿನ್ನಿಸುವುದರಿಂದ ಜ್ವರವಾಸಿಯಾಗುವುದು. ದೊಡ್ಡವರು ಸಹ ಈ ಕಷಾಯವನ್ನು ಹಾಲಿನೊಂದಿಗೆ ಸೇವಿಸುವುದರಿಂದ ಕಾಮಾಲೆ (Jaundice) ರೋಗ ನಿವಾರಣೆಯಾಗುವುದು.

• ಸುಮಾರು ಒಂದು ಊಟದ ಚಮಚದಷ್ಟು ಶ್ರೀ ತುಳಸಿ ರಸದಲ್ಲಿ ಚಿಟಿಕೆ ಮೆಣಸಿನ ಕಾಳು ಪುಡಿಯನ್ನು ಮಿಶ್ರಮಾಡಿ ಸ್ವಲ್ಪ ಜೇನು ತುಪ್ಪ ಸೇರಿಸಿ ದಿನಕ್ಕೆ ಎರಡಾವರ್ತಿಯಂತೆ 3-4 ದಿನ ಸೇವಿಸಿ, ತೆಳುವಾದ ಆಹಾರ ತೆಗೆದುಕೊಳ್ಳಿ ಮತ್ತು ಕುದಿಸಿ ಆರಿಸಿದ ನೀರನ್ನು ಕುಡಿಯುವುದು ಸೂಕ್ತ.

• ಒಂದು ಅರ್ಧ ಬಟ್ಟಲ ನೀರಿಗೆ 1 ಟೀ ಚಮಚ ದಾಲ್ಚಿನ್ನಿ ಚೂರ್ಣ ಮತ್ತು ಒಂದು ಚಿಟಿಕೆ ಕರಿ ಮೆಣಸಿನ ಪುಡಿ ಸೇರಿಸಿ ಚೆನ್ನಾಗಿ ಕುದಿಸಿ. ಈ ಕಷಾಯಕ್ಕೆ ಒಂದು ಊಟದ ಚಮಚ ಜೇನುತುಪ್ಪ ಸೇರಿಸಿ ದಿನಕ್ಕೆ 3 ಬಾರಿ ಸೇವಿಸಿ.

• ಒಂದು ಟೀ ಚಮಚ ನಿಂಬೆ ರಸಕ್ಕೆ ಅಷ್ಟೇ ಪ್ರಮಾಣದಲ್ಲಿ ಬಿಳಿ ಈರುಳ್ಳಿ ರಸವನ್ನು ಬೆರೆಸಿ ದಿನಕ್ಕೆ ಮೂರಾವರ್ತಿಯಂತೆ ಸೇವಿಸಿದರೆ ಗುಣ ಕಂಡುಬರುವುದು.

• 1 ಬಟ್ಟಲು ಕುದಿಯುವ ನೀರಿಗೆ 1 ಚಮಚ ಮೆಣಸು, 1 ಬೆಳ್ಳುಳ್ಳಿ ಕುಟ್ಟಿ, ಹಾಕಿ, 5 ನಿಮಿಷಗಳ ನಂತರ ಕಷಾಯವನ್ನು ಒಲೆಯಿಂದ ಇಳಿಸಿ, ತಿಳಿಯನ್ನು ಬಸಿದು, ಜೇನುತುಪ್ಪದೊಂದಿಗೆ ದಿನಕ್ಕೆ ಮೂರಾವರ್ತಿಯಂತೆ ಸೇವಿಸಿ.

• ಅತಿಯಾದ ಜ್ವರ ಬಂದಿರುವ ರೋಗಿಯ ಹಣೆಯ ಮೇಲೆ ತಣ್ಣೀರಿನಲ್ಲಿ ತೋಯಿಸಿದ ಬಟ್ಟೆಯ ಮಡಿಕೆಯನ್ನು ಇಡುವುದರಿಂದ ರೋಗಿಗೆ ಸ್ವಲ್ಪ ಆರಾಮ ಎನಿಸುವುದು.

ಹೊಟ್ಟೆ ನೋವಿಗೆ

• ಆಲದ (*Ficus bengalensis*) ಎಲೆಯನ್ನು ಸುಟ್ಟು ಬೂದಿ ಮಾಡಿ ತಣ್ಣೀರಿನಲ್ಲಿ ಕಲಸಿ, ಸೋಸಿ ಕೊಡುವುದರಿಂದ ಹೊಟ್ಟೆ ನೋವು ನಿವಾರಣೆಯಾಗುವುದು.

• ಓಣಮೆಣಸಿನ ಬೀಜವನ್ನು ತುಪ್ಪದಲ್ಲಿ ಕಲಸಿ ಒಂದು ಚಮಚ ತಿನ್ನುವುದರಿಂದ ಅಜೀರ್ಣದಿಂದ ಬಂದ ಹೊಟ್ಟೆ ನೋವು ನಿವಾರಣೆಯಾಗುವುದು.

• ಅಡಿಗೆ ಸೋಡ (Soda)ದ ಪುಡಿಯನ್ನು ನೀರಿನಲ್ಲಿ ಸೇರಿಸಿ ರುಚಿಗೆ ತಕ್ಕ ಸಕ್ಕರೆ ಮತ್ತು ನಿಂಬೆ ಹುಳಿಯನ್ನು ಸೇರಿಸಿ ಕುಡಿಯುವುದರಿಂದ ಹೊಟ್ಟೆನೋವು ನಿವಾರಣೆಯಾಗುವುದು.

• ಒಂದು ಚಮಚ ಬೆಣ್ಣೆಯನ್ನು ಒಂದು ಲೋಟ ಬಿಸಿ ನೀರಿನಲ್ಲಿ ಸೇರಿಸಿ ಸೇವಿಸುವುದರಿಂದ ಹೊಟ್ಟೆ ನೋವು ನಿವಾರಣೆಯಾಗುವುದು.

ಕೈಕಾಲು ಉಳುಕಿದಾಗ

• ಬಜೆ (ನಾರಕಿನೆ)ಯನ್ನು ಬಿಸಿ ನೀರಿನಲ್ಲಿ ತೇದು ಹಚ್ಚಿಕೊಳ್ಳುವುದರಿಂದ ಉಳುಕಿನಿಂದ ಉಂಟಾದ ನೋವು ನಿವಾರಣೆಯಾಗುವುದು. ನಂತರ ಎಣ್ಣೆಯಿಂದ ನೀವಿಸಿಕೊಳ್ಳುವುದರಿಂದ ಉಳುಕಿದ ನರವನ್ನು ಮೊದಲಿನ ಸ್ಥಾನಕ್ಕೆ ತರಬಹುದು.

• ನುಣ್ಣನೆಯ ಬೂದಿಗೆ ರಾಗಿ ಕಾಳು ಒಂದು ಚಮಚ ಸೇರಿಸಿ ಬಿಳಿಬಟ್ಟೆಯಲ್ಲಿ ಸುತ್ತಿ ಕಾಲಿಗೆ ಅಥವಾ ಕೈಗೆ ಸುತ್ತಿಕೊಂಡು ತೇವಾಂಶ ಇರುವಂತೆ ಅದರ ಮೇಲೆ ಆಗಾಗ ನೀರು ಸುರಿಯುತ್ತಿದ್ದರೆ ಊದಿದ ಭಾಗವು ಕಡಿಮೆಯಾಗಿ ನೋವು ನಿವಾರಣೆಯಾಗುವುದು.

• ಈರುಳ್ಳಿಯನ್ನು ಸೀಮೆಎಣ್ಣೆಯಲ್ಲಿ ಜಜ್ಜಿ ಹಚ್ಚುವುದರಿಂದ ನೋವು ನಿವಾರಣೆಯಾಗುವುದು.

ತಲೆಸುತ್ತು ನಿವಾರಣೆಗೆ

• ಹುಣಿಸೆ ಹಣ್ಣ (*Tamarindus indica*)ನ್ನು ನೀರಿನಲ್ಲಿ ನೆನಸಿ ಬಂದ ಹುಳಿಗೆ ಒಂದು ಚಮಚ ಜೀರಿಗೆ (*Cuminum cyminum*) ಮತ್ತು ರುಚಿಗೆ ತಕ್ಕ ಬೆಲ್ಲ ಅಥವಾ ಸಕ್ಕರೆ ಸೇರಿಸಿ ಅದನ್ನು 5-6 ದಿನ ಸೇವಿಸುವುದರಿಂದ ತಲೆಸುತ್ತು ನಿವಾರಣೆ ಆಗುವುದು.

• ಒಂದು ಚಮಚ ಜೀರಿಗೆಯನ್ನು ಸ್ವಲ್ಪ ಸುಣ್ಣ (lime) ದೊಂದಿಗೆ ಸೇರಿಸಿ ತಿನ್ನುವುದರಿಂದ ತಲೆಸುತ್ತು ನಿವಾರಣೆಯಾಗುವುದು. ಮಲಗುವ ಮುನ್ನ ತಿಂದು ನೀರು ಕುಡಿಯದೆ ನಿದ್ರಿಸುವುದರಿಂದ ಅತಿ ಬೇಗ ಗುಣವಾಗುವುದು.

• ನಿಂಬೆ ಹಣ್ಣಿನ ಪಾನಕ ಕುಡಿಯುವುದರಿಂದ ತಲೆಸುತ್ತು ನಿವಾರಣೆಯಾಗುವುದು.

ಮೈಮೇಲೆ ಗುಳ್ಳೆಯಾದಾಗ

ಅರಿಶಿನ ಪುಡಿಯನ್ನು ಕೊಬ್ಬರಿ ಎಣ್ಣೆಯಲ್ಲಿ ಸೇರಿಸಿ ಗುಳ್ಳೆಗಳಿಗೆ ಹಚ್ಚುವುದರಿಂದ ಗುಳ್ಳೆಗಳು ವಾಸಿಯಾಗುವವು.

ದಡಾರಕ್ಕೆ ಮದ್ದು

ಬೇವಿನ ಎಲೆಯನ್ನು ಅಂಟು ಬರುವ ರಸವನ್ನು ಮೈಗೆ ಹಚ್ಚಿಕೊಂಡು ಅರ್ಧಗಂಟೆಯ ನಂತರ ಸ್ನಾನ ಮಾಡುವುದರಿಂದ ದಡಾರ, ನಿವಾರಣೆಯಾಗುವುದು.

ಬಾಯಿ ಹುಣ್ಣಿಗೆ

ಕೊಬ್ಬರಿ ಮತ್ತು ಗಸಗಸೆಯನ್ನು ಸೇರಿಸಿ ತಿನ್ನಬೇಕು. ಇದರ ರಸವು ಬಾಯಿಹುಣ್ಣಿಗೆ ತಾಗುವುದರಿಂದ ಶೀಘ್ರದಲ್ಲಿ ಗುಣಮುಖ.

ಆಧಾರ : ಹಿತ್ತಲಗಿಡ ಔಷಧಿ ಪುಸ್ತಕ ಮತ್ತು ವೀರಮ್ಮ, ಮೈಲನಹಳ್ಳಿ

ಸಂಗ್ರಹ : ಬಿ.ಕೆ. ನಾಗರತ್ನ

ತೃತೀಯ ಕೃಷಿ ವಿದ್ಯಾರ್ಥಿನಿ, ಬೆಂಗಳೂರು.

'ಹಿತ್ತಲ ಗಿಡ'ದ ಕುಟುಂಬ

Hony Bee	ಇಂಗ್ಲೀಷ್
Nam Vazhi Velanmai	ತಮಿಳು
Lokasarvani	ಗುಜರಾತಿ
Dzongkha Honey Bee	ಭೂತಾನಿ
Thenetiga	ತೆಲುಗು
Sujh Bujh	ಹಿಂದಿ
Khoj Bhal	ಪಂಜಾಬಿ

ಉಡುಪಿಯಲ್ಲೊಬ್ಬ "ಕಣ್ಣಿನ ಡಾಕ್ಟರ್"

ಲೇಖನ - ಟಿ.ನಾರಾಯಣ ಶರ್ಮ, ಚಿಂತಾಮಣಿ

ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕರ್ನಾಟಕದ ಎಲ್ಲೆಡೆಯಿಂದ ಕಣ್ಣಿನ ಚಿಕಿತ್ಸೆಗಾಗಿ ಬರುವವರೆಲ್ಲ ಡಾ. ಕಿದಿಯೂರು ಗುರುರಾಜ ಭಾಗವತರನ್ನು "ಕಣ್ಣಿನ ಡಾಕ್ಟರ್" ಎಂದು ಕರೆಯುವುದು ಅವರ ಜನಪ್ರಿಯತೆಗೆ ನಿದರ್ಶನ. ಉಡುಪಿಯ ಅಂಬಲಪಾಡಿಯಲ್ಲಿರುವ ತಮ್ಮ ಪುಟ್ಟ ದವಾಖಾನೆಗೆ ಬರುವ ರೋಗಿಗಳನ್ನೆಲ್ಲ ನಗುಮೊಗದಿಂದ ಮಾತನಾಡಿಸಿ, ಪ್ರೀತಿ-ವಿಶ್ವಾಸಗಳಿಂದ ಕಂಡು ಚಿಕಿತ್ಸೆ ನೀಡುವ "ಖ್ಯಾತ ಕಣ್ಣಿನ ಡಾಕ್ಟರ್" ಕಳೆದ 30 ವರ್ಷಗಳಿಂದ ಅವಿಶ್ರಾಂತವಾಗಿ ಸಲ್ಲಿಸುತ್ತಿರುವ ನಿಸ್ವಾರ್ಥ ಸೇವೆ ಇಂದು ವೈದ್ಯಕೀಯ ಕ್ಷೇತ್ರಕ್ಕೆ ಹೊಸ ಆಯಾಮವನ್ನು ತೋರಿಸಿದೆ. ಅಲ್ಲಿಗೆ ಬರುವ ರೋಗಿಗಳ ಅನುಭವದ ಹಿನ್ನೆಲೆಯಲ್ಲಿ ಹೇಳುವುದಾದರೆ ಇವರ ಚಿಕಿತ್ಸೆ ಸರಳ, ಪರಿಣಾಮಕಾರಿ ಮತ್ತು ಕಡಿಮೆ ಖರ್ಚಿನದು. ಕಣ್ಣಿನ ನಾನಾದೋಷಗಳನ್ನು ವೈಜ್ಞಾನಿಕವಾಗಿ ನಿದಾನಿಸಿ ತಮ್ಮದೇ ಆದ ರೀತಿಯಲ್ಲಿ ಚಿಕಿತ್ಸೆ ನೀಡುವುದು ಈ "ಕಣ್ಣಿನ ಡಾಕ್ಟರ್" ಅವರ ಜನಪ್ರಿಯತೆಗೆ ಹಿಡಿದ ಕನ್ನಡಿ. ಒಬ್ಬ ನೇತ್ರ ರೋಗಿಗೆ ಇವರು ತೆಗೆದುಕೊಳ್ಳುವ ಸಮಯ ಒಂದರಿಂದ ಎರಡು ನಿಮಿಷಗಳು. ದಿನವೊಂದಕ್ಕೆ 50 ರಿಂದ ಸುಮಾರು 100 ಮಂದಿಗೆ ಇವರು ಚಿಕಿತ್ಸೆ ನೀಡುತ್ತಾರೆ. ದೂರದ ಪರವೂರುಗಳಿಂದ ಚಿಕಿತ್ಸೆ ಪಡೆಯುವವರು ತಿಂಗಳಿಗೊಂದು ಸಲ ತಮ್ಮನ್ನು ಅವಶ್ಯ ಕಂಡು ಚಿಕಿತ್ಸೆ ಪಡೆಯಬೇಕೆನ್ನುತ್ತಾರೆ. ಡಾ. ಭಾಗವತ್ ಅವರು ರಸೌಷಧಿ, ತೈಲ, ಚೂರ್ಣ, ಲೇಹ್ಯ ಮುಂತಾದ ಪರಂಪರಾಗತ ಆಯುರ್ವೇದ ವಿಧಾನದ ಮೂಲಕ ಚಿಕಿತ್ಸೆ ನೀಡುವುದು ಇವರ ಹೆಚ್ಚುಗಾರಿಕೆ. ಪ್ರತಿದಿನ ಬೆಳಿಗ್ಗೆ 11 ರಿಂದ 2 ರವರೆಗೆ ಕಣ್ಣಿನ ರೋಗಿಗಳಿಗೆ ಚಿಕಿತ್ಸೆ. ಸಂಜೆ 5.30 ರಿಂದ 7.30 ರವರೆಗೆ ಇತರೆ ದೈಹಿಕ-ಮಾನಸಿಕ ಖಾಯಿಲೆಗಳಿಗೆ ಚಿಕಿತ್ಸೆ ನೀಡುವ ಪದ್ಧತಿ ಇದೆ. ಪ್ರತಿ ಗುರುವಾರ ದವಾಖಾನೆಗೆ ರಜೆ.

ಸಂಶೋಧನೆ, ಪ್ರಯೋಗಬುದ್ಧಿ, ಅನುಭವ ಮತ್ತು ಅಧ್ಯಯನವೇ ಆಧಾರವಾಗಿರುವ ಡಾ. ಭಾಗವತರ ಚಿಕಿತ್ಸಾ ಕ್ರಮ ನಿಜಕ್ಕೂ ಅಚ್ಚರಿ ಹುಟ್ಟಿಸುವಂತಹುದು. ಕಲಾಪದವೀಧರರಾಗಿದ್ದವರು ವೈದ್ಯಕೀಯ ರಂಗದಲ್ಲಿ ಯಶಸ್ವಿಯಾಗಿರುವುದು ಅಪರೂಪದ ಸಂಗತಿ. ಆದರೆ ಡಾ. ಭಾಗವತ್ ಅವರು ಇದಕ್ಕೆ ಅಪವಾದ. ಆಯುರ್ವೇದ ಗಿಡಮೂಲಿಕೆಗಳಿಂದ ಸ್ವತಃ ಔಷಧಿ ತಯಾರಿಸಿ ಪರಿಣಾಮಕಾರಿ ಚಿಕಿತ್ಸೆ ನೀಡುವುದಲ್ಲಿ ಸಿದ್ಧಹಸ್ತರಾಗಿರುವ ಡಾ. ಭಾಗವತ್ ಅವರು ಬಡ ಹಾಗೂ ಅಸಹಾಯಕ ರೋಗಿಗಳ ದೃಷ್ಟಿಯಲ್ಲಿ ಅನುಕಂಪ ಹಾಗೂ ಮಾನವೀಯತೆಯುಳ್ಳ ಅಪೂರೂಪದ ವ್ಯಕ್ತಿ. ಇದು ಹೊಗಳಿಕೆಯ ಮಾತಲ್ಲ. ವಾಸ್ತವಿಕ ಸಂಗತಿ.

ಡಾ. ಭಾಗವತ್ ಅವರು ಆಯುರ್ವೇದ ದ್ರವ್ಯ ಗುಣ ಸಾರ ಸಂಗ್ರಹ ಭಾಗ 1 ಮತ್ತು 2 ಮತ್ತು "ಸ್ತ್ರೀ ಪುರುಷಸ್ವಾಸ್ಥ್ಯ ಚಿಂತನ" ಎಂಬ ಎರಡು ಕೃತಿಗಳನ್ನು ಪ್ರಕಟಿಸಿ ಕನ್ನಡಿಗರ ಕೈಲಿಟ್ಟಿದ್ದಾರೆ. ಇಂದಿನ ಅಲೋಪತಿ ಚಿಕಿತ್ಸೆ ಕ್ರಮದ ಮೂಲಕ ಗುಣಪಡಿಸಲಾಗದ ಎಷ್ಟೋ ದೋಷ ಮತ್ತು ಖಾಯಿಲೆಗಳನ್ನು ಗುಣಪಡಿಸಿರುವುದು ಶ್ರೀಯುತರ ಹಸ್ತಗುಣಕ್ಕೆ ಸಾಕ್ಷಿ. ಹತಾಶರಾದ ಸಾವಿರಾರು ಸಂತಾನಹೀನ ದಂಪತಿಗಳು ಇಂದು ಸಂತಾನ ಭಾಗ್ಯ ಪಡೆದು ಸಂತಸದ ಬಾಳ್ವೆ ನಡೆಸುತ್ತಿರುವುದಕ್ಕೆ ಡಾ. ಭಾಗವತ್ ಅವರ ಆಯುರ್ವೇದ ರೀತಿಯ ವಿಶಿಷ್ಟ ಚಿಕಿತ್ಸಾ ಕ್ರಮವೇ ಕಾರಣ. ಇದಕ್ಕೆ ಸಂಬಂಧಿಸಿದ ಹಲವಾರು ದಾಖಲೆಗಳು ಇವರ ಕಡತದಲ್ಲಿ ಕಾಣಲು ಇಂದಿಗೂ ಲಭ್ಯವಾಗಿದೆ. ಇವರನ್ನು ಕನ್ನಡ ನಾಡಿನ ಧನ್ವಂತರಿ ಎಂದು ಉಲ್ಲೇಖಿಸುವುದು ತಪ್ಪಾಗಲಾರದು. "ಕಣ್ಣಿನ ಡಾಕ್ಟರಿ"ಗೆ ಇದುವರೆಗೆ ಸಂದಿರುವ ಪ್ರಶಸ್ತಿ ಪ್ರಶಂಸಾ ಪತ್ರ, ಅಭಿನಂದನೆ ಸನ್ಮಾನ ಸಮಾರಂಭ ಇವುಗಳಿಗೆ ಲೆಕ್ಕವಿಲ್ಲ. ಇಷ್ಟಾದರೂ ಕೀರ್ತಿ, ಹಣ ಮತ್ತು ಪ್ರಚಾರಗಳಿಂದ ದೂರ ಉಳಿದು ಎಲೆಮರೆ ಕಾಯಿಯಂತೆ ಜನರಿಗೆ ಸೇವೆ ಸಲ್ಲಿಸುತ್ತಿರುವ ಶ್ರೀಯುತರ ಸರಳ-ಸೌಜನ್ಯ ಪೂರ್ಣ ಬದುಕು ವೈದ್ಯಕೀಯ ವೃಂದಕ್ಕೆ ಅನುಕರಣೀಯ.

ವಿಳಾಸ : ಡಾ. ಕೆ. ಗುರುರಾಜ ಭಾಗವತ
ಆಯುರ್ವೇದ ಡಾಕ್ಟರ್
ಅಂಬಲಪಾಡಿ, ಉಡುಪಿ - 576103

ಡಾ. ಕುಸುಮಾ ಸೊರಬ - ನೆನಪು

ಹೊನ್ನಾವರ ಕರಾವಳಿ ಹಳ್ಳಿಯ ಸಾಮಾನ್ಯ ಕೃಷಿಕ ಕುಟುಂಬದಿಂದ ಬಂದ ಕುಸುಮಾ ಸೊರಬ ಸ್ವಶ್ರಮದಿಂದ ಮುಂಬೈ ತನಕ ಹೋಗಿ ದಾದಿವೃತ್ತಿ, ವೈದ್ಯಕೀಯ ಕಲಿತು ಡಾ. ಕುಸುಮಾ ಸೊರಬ ಆಗಿ ಊರಿಗೆ ಮರಳಿ ಪರಿಸರ ಪ್ರಜ್ಞೆ, ವಿವಿಧ ಸಮಾಜ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಜನಜಾಗೃತಿ ಮೂಡಿಸಿದರು.

- 1977ರಲ್ಲಿ 'ಸ್ನೇಹಕುಂಜ' ಸಂಸ್ಥೆಯ ಪ್ರಾರಂಭ 1980ರ ಶರಾವತಿ ನೆರೆ, 1982ರ ಶರಾವತಿ ಉಪನದಿಗಳ ನೆರೆಯಲ್ಲಿ ಸಂತ್ರಸ್ತರಿಗೆ ಸಹಾಯಹಸ್ತ.
- ಪರಿಸರ ಉಳಿವಿಗಾಗಿ ಜಾಗೃತಿ ಶಿಬಿರಗಳ ಸಂಘಟನೆ.
- ಉತ್ತರ ಕನ್ನಡ ಜಿಲ್ಲೆಯಲ್ಲಿ ಪರಿಸರದ ಬಗ್ಗೆ ಸ್ಥಿರ ಚಿತ್ರ, ಪ್ರದರ್ಶನ ಸ್ಲಾಯಿಡ್ಸ್, ಹಾಡು, ಸಂಭಾಷಣೆಯ ಕ್ಯಾಸೆಟ್ ಜೊತೆಗೆ.
- 1983 ರಲ್ಲಿ ಕಿರವಳ್ಳಿ ಗ್ರಾಮದಲ್ಲಿ ಹಂಚಿನ ಕಾರ್ಖಾನೆಗೆ ಮಣ್ಣನ್ನು ತೆಗೆಯಲು ವಿರೋಧ ಅಹಿಂಸಾತ್ಮಕ ಚಳವಳಿ.
- ಕಿಂಬಾಲ, ಮಹಿಮೆ, ಸಾಲಕೋಡ ಗ್ರಾಮಗಳಲ್ಲಿ ಹಸಿರು ಮರ ಕಡಿತದ ವಿರುದ್ಧ ಜನ ಸಂಘಟನೆ, ಶರಾವತಿ ನದಿ ಅತಿಕ್ರಮಣ ಮತ್ತು ಅರಣ್ಯ ಭೂಮಿಯ ಅತಿಕ್ರಮಣ ನಡೆಯಲು ಜಾಗೃತಿ ಶಿಬಿರಗಳ ಸಂಘಟನೆ.
- ಹೊನ್ನಾವರ ತಾಲೂಕಿನ ಪರಿಸರ ಕೂಟ, ಸ್ನೇಹ ಕುಂಜ ಮತ್ತು ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಔಷಧೀಯ ಸಸ್ಯವನದ ನಿರ್ಮಾಣ.

ಮಹಾನ್ ಚೇತನ, ಡಾ. ಕುಸುಮಾ ಸೊರಬ ಮಾರ್ಚ 14 (1998)ರ ಮಧ್ಯರಾತ್ರಿ ರಸ್ತೆ ಅಪಘಾತದಲ್ಲಿ ನಿಧನರಾದರು. ಇವರ ಆತ್ಮಕ್ಕೆ ಶಾಂತಿ ಸಿಗಲೆಂದು 'ಹಿತ್ತಲಗಿಡ' ಆಶಿಸುತ್ತದೆ.

ಬೀರೇಶ್ವರನನ್ನು ಒಲಿಸಿಕೊಳ್ಳುವ ಬಿಲ್ವದ ಔಷಧಿ ಉಪಯೋಗಗಳು

ಶಿವರಾತ್ರಿ ಬಂದರೆ ಎಲ್ಲರೂ ಬಿಲ್ವ ಮರ *(Aegle mamelos)* ವನ್ನೆ ಹುಡುಕಿ, ಪತ್ರೆಯನ್ನು ಕಿತ್ತು ಶಿವನ ಪಾದಕ್ಕೆ ಮುಡಿಸಿ, ಮುಕ್ಕಣ್ಣನಿಗೆ ಮೂರು ದಳದ ಪತ್ರೆಯಿಂದ ಪೂಜಿಸುವುದರಿಂದ ಸಂತೃಪ್ತನಾಗುತ್ತಾನೆ ಎಂದು ಪ್ರತೀತಿ. ಈ ಕಾರಣದಿಂದಲೇ ನಮ್ಮ ಪೂರ್ವಜನರು ಸಂಪ್ರದಾಯಿಕವಾಗಿ ಈ ಮರವನ್ನು ಬೆಳೆಸಿಕೊಂಡು ಬಂದಿದ್ದಾರೆ. ಈ ಮರ ದೇವರ ಮರವೆಂದು ಶ್ರಾವಣ ಮಾಸದಲ್ಲಿ ಸೋಮವಾರದ ದಿನ ವಿಶೇಷವಾಗಿ ಪೂಜಿಸಲ್ಪಡುತ್ತದೆ. ಈ ಮರವನ್ನು ಕಡಿದು ಹಾಕುವುದರಿಂದ ದೇವರು ನಮಗೆ ಶಾಪ ಹಾಕುವನು ಎಂಬ ಹೆದರಿಕೆಯಿಂದ ಈ ಮರವು ಒಂದು ವೇಳೆ ಒಣಗಿ ಹೋದರೂ ಅದರ ಕಟ್ಟಿಗೆಯನ್ನು ಉರುವಲಾಗಿ ಬಳಸುವುದಿಲ್ಲ. ಇದರ ಒಣ ಎಲೆಗಳನ್ನು ಸಹ ತುಳಿಯ ಬಾರದೆಂದು ನಂಬಿದ್ದಾರೆ.

ಈ ಮರವನ್ನು ಸೋಕಿ ಬಂದ ಗಾಳಿ ಬಹಳ ಒಳ್ಳೆಯದು, ಆದ್ದರಿಂದ ಆರೋಗ್ಯ ಉತ್ತಮಗೊಳ್ಳುವುದು, ಮನಸ್ಸು ಶಾಂತಚಿತ್ತದಿಂದ ಇರುವುದು ಎಂದು ಹೇಳುವರು. ಈ ದಳಗಳನ್ನು ಬೆಳಿಗ್ಗೆ ಎದ್ದು ತಿನ್ನುವುದರಿಂದ ಆರೋಗ್ಯ ಹಿತವಾಗಿಯೂ, ಮನಸ್ಸು ಮುದವಾಗಿಯೂ, ದಿನವಿಡೀ ಉಲ್ಲಾಸಭರಿತವಾಗಿ ಇರಬಹುದು ಎನ್ನುವರು. ಆದ್ದರಿಂದ ಕೆಲವು ಜನರು ಈ ಮರದ ಪತ್ರೆಯನ್ನು ಕಿತ್ತು ಒಣಗಿಸಿಕೊಂಡು ದಿನಬಳಕೆಗೆ ಉಪಯೋಗಿಸುವರು. ಅಷ್ಟೇ ಅಲ್ಲ ಇದರ ದಳ ಒಣಗಿದ್ದರೂ ಸಹ ದೇವರ ಪೂಜೆಗೆ ಶ್ರೇಷ್ಠವಾದ ಪತ್ರೆ ಎಂದು ಬಳಸುವರು. ಆದ್ದರಿಂದ "ಬೀರೇಶ್ವರನು ಬಿಲ್ವಪತ್ರೆಯಿಂದ ಒಲಿಯುತ್ತಾನೆ." ಎಂಬ ಗಾದೆ ರೂಢಿಯಲ್ಲಿದೆ. ಈ ರೀತಿ ಧಾರ್ಮಿಕ ಬೇಲಿಯ ರಕ್ಷಣೆಯಿಂದ ಉಳಿದಿರುವ ಬಿಲ್ವದ ವೃಕ್ಷ ಹಲವಾರು ಔಷಧಿಯ ಗುಣಗಳನ್ನು ಹೊಂದಿರುವುದನ್ನು ಗ್ರಾಮೀಣ ಜನರು ಕಂಡುಕೊಂಡಿರುವರು.

ಕೇಶವರ್ಧಿನಿಯಾಗಿ ಬಿಲ್ವ : ಬಿಲ್ವದ ಹಣ್ಣಿನ ತಿರುಳನ್ನು ನೀರಿನಲ್ಲಿ ಕುದಿಸಿ ಅದಕ್ಕೆ ಕಡಲೆ ಹಚ್ಚಿಕೊಂಡು, ಅರ್ಧಗಂಟೆಯ ನಂತರ ಸ್ನಾನಮಾಡುವುದರಿಂದ ಕಣ್ಣಿನ ಉರಿ ಉಪಶಮನಗೊಳ್ಳುವುದು, ದೇಹದ ಉಷ್ಣತೆ ತಗ್ಗುವುದು, ಕೂದಲು ಮೃದುವಾಗಿಯೂ, ಸಮೃದ್ಧಿಯಾಗಿಯೂ ಬೆಳೆಯುವುದು, ಕೂದಲಿನ ಕಾಂತಿ ಹೆಚ್ಚುವುದು. ಅಷ್ಟೇ ಅಲ್ಲ ತಲೆ ಹೊಟ್ಟನ್ನು ದೂರವಿಡಬಹುದು. ಇದರಿಂದ ಜ್ವರದ ತಾಪವು ತಗ್ಗುವುದಂತೆ.

ಉಷ್ಣ ಉಪಶಮನವಾಗಿ : ಕಣ್ಣು ಕೆರಳಿ, ಬಿಸಿಲಿನಿಂದ ದೇಹದ ಉಷ್ಣತೆ ಹೆಚ್ಚಾದಾಗ ಬಿಲ್ವದ ಹೂವನ್ನು ಸೌತೇರಸದಲ್ಲಿ ನುಣ್ಣಗೆ ಅರೆದು ಮಲಗುವ ಮುನ್ನ ಎರಡೂ ಕಣ್ಣಿಗೆ ಪಟ್ಟು ಹಾಕುವುದರಿಂದ ಕಣ್ಣಿನ ಉರಿ ಉಪಶಮನವಾಗುವುದು. ರಾತ್ರಿ ಇಡೀ ಹಾಗೇ ಮಲಗಿ, ಬೆಳಿಗ್ಗೆ ಸ್ನಾನ ಮಾಡಿ. ಬಿಲ್ವ ಪತ್ರೆಯ ಹಸಿರೆಲೆಗಳನ್ನು ತಣ್ಣೀರಿನಲ್ಲಿ ಅರೆದು ಕಣ್ಣಿಗೆ ಪಟ್ಟು ಹಾಕುವುದರಿಂದ ನೇತ್ರ ರೋಗ ಉಪಶಮನ ಹೊಂದುವುದಂತೆ.

ಚಳಿ ಜ್ವರ ನಿವಾರಣೆಯಲ್ಲಿ : ಬಿಲ್ವದ ಹೂಗಳನ್ನು ತುಳಸಿ ಎಲೆಗಳೊಂದಿಗೆ ಕುಟ್ಟಿ ರಸ ತೆಗೆದು, ಅದಕ್ಕೆ ಸ್ವಲ್ಪ ಜೇನುತುಪ್ಪ ಬೆರೆಸಿ ದಿನಕ್ಕೆರಡು ಬಾರಿ ಸೇವಿಸುವುದರಿಂದ ಚಳಿ ಮತ್ತು ಜ್ವರ ಕ್ರಮೇಣ ಕಡಿಮೆಯಾಗುವುದು.

ದೇಹದ ದುರ್ಗಂಧ ನಿವಾರಣೆಯಲ್ಲಿ : ಬಿಲ್ವದಳಗಳನ್ನು ನುಣ್ಣಗೆ ಅರೆದು ದೇಹವಿಡೀ ಸವರಿಕೊಂಡು ಸ್ನಾನ ಮಾಡಿದರೆ ಮೈ ದುರ್ಗಂಧ ಬೆವರನ್ನು ದೂರ ತಳ್ಳುವುದು. ಅಲ್ಲದೆ ಚರ್ಮವು ಆರೋಗ್ಯವಾಗಿ ಇರುವುದು, ಚಳಿಯಿಂದ ಶುಷ್ಕ ಚರ್ಮವು ಕೂಡಿಕೊಂಡು ಕಾಂತಿಯುತವಾಗಿ ಇರುವುದು.

ವಾಂತಿ ನಿವಾರಕವಾಗಿ : ಬಿಲ್ವದ ಚಕ್ಕೆಯನ್ನು ನುಣ್ಣಗೆ ಅರೆದು ಅರ್ಧ ಟೀ ಚಮಚ ಚೂರ್ಣವನ್ನು 1 ಚಮಚ ಸಕ್ಕರೆಯೊಂದಿಗೆ ಸೇವಿಸಿ ನೀರು ಕುಡಿಯುವುದರಿಂದ ವಾಂತಿ ನಿವಾರಣೆಯಾಗುವುದಂತೆ.

ಬಿಲ್ವದ ಹಣ್ಣಿನ ಮುರಬ್ಬ : ಚೆನ್ನಾಗಿ ಬಲಿತ ಹಳದಿ ಹಣ್ಣುಗಳನ್ನು ಬಡಿದು, ತಿರುಳನ್ನು ಸಂಗ್ರಹಿಸಿ ಮಣ್ಣಿನ ಜಾಡಿಗೆ ಹಾಕಿ, ಚನ್ನಾಗಿ ಹಿಚುಕುವುದು ಮತ್ತು ಸಮಪ್ರಮಾಣದಲ್ಲಿ ಸಕ್ಕರೆ ಪುಡಿ ಸೇರಿಸಿ 2 ದಿನ ಮುಚ್ಚಿ ಇಟ್ಟು, ಅನಂತರ ಪ್ರತಿದಿನ ಚಮಚ ಮುರಬ್ಬ ತಿಂದು ನೀರು ಕುಡಿಯುವುದರಿಂದ ರಕ್ತ ಬೇಧಿ ವಾಸಿಯಾಗುವುದಂತೆ.

ಹುಳಿ ತೇಗು, ಹೊಟ್ಟೆ ನೋವಿಗೆ : ಬಿಲ್ವದ ಮರದ ಚಕ್ಕೆ, ಬೇವಿನ ಮರದ ಚಕ್ಕೆಯನ್ನು ಚೆನ್ನಾಗಿ ಅರೆದು ಪುಡಿಮಾಡಿ ಹಾಲಿಗೆ ಬೆರೆಸಿ ಕಾಯಿಸಿ ರುಚಿಗೆ ತಕ್ಕ ಸಕ್ಕರೆ ಬೆರೆಸಿಕೊಂಡು ಸೇವಿಸುವುದು.

ಮಧುಮೇಹ : (ಸಕ್ಕರೆ ಕಾಯಿಲೆ) ದಲ್ಲಿ ಪ್ರತಿನಿತ್ಯ ಬೆಳಿಗ್ಗೆ ಬಿಲ್ವದ ದಳಗಳನ್ನು ಚೆನ್ನಾಗಿ ಅರೆದು ತಿನ್ನಿ ಅಥವಾ ಬಿಲ್ವ ದಳದ ರಸವನ್ನು ಅರ್ಧ ಚಮಚ ಸೇವಿಸಿ ಇಲ್ಲವೆ ಕಸ್ತೂರಿ ಅರಿಶಿನ, ಬಿಲ್ವಪತ್ರೆ ಎಲೆ ಮತ್ತು ನೆಲ್ಲಿಚೆಟ್ಟು (ಒಣಗಿದ ನೆಲ್ಲಿಕಾಯಿ)ಯನ್ನು ಸಮಪ್ರಮಾಣದಲ್ಲಿ ತೆಗೆದುಕೊಂಡು, ಚೂರ್ಣ ಮಾಡಿ ದಿನಕ್ಕೆ ಅರ್ಧ ಟೀ ಚಮಚ ಮಜ್ಜಿಗೆಯಲ್ಲಿ ಕದಡಿ ಕುಡಿಯಿರಿ.

ಕೆಮ್ಮು, ದಮ್ಮು - ಶ್ವಾಸಕೋಶದಲ್ಲಿ ಎದೆಯಲ್ಲಿ ಕಫಕಟ್ಟಿದ್ದರೆ ಬಿಲ್ವದ ಎಲೆಗಳನ್ನು ನುಣ್ಣಗೆ ನೀರಿನಲ್ಲಿ ಅರೆದು ಎದೆಗೆ ಲೇಪಿಸಿ, ಎಲೆಗಳನ್ನು ಚೆನ್ನಾಗಿ ಜಜ್ಜಿ, ಬಟ್ಟೆಯಲ್ಲಿ ಸೋಸಿ ತೆಗೆದು, ಈ ರಸವನ್ನು 1 ಟೀ ಚಮಚ ನೀರಿಗೆ ಹಾಕಿಕೊಂಡು ಸೇವಿಸಬಹುದು.

ಅತಿಸ್ರಾವ ಮತ್ತು ಮುಟ್ಟಿನ ಶೂಲೆಯಲ್ಲಿ ಬಿಲ್ವದ ಹಸಿರು ಎಲೆಗಳನ್ನು ನುಣ್ಣಗೆ ಅರೆದು, ರಸ ತೆಗೆದು, ಶೋಧಿಸಿ, 1 ಟೀ ಚಮಚ ರಸಕ್ಕೆ ಸಕ್ಕರೆ ಮತ್ತು ಹಾಲು ಸೇರಿಸಿ ಊಟಕ್ಕೆ ಮುಂಚೆ ಪ್ರತಿನಿತ್ಯ ಎರಡು ಬಾರಿ ಸೇವಿಸಿಬಹುದು

ಶೋಭೆ (ಊತದಲ್ಲಿ) ಹಿಪ್ಪಲಿ *(Piper longum)* ಮೆಣಸು ಸಮತೂಕದಲ್ಲಿ ತೆಗೆದುಕೊಂಡು, ನಯವಾಗಿ ಚೂರ್ಣಿಸಿ ಬಿಲ್ವದ ಎಸಳುಗಳೊಂದಿಗೆಅಥವಾ ರಸದೊಂದಿಗೆ ಸೇವಿಸಿಬಹುದು.

ಸಂಗ್ರಹ : ಬಿ.ಕೆ. ನಾಗರತ್ನ
ತೃತೀಯ ಕೃಷಿ ವಿದ್ಯಾರ್ಥಿನಿ, ಜಿ.ಕೆ.ವಿ.ಕೆ.

ಕರಿಬೇವಿನ ಎಲೆಯ ಪೌಷ್ಠಿಕ ಮೌಲ್ಯ ಮತ್ತು ಔಷಧಿ ಗುಣಗಳು

ಎಸ್. ರೋಹಿಣಿ ಶರ್ಮ, ಅಜ್ಜಂಪುರ

"ಕರಿಬೇವು" ದೈನಂದಿನ ಅಡುಗೆ ಪದಾರ್ಥಗಳಲ್ಲಿ ರುಚಿಯ ವೈವಿಧ್ಯತೆ ನೀಡಿ ಪೌಷ್ಠಿಕ ಮೌಲ್ಯ ಹೆಚ್ಚಿಸುವ ಗುಣಹೊಂದಿರುವ ಸಂಬಾರ ಸಸ್ಯ. ಅಥರ್ವಣವೇದ, ಚರಕ, ಸುಶ್ರುತ ಮುಂತಾದ ಆಯುರ್ವೇದ ಗ್ರಂಥಗಳಲ್ಲಿ ಈ ಎಲೆಯ ಮಹತ್ವ ಮತ್ತು ಉಪಯೋಗದ ಬಗ್ಗೆ ಉಲ್ಲೇಖವಿದೆ. ಇದರ ಎಲೆ, ತೊಗಟೆ ಕಪ್ಪಗಿರುವುದರಿಂದ ವಿಶೇಷಣಯುಕ್ತವಾಗಿ ಕರಿಬೇವು ಎಂದಾಗಿದೆ.

ಇದು ಇಪ್ಪತ್ತು ಅಡಿ ಎತ್ತರದ ಎಲ್ಲಾ ಪ್ರದೇಶದಲ್ಲೂ ಬೆಳೆಯುವ ಬಹುವಾರ್ಷಿಕ ಮರ. ಇದರ ಎಲೆಗಳು ಪರ್ಯಾಯ ರೀತಿಯಲ್ಲಿ ಜೋಡಣೆ ಹೊಂದಿದ್ದು ಒಂದೊಂದು ಎಸಳಿನಲ್ಲೂ ಸುಮಾರು ಒಂಬತ್ತರಿಂದ ಇಪ್ಪತ್ತು ಎಲೆಗಳನ್ನು ಎಣಿಸಬಹುದು. ಈ ಕರಿಬೇವಿನ ಎಲೆಯ ಅಲುಗಿನ ಮೇಲೆ ಇರುವ ಚಕ್ಕೆಗಳಲ್ಲಿ ಸೂಕ್ಷ್ಮವಾದ ಗ್ರಂಥಿ ಇರುವುದರಿಂದ ವಿಶಿಷ್ಟ ಬಗೆಯ ಚಂಚಲ ತೈಲ ನೀಡುತ್ತದೆ. ಈ ಕಾರಣದಿಂದ ಇದರ ಎಲೆಗಳು ಸುಗಂಧಯುಕ್ತವಾಗಿದ್ದು ಅಡುಗೆಗೆ ಬಳಸಿದಾಗ ವಿಶಿಷ್ಟರೀತಿ ರುಚಿಯೂ ಬರುವುದು. ಇದರ ಬಿಳಿ ಬಣ್ಣದ ಹೂ ಹಾಗೂ ಸಿಹಿ ರುಚಿಬೆರೆತ ಕಪ್ಪು ಹಣ್ಣು ನವುರಾದ ಕಂಪನ್ನು ಹೊಂದಿದೆ.

ತಾಜಾ ಎಲೆಗಳನ್ನು ಭಟ್ಟಿ ಇಳಿಸಿದ ಕ್ರಮದಿಂದ ಚಂಚಲತೈಲ ತಯಾರಿಸುತ್ತಾರೆ. ಈ ತೈಲವು ಶುದ್ಧವಾಗಿದ್ದು ಹಳದಿ ಬಣ್ಣದಲ್ಲಿರುತ್ತದೆ. ಸಂಬಾರ ವಾಸನೆ ಹಾಗೂ ಕುಟು ರುಚಿ ಹೊಂದಿರುವ ಈ ತೈಲವನ್ನು ಸುಗಂಧ ದ್ರವ್ಯ ತಯಾರಿಕೆಯಲ್ಲಿ ಬಳಸುತ್ತಾರೆ.

ಕರಿಬೇವಿನಲ್ಲಿ ಅಗಲವಾದ ಎಲೆಗಳುಳ್ಳ ತಳಿ, ಸಣ್ಣ ಎಲೆಗಳ ತಳಿ ಎಂದು ಎರಡು ವಿಧಗಳಿವೆ. ಸಣ್ಣ ಎಲೆ ತಳಿಯಲ್ಲಿ ಸುವಾಸನೆ ಜಾಸ್ತಿ. ಚಂಚಲತೈಲದ ಪ್ರಮಾಣವೂ ಅತಿ ಹೆಚ್ಚು. ಅಡುಗೆಗೆ ಕರಿಬೇವನ್ನು ಬಳಸುವುದರಿಂದ ಕ್ಯಾಲ್ಸಿಯಂ ಎ ಜೀವಸತ್ವ ಧಾರಾಳವಾಗಿ ಆಹಾರದ ಜೊತೆ ಸಿಗುತ್ತದೆ.

ಆಹಾರ ವಿಜ್ಞಾನದ ಸಂಶೋಧನೆಯು ನೂರು ಗ್ರಾಂ ತಾಜಾ ಕರಿಬೇವಿನಲ್ಲಿ ಈ ಕೆಳಗಿನ ಪೋಷಕಾಂಶಗಳಿವೆ ಎಂದು ತಿಳಿಸುತ್ತದೆ.

ತೇವಾಂಶ	63.8 ಗ್ರಾಂ.
ಸಸಾರಜನಕ	6.1 ಗ್ರಾಂ,
ಮೇದಸ್ಸು	1.0 ಗ್ರಾಂ,
ಖನಿಜಾಂಶ	4.0 ಗ್ರಾಂ,
ನಾರಿ ನಾಂಶ	6.4 ಗ್ರಾಂ
ಸಕ್ಕರೆ ಪಿಷ್ಟ	18.7 ಗ್ರಾಂ,
ಕ್ಯಾಲ್ಸಿಯಂ	830 ಮಿಲಿ ಗ್ರಾಂ
ಫಾಸ್ಪರಸ್	57 ಮಿ.ಗ್ರಾಂ,
ಕಬ್ಬಿಣ	4.0 ಮಿ.ಗ್ರಾಂ,
ಥಿಯೋಮಿನ್	0.08ಮಿ.ಗ್ರಾಂ.
ರಿಬೋಪ್ಲಾವಿನ್	0.21 ಮಿ.ಗ್ರಾಂ.
ನಿಯಾಸಿನ್	3.0 ಮಿ.ಗ್ರಾಂ,
'ಎ'. ಜೀವಸತ್ವ	13.58 ಮಿ.ಗ್ರಾಂ.
'ಬಿ'. ಜೀವಸತ್ವ	192.0 ಮಿ.ಗ್ರಾಂ.
'ಬಿ$_2$' ಜೀವಸತ್ವ	192.0 ಮಿ.ಗ್ರಾಂ,
'ಸಿ.' ಜೀವಸತ್ವ	4.0 ಮಿ.ಗ್ರಾಂ.

ಆಹಾರ ಪದಾರ್ಥಗಳ ಮೂಲಕ ಕರಿಬೇವಿನ ಸೊಪ್ಪನ್ನು ಬಳಸುವುದರಿಂದ ರುಚಿಯ ಜೊತೆ, ತಕ್ಕ ಪೋಷಕಾಂಶಗಳು ದೇಹಕ್ಕೆ ಪೂರೈಕೆ ಆಗುವುದು. ಸಾರು, ಸಂಬಾರ, ಇನ್ನಿತರ ಖಾದ್ಯ ಪದಾರ್ಥಗಳಲ್ಲಿ ಕರಿಬೇವಿನ ಎಲೆಗಳನ್ನು ತೇಲಿಬಿಟ್ಟರಾಗದು ಅಗಿದು ತಿನ್ನಬೇಕು. ಆಗ ಅದರ ಸತ್ವ ಸಾರಯುಕ್ತವಾಗಿ ಪೂರೈಕೆಯಾಗುವುದು.

ಔಷಧಿಗುಣಗಳು

ಬಲಿತ ಕರಿಬೇವಿನ ಹತ್ತು ಎಲೆಯನ್ನು ಖಾಲಿ ಹೊಟ್ಟೆಯಲ್ಲಿ ಮೂರು ತಿಂಗಳು ಸೇವಿಸಿದರೆ ಮಧು ಮೇಹ ತಹಬಂಧಿಗೆ ಬರುತ್ತದೆ. ಕೊಬ್ಬು ಬೆಳೆಯುವುದಿಲ್ಲ.

ವಿಷದ ಹುಳು ಕಚ್ಚಿದ ಜಾಗಕ್ಕೆ ಕರಿಬೇವಿನ ಸೊಪ್ಪನ್ನು ಅರೆದು ಹಚ್ಚಿದರೆ ವಿಷ ನಿವಾರಣೆ ಆಗುತ್ತದೆ. ಕಣ್ಣಿನ ಪೊರೆ ಬಾರದಿರಲು, ಕಣ್ಣಿನ ಕಾಂತಿ ವೃದ್ಧಿಸಲು ತಾಜಾ ಕರಿಬೇವಿನ ಎಲೆ ರಸ ಕಣ್ಣಿಗೆ ಬಿಡಬೇಕು.

ಗರ್ಭಿಣಿಯರ ವಾಕರಿಕೆ ವಾಂತಿ ನಿವಾರಣೆಗೆ ತಾಜಾ ರಸಕ್ಕೆ ನಿಂಬೆ ರಸ ಬೆರೆಸಿ ಸೇವಿಸಬೇಕು, ದೇಹದ ಬಳಲಿಕೆ, ಜೀರ್ಣಶಕ್ತಿವೃದ್ಧಿಗೆ ಎಲೆ ಸೇವನೆ ಪರಿಣಾಮಕಾರಿ.

ಕರಿಬೇವಿನ ಎಲೆಯನ್ನು ಶುದ್ಧವಾದ ನೀರಿನಿಂದ ಅರೆದು ಎಳನೀರಿನೊಂದಿಗೆ ಕೊಟ್ಟರೆ ಕಾಮಾಲೆ ವಾಸಿಯಾಗುವುದಂತೆ.

ಹಣ್ಣನ್ನು ಅರೆದು ಸಮ ಪ್ರಮಾಣದ ಲಿಂಬೆ ಹುಳಿ ಬರಸಿ ಕಲ್ಕ ತಯಾರಿಸಿಟ್ಟುಕೊಳ್ಳಬೇಕು. ಇದನ್ನು ಸೊಳ್ಳೆ ಮತ್ತಿತರ ಕ್ರಿಮಿಕೀಟ ಕಚ್ಚಿದ ಜಾಗಕ್ಕೆ ಹಚ್ಚಿದರೆ ಉರಿ ಉಪಶಮನ ವಾಗುತ್ತದೆ. ಬಾಯಿದುರ್ಗಂಧ ದೂರಮಾಡುವ ಗುಣ ಇದಕ್ಕಿದೆ. ವೀರ್ಯವರ್ಧಕವೂ ಹೌದು. ಮೂಳೆಗಟ್ಟಿಯಾಗಲು, ಮಕ್ಕಳಿಗೆ ಹಲ್ಲು ಹುಟ್ಟುವಾಗ ಬರುವ ತೊಂದರೆಗೆ ಕರಿಬೇವಿನ ಎಲೆ ಸೇವನೆ ಪರಿಣಾಮಕಾರಿ.

ಹೊನಗನೆರಸ, ಗರಗದರಸ, ಹಾಲು, ಎಳ್ಳೆಣ್ಣೆ, ಕರಿಬೇವಿನ ಸೊಪ್ಪಿನ ರಸ ಬೆರೆಸಿ ತಯಾರಿಸಿದ ತೈಲವು ಕೇಶವೃದ್ಧಿಗೆ, ಅಕಾಲ ನೆರೆ ನಿವಾರಣೆಗೆ ಉತ್ತಮ ಔಷಧಿ.

ಇವೆಲ್ಲ ಕಾರಣಗಳಿಂದ ಕರಿಬೇವಿನ ಸೊಪ್ಪಿನ ಬಳಕೆ ಪೌಷ್ಠಿಕ ಸತ್ವಾಂಶ ಹೆಚ್ಚಿಸುವುದು, ಮನೆಯಲ್ಲಿ ಒಂದಂಗುಲ ಜಾಗವಿದ್ದರೂ ಸಾಕು ಕರಿಬೇವಿನ ಸೊಪ್ಪು ಮರ ಬೆಳಸಿ, ಬಳಸಿದರೆ ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಲು ಸಾಧ್ಯ.

ಹಿತ್ತಗಿಡಕ್ಕೆ ಮಾಹಿತಿ

ಹಿತ್ತಗಿಡಕ್ಕೆ ಸೂಕ್ತ ಎನಿಸಿದ ವ್ಯಕ್ತಿಗಳು ವಿಚಾರ, ಪದ್ಧತಿ, ಗಾದೆ, ಲಾವಣಿ, ಕತೆಗಳನ್ನು ಬರೆದು ಕಳುಹಿಸಿರಿ. ಸೂಕ್ತ ಮಾಹಿತಿಗಳಿಗೆ ಪ್ರೋತ್ಸಾಹಕರ ಬಹುಮಾನವಿರುತ್ತದೆ.

ಸಂ.

ಜೀವ ವೈವಿಧ್ಯ

ನಾಟಿ ತಳಿ ವೈವಿಧ್ಯಕ್ಕೆ ಮರುಜೀವ

ಅಪರೂಪದ ನಾಟಿ ಬೀಜಗಳ ಸಂರಕ್ಷಣಾ ಕಾರ್ಯಕ್ರಮ ಒಂದರ ವರದಿ

ಪ್ರಕೃತಿಯ ಮೂಲಗುಣ ವೈವಿಧ್ಯ, ಬೀಜಗಳಲ್ಲಂತೂ ಅದು ಅಪಾರ. ಸಾವಿರಾರು ವರ್ಷಗಳಿಂದ ರೈತರು, ತಮ್ಮ ಹೊಲಗದ್ದೆಗಳಲ್ಲಿ ಹಲವು ಬಗೆಯ ಬೀಜಗಳನ್ನು ಬಿತ್ತಿ, ಬೆಳೆದು, ಸಂರಕ್ಷಿಸಿ ಬೀಜ ವೈವಿಧ್ಯವನ್ನು ಪೀಳಿಗೆಯಿಂದ ಪೀಳಿಗೆಗೆ ಸಾಗಿಸಿ ತರುತ್ತಿದ್ದಾರೆ. ಸ್ಥಳೀಯ ಪರಿಸರಕ್ಕೆ ಹೊಂದಿಕೊಳ್ಳುವ, ಕೀಟ, ರೋಗಬಾಧೆ ಎದುರಿಸಿ ನಿಲ್ಲುವ, ಮಳೆಯ ವೈಪರಿತ್ಯವನ್ನು ಸಹಿಸಿ ಬೆಳೆಯುವ ನಾಟಿ ತಳಿಗಳು ರೈತರ ಪಾಲಿಗೆ ಬೆಲೆ ಕಟ್ಟಲಾಗದ ಸಂಪತ್ತು, ಒಮ್ಮೆ ಕಳೆದರೆ ಮತ್ತೆ ಸಿಗಲಾರದ ಮುತ್ತು.

'ಹಸಿರುಕ್ರಾಂತಿ'ಯ ಹೆಸರಲ್ಲಿ ರೈತರ ಹೊಲಕ್ಕೆ ಬಂದ ಆಧುನಿಕ ಕೃಷಿ ತಂತ್ರಗಳು, ಹೈಬ್ರಿಡ್ ಬೀಜಗಳು ವ್ಯವಸಾಯವನ್ನು ದುಬಾರಿಯಾಗಿಸಿರುವುದಲ್ಲದೆ, ಪರಿಸರವನ್ನು ಹಾಳುಗೆಡವುತ್ತಿವೆ, ಹೆಚ್ಚು ಇಳುವರಿ ಕೊಡುವ, ಶೀಘ್ರ ಕಟಾವಿಗೆ ಬರುವ ಹೈಬ್ರಿಡ್ ಬೀಜಗಳ ಬಳಕೆ ದಿನದಿಂದ ದಿನಕ್ಕೆ ಹೆಚ್ಚುತ್ತಾ ಹೋಗುತ್ತಿದೆ, ತಾತ ಮುತ್ತಾತರ ಕಾಲದಿಂದ ಬೆಳೆಯುತ್ತಾ ಬಂದಿದ್ದ ನೂರಾರು ಸ್ಥಳೀಯ ತಳಿಗಳ ಬದಲಿಗೆ, ಇಂದು ರೈತರು ಒಂದೋ ಎರಡೋ ಹೆಚ್ಚು ಇಳುವರಿ ಕೊಡುವ ಹೈಬ್ರಿಡ್ ತಳಿಗಳ ಕೃಷಿಗೆ ಜೋತು ಬಿದ್ದಿದ್ದಾರೆ. ನಾಳೆ ಈ ಹೈಬ್ರಿಡ್ ತಳಿಗಳು ಕಂಡರಿಯದ ಕೀಟ, ರೋಗ, ಬರಗಾಲಕ್ಕೆ ತುತ್ತಾದರೆ ಇದನ್ನು ನಂಬಿದ ರೈತರ ಬದುಕು ಬೀದಿಪಾಲಾಗುವುದರಲ್ಲಿ ಸಂಶಯವಿಲ್ಲ, ಇತ್ತೀಚೆಗೆ ಕೇಳಿಬರುತ್ತಿರುವ ರೈತರ ಆತ್ಮಹತ್ಯೆಯ ಪ್ರಕರಣಗಳು ಇಂಥ ಸಾಧ್ಯತೆಯ ಆರಂಭವಷ್ಟೇ ? ರೈತರ ಪಾಲಿಗೆ, ಮುಂದೆ ಇನ್ನೂ ಕಠಿಣ ಪರಿಸ್ಥಿತಿ ಎದುರಾಗಲಿದೆ,

ರೈತರ ಹೊಲಗಳಲ್ಲಿ ಬೀಜವೈವಿಧ್ಯವನ್ನು ಜೀವಂತವಾಗಿಡಲು, ಅಪರೂಪದ ನಾಟಿ ಬೀಜಗಳನ್ನು ಸಂಗ್ರಹಿಸಿ, ಬೆಳೆಸಿ, ರೈತರಿಗೆ ಹಂಚುವ ಮಹತ್ವದ ಕೆಲಸವನ್ನು ಬೆಂಗಳೂರು ಮೂಲದ GREEN Foundation (Genetic Resource, Energy, Ecology and Nutrition Foundation) ಆರಂಭಿಸಿದೆ. ಕರ್ನಾಟಕ ತಮಿಳುನಾಡು ಗಡಿಯ ಆನೇಕಲ್ ಸಮೀಪದ 'ತಳಿ' ಊರಿನಲ್ಲಿರುವ ಸಂಸ್ಥೆಯ ಜೀವವೈವಿಧ್ಯ ಸಂರಕ್ಷಣಾ ಕೇಂದ್ರದಲ್ಲಿ ನೂರಾರು ಬಗೆಯ ನಾಟಿ ಬೀಜಗಳನ್ನು ಸಂಗ್ರಹಿಸಿ, ಬೆಳೆಸಿ, ಅವುಗಳ ಗುಣ ವಿಶೇಷತೆಯನ್ನು ದಾಖಲು ಮಾಡಲಾಗುತ್ತಿದೆ. ಕಳೆದ ಆರು ವರ್ಷಗಳಿಂದ ಸಂರಕ್ಷಣಾ ಕೇಂದ್ರದಲ್ಲಿ ಉಳಿಸಿ, ಬೆಳೆಸಿದ ಬೀಜಗಳನ್ನು, ರೈತರಿಗೆ, ಹಂಚಿ ಬೀಜಗಳು ರೈತ ರೈತರ ನಡುವೆ ಸೇರಿ ಹೋಗುವ ಪ್ರಯತ್ನ ನಡೆಸಲಾಗುತ್ತಿದೆ.

ಒಣಭೂಮಿ ಭತ್ತ

ಒಣಭೂಮಿ ಭತ್ತದ ತಳಿಗಳು ಇಂದು ಕಾಣಸಿಗುವುದೇ ಅಪರೂಪ, ಒಣಭೂಮಿಯ ತಗ್ಗು ಪ್ರದೇಶಗಳಲ್ಲ, ಮಳೆಗಾಲದಲ್ಲಿ ನೀರು ನಿಲ್ಲುವ ಸಂಭವ ಜಾಸ್ತಿ ಇರುವುದರಿಂದ ರಾಗಿ, ಜೋಳ ಯಾವುದೂ ಇಲ್ಲಿ ಸರಿಯಾಗಿ ಬೆಳೆಯುವುದಿಲ್ಲ. ಅಂಥ ಪ್ರದೇಶಗಳಲ್ಲಿ ಬೆಳೆಯುವ ಸಾಮರ್ಥ್ಯ ಇರುವ ಒಣಭೂಮಿ ಭತ್ತದ ತಳಿಗಳು, ನೀರಾವರಿ ಸೌಕರ್ಯವಿಲ್ಲದ ಒಣಭೂಮಿ ರೈತರ ಅನ್ನದ ಬಟ್ಟಲು. ತಮಿಳುನಾಡು ಮತ್ತು ಕರ್ನಾಟಕದ ಬರಪೀಡಿತ ಪ್ರದೇಶಗಳಿಂದ ಸಂಗ್ರಹಿಸಿ, ಬೆಳೆಸಿದ ಬೀಜಗಳು ತಳಿಯ ಸುತ್ತಮುತ್ತಲಿನ ರೈತರ ಹೊಲಗಳಲ್ಲಿ ಜಾಗಮಾಡಿಕೊಂಡಿವೆ. ಕೆಲವು ಅಪರೂಪದ ಒಣಭೂಮಿ ಭತ್ತದ ತಳಿಗಳ ಪರಿಚಯ ಇಲ್ಲಿದೆ.

ದೊಡ್ಡಿ ಭತ್ತ

ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹಳ್ಳಿಗಳಲ್ಲಿ ಬೆಳೆಸುತ್ತಿದ್ದ ತಳಿ, ಬಲಿಷ್ಠವಾದ ಕಾಂಡ ಹೊಂದಿದ್ದು, ಎತ್ತರಕ್ಕೆ ಬೆಳೆಯುವ ಈ ತಳಿ 135 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಕೀಟ ಮತ್ತು ರೋಗ ಬಾಧೆಯ ಭಯವಿಲ್ಲ. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮವಾದ ಈ ತಳಿಯ ಕೆಂಪು ಅಕ್ಕಿ ಅನ್ನ ಅತ್ಯಂತ ಸ್ವಾದಿಷ್ಟವಾದದ್ದು.

ಮೊಟ್ಟೈಕಾರ್ ಭತ್ತ

ತಮಿಳುನಾಡು ಮೂಲದ, 5 ತಿಂಗಳ ತಳಿ, ಕೀಟ ಮತ್ತು ರೋಗ ಭಾದೆಯ ಭಯವಿಲ್ಲ. ಮಳೆ ಸ್ವಲ್ಪ ವಿಳಂಬವಾದರೂ ತಡೆಯುವ ಶಕ್ತಿ ಇದೆ. ಹೆಚ್ಚು ಇಳುವರಿ ನೀಡುವ, ಕೆಲವೇ ಒಣಭೂಮಿ ಭತ್ತದ ತಳಿಗಳಲ್ಲೊಂದು, ಇದನ್ನು ಬೆಳೆದ ರೈತರೆಲ್ಲಾ ಈ ತಳಿಯನ್ನು ಇಷ್ಟಪಟ್ಟಿದ್ದಾರೆ.

ಮರುಂಡಿ ಭತ್ತ

ಐದು ತಿಂಗಳಿಗೆ ಕೊಯ್ಲಿಗೆ ಬರುವ ಬರ ನಿರೋಧಕ ತಳಿ, ಎತ್ತರವಾಗಿ ಬೆಳೆಯುವ ಈ ತಳಿ, ಗಾಳಿ ಮಳೆಗಳ ಹೊಡೆತವನ್ನು ಸಹಿಸುವ ಶಕ್ತಿ ಹೊಂದಿದೆ, ಕಾಳು ಮತ್ತು ಹುಲ್ಲಿನ ಇಳುವರಿ ಕೂಡ ಉತ್ತಮ. ಕೀಟ ಮತ್ತು ರೋಗ ನಿರೋಧಕ ತಳಿ.

ಬಿಳಿ ಮುಂಡುಗ, ಕರಿಮುಂಡುಗ ಮತ್ತು ಬಿಳಿಮುರುಡಗನ ಭತ್ತ

ಹೆಸರಿನಿಂದ ಸಾಮೀಪ್ಯವಿದ್ದರೂ, ಗುಣದಿಂದ ಬೇರೆಯಾಗಿವೆ. ಉದ್ದ ಕಾಳಿನ *ಬಿಳಿಮುಂಡುಗ* ಅಲ್ಪಾವಧಿ ತಳಿ, ನಾಲ್ಕು ತಿಂಗಳಿಗೆ ಕೊಯ್ಲಿಗೆ ಬರುತ್ತದೆ. ಹುಲ್ಲಿನ ಪ್ರಮಾಣ ಕಡಿಮೆ ಬರ, ಕೀಟ ಮತ್ತು ರೋಗಬಾಧೆಯನ್ನು ಅಷ್ಟಾಗಿ ಪಡೆದುಕೊಳ್ಳಲಾರದು, ನೀರಾವರಿ ಭತ್ತಗಳಂತೆ ಸಣ್ಣ ಕಾಳಿನ ಈ ತಳಿಯ, ಅನ್ನ ರೈತರಿಗೆ ಇಷ್ಟವಾದದ್ದು, ಕಪ್ಪು ಬಣ್ಣದ ಬೀಜಗಳ *ಕರಿ ಮುಂಡುಗ* ಕನಕಪುರ ತಾಲ್ಲೂಕಿನಲ್ಲಿ ಬಳಕೆಯಲ್ಲಿದ್ದ ತಳಿ, ಅಲ್ಪಾವಧಿಯ ಈ ತಳಿ, ಗಾಳಿಯ ಹೊಡೆತಕ್ಕೆ, ತಡೆಯಲಾರದು, ಕಾಳುಗಳು ದಪ್ಪಗೆ, ಮಾಸಲು ಕಪ್ಪು ಬಣ್ಣಕ್ಕಿದ್ದು, ಕೊಯಿಲು ವಿಳಂಬವಾದರೆ ನೆಲಕ್ಕೆ ಬೀಳುತ್ತದೆ, ಕಾಳು ಮತ್ತು ಹುಲ್ಲಿನ ಇಳುವರಿ ಕೂಡ ಸಾಧಾರಣ. ನೀರಾವರಿ ಮತ್ತು ಒಣಭೂಮಿ ಎರಡರಲ್ಲೂ ಬೆಳೆಯಬಹುದಾದ *ಬಿಳಿ ಮುರುಡುಗ* ಚಿತ್ರದುರ್ಗ ಜಿಲ್ಲೆಯದ್ದು, ಸರಿಯಾದ ಪ್ರಮಾಣದಲ್ಲಿ ಕೊಟ್ಟಿಗೆ ಗೊಬ್ಬರ ಕೊಟ್ಟರೆ, ಹೆಚ್ಚು ಇಳುವರಿ ಕೂಡ ನಿರೀಕ್ಷಿಸಬಹುದು. ಸದಾ ತೇವ ಇರುವ ತಗ್ಗು ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆವ ಈ ತಳಿ 5 ತಿಂಗಳಿಗೆ ಕೊಯ್ಲಿಗೆ ಬರುತ್ತದೆ, ಕೀಟ ಮತ್ತು ರೋಗವನ್ನು ಸಹಿಸುವ ಶಕ್ತಿ ಸಾಧಾರಣ, ಎಲೆ ಸುರುಳಿ ಕೀಟದ ಬಾಧೆ ಜಾಸ್ತಿ. ಕನಕಪುರ

ತಾಲ್ಲೂಕಿನಲ್ಲಿ ಈಗಲೂ ಉಳಿದಿರುವ ಮುಂಡುಗ ತಳಿ ಕಾಳು ಮತ್ತು ಹುಲ್ಲಿನ ಇಳುವರಿಗೆ ಪ್ರಸಿದ್ಧಿ, ಇದರ ಕೆಂಪು ಅಕ್ಕಿ ಅನ್ನ ಅತ್ಯಂತ ರುಚಿಕರವಾದದ್ದು.

ಕರುವ್ಯೆ ಕಲಂಜಿ

ಆಕರ್ಷಕ ಹೆಸರಿನ ಒಣಭೂಮಿ ಭತ್ತದ ತಳಿ ಇಳುವರಿಗೆ ಹೆಸರುವಾಸಿ, ಕೀಟ ರೋಗ ಮತ್ತು ಬರನಿರೋಧಕ ಶಕ್ತಿ ಹೊಂದಿದೆ. ಎತ್ತರವಾಗಿ ಬೆಳೆಯುವ ಈ ತಳಿ ಗಾಳಿ ಮಳೆಯ ಹೊಡೆತಕ್ಕೆ ನೆಲಕಚ್ಚುತ್ತದೆ, 5 ತಿಂಗಳಿಗೆ ಕೊಯ್ಲಿಗೆ ಬರುತ್ತದೆ.

ಕಲೋಗಯ

ಆಕರ್ಷಕ ಹಳದಿ ಬಣ್ಣದ ಕಾಳಿನ ತುದಿಯಲ್ಲಿ ಕಪ್ಪು ಮಚ್ಚೆ ಇರುವ ಅಪರೂಪದ ಅಲ್ಪಾವಧಿ ತಳಿ. ನಾಲ್ಕೂವರೆ ತಿಂಗಳಿಗೆ ಕೊಯ್ಲಿಗೆ ಬರುತ್ತದೆ. ಕಾಂಡಕೊರಕ ಕೀಟದ ಹಾವಳಿಗೆ ತುತ್ತಾಗುವ ಕಲೋಗಯದ ತೆನೆಗಳನ್ನು ನೋಡುವುದೇ ಒಂದು ಚೆಂದ.

ಸಾಲುಭತ್ತ

ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಯ ಒಣಭೂಮಿ ಪ್ರದೇಶದ ತಳಿ. ಅತ್ಯಂತ ಕಡಿಮೆ ಮಳೆ ಬೀಳುವ ಪ್ರದೇಶಗಳಿಗೆ ಹೇಳಿ ಮಾಡಿಸಿದ ತಳಿ. ರಾಗಿ ಬೆಳೆ ಮಳೆಯ ಅಭಾವದಿಂದ ನೆಲಕಚ್ಚಿದರೂ, ಸಾಲುಭತ್ತ ತಲೆ ಎತ್ತಿ ನಿಲ್ಲಬಲ್ಲದು 5 ತಿಂಗಳಿಗೆ ಕೊಯ್ಲಿಗೆ ಬರುವ ಈ ತಳಿಗೆ ಕೀಟ ಮತ್ತು ರೋಗವನ್ನು ಎದುರಿಸಿ ನಿಲ್ಲುವ ಶಕ್ತಿ ಇದೆ. ಹುಲ್ಲು ಮತ್ತು ಕಾಳಿನ ಇಳುವರಿ ಸಾಧಾರಣ.

ನೀರಾವರಿ ಭತ್ತ

ನೀರಾವರಿ ಭತ್ತದಲ್ಲಂತೂ ವೈವಿಧ್ಯತೆ ಅಪಾರ, ತಳಿಯ ಎತ್ತರ, ಅವಧಿ, ಕಾಳಿನ ಬಣ್ಣ, ರುಚಿ ಎಲ್ಲವೂ ತಳಿಯಿಂದ ತಳಿಗೆ ಭಿನ್ನ.

ಸುಗದಾಸ್

ಕಂದು ಬಣ್ಣದ ತೆನೆಯ 'ಸುಗದಾಸ್' ತಳಿ ಒಳ್ಳೆಯ ಮೇವಿಗೆ ಹೆಸರಾದದ್ದು, ಬೆಳೆ ಹಾಲು ತುಂಬುವ ಸಮಯದಲ್ಲಿ, ಇಡೀ ಹೊಲವೇ ಬೆಂಕಿ ಹಚ್ಚಿದಂತೆ ಕಾಣುತ್ತದೆ.

ಮೀನ, ದುಪ್ಪನೆಲ್ಲು

ಮೀನ, ದುಪ್ಪನೆಲ್ಲು ಅಪರೂಪವಾಗುತ್ತಿರುವ ಪರಿಮಳದಕ್ಕಿ ತಳಿ, ಸಣ್ಣಕಾಳಿನ, ಉದ್ದಗೊಂಚಲಿನ ಈ ತಳಿಯ ಅಕ್ಕಿಗೆ ಒಳ್ಳೆಯ ಮಾರುಕಟ್ಟೆ ಇದೆ, ರೋಗ ಬಾಧೆಯೂ ಕಮ್ಮಿ, ಇಳುವರಿ ಕೂಡ ಜಾಸ್ತಿ.

ತೂಯ ಮಲ್ಲಿ

5 ತಿಂಗಳಿಗೆ ಕೊಯಿಲಿಗೆ ಬರುವ 'ತೂಯ ಮಲ್ಲಿ' ಹುಲ್ಲು ಮತ್ತು ಕಾಳಿನ ಇಳುವರಿಗೆ ಹೆಸರುವಾಸಿ. ಕೆರೆ ಆಶ್ರಿತ ನೀರಾವರಿ ಗದ್ದೆಗಳಿಗೆ ಹೇಳಿ ಮಾಡಿಸಿದ ತಳಿ. ಎತ್ತರಕ್ಕೆ ಬೆಳೆವ ಈ ತಳಿಗೆ, ರಾಸಾಯನಿಕ ಗೊಬ್ಬರ ಹಾಕಿದರೆ ಸಿಕ್ಕಾಪಟ್ಟೆ ಬೆಳೆದು ನೆಲಕ್ಕೆ ಮಲಗುತ್ತದೆ. ಸಾವಯವ ಪದ್ಧತಿಯಲ್ಲಿ ಬೆಳೆಯಲು ಸೂಕ್ತ ತಳಿ.

ಜೀರಿಗೆ ಸಾಂಬ (ಸುವಾಸನೆ ಭತ್ತ)

ಕಂದು ಬಣ್ಣದ ಕಾಳಿನ ಜೀರಿಗೆ ಸಾಂಬ ಪರಿಮಳದಕ್ಕಿ ತಳಿ. ಕೀಟ ಮತ್ತು ರೋಗ ನಿರೋಧಕ ಶಕ್ತಿ ಸಾಧಾರಣ. ಕಾಳಿನ ಇಳುವರಿ ಕೂಡ ಕಮ್ಮಿ, ಪಲಾವ್ ಮಾಡಲು ಇದರ ಅಕ್ಕಿ ಬಳಸುವುದರಿಂದ, ಮಾರುಕಟ್ಟೆ ಬೇಡಿಕೆ ಇದೆ.

ಕೆಂಪುಭತ್ತ

ಬೇಸಿಗೆ ಬೆಳೆಯಾಗಿ ಬೆಳೆಯುವ, ಅಲ್ಪಾವದಿ ತಳಿ, ಸಾಧಾರಣ ಎತ್ತರ ಬೆಳೆವ ಈ ತಳಿಗೆ, ನೀರಿನ ಅಭಾವವನ್ನು ಎದುರಿಸಿ ನಿಲ್ಲುವ ಶಕ್ತಿ ಇದೆ. ದಪ್ಪ ಕಾಳಿನ, ಗಾಡ ಕಂದು ಬಣ್ಣದ ತಳಿ. ಬೆಂಕಿ ರೋಗದ ಹಾವಳಿ ಹೆಚ್ಚು.

ದೊಡ್ಡ ಬೈರ ನೆಲ್ಲು

ನೀರಾವರಿ ಮತ್ತು ಒಣ ಭೂಮಿ ಎರಡಕ್ಕೂ ಸೂಕ್ತವಾದ ತಳಿ. ಕೆರೆಯಲ್ಲಿ ನೀರು ಕಡಿಮೆ ಇದ್ದಾಗ, ನೀರಿನ ಅಭಾವವನ್ನು ಎದುರಿಸಿ ಉಳಿಯುವ ಗುಣ ಹೊಂದಿದೆ. ಹುಲ್ಲು ಮತ್ತು ಕಾಳಿನ ಇಳುವರಿ ಉತ್ತಮ. ಕೀಟ ಮತ್ತು ರೋಗ ಭಾದೆ ಇಲ್ಲವೇ ಇಲ್ಲ. ಇದರ ಕೆಂಪು ಅಕ್ಕಿ ಅನ್ನ ರೈತರಿಗೆ ಹೆಚ್ಚು ಪ್ರಿಯ.

ನೀರು ಮುಳುಗಣ ಭತ್ತ

ಹೆಸರೇ ಹೇಳುವಂತೆ ನೀರಲ್ಲಿ ಮುಳುಗಿ ಬೆಳೆಯುವ ಈ ಭತ್ತದ ತಳಿ ಕೆರೆ, ಕುಂಟೆ, ಪ್ರವಾಹದ ತೊಂದರೆ ಇರುವ ಪ್ರದೇಶಗಳಲ್ಲಿ ಬೆಳೆಯ ಬಲ್ಲ ತಳಿ. ಸದಾ ನೀರು ನಿಲ್ಲುವ ಪ್ರದೇಶಗಳಲ್ಲಿ, ಮೊದಲ ಮಳೆ ಬಿದ್ದ ತಕ್ಷಣ ಬೀಜ ಎರಚಿದರೆ, ನಂತರದ ಮಳೆಗೆ ನೀರು ಏರಿದಂತೆಲ್ಲಾ, ಈ ಭತ್ತದ ತಳಿ ಕೂಡ ನೀರ ಮೇಲೆ ಬೆಳೆಯುತ್ತಾ ಹೋಗುತ್ತಿದೆ, ತಳಿ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಈ ಜಾತಿ ಇವತ್ತು ಅಪರೂಪವಾಗುತ್ತಿದೆ. ಒಳ್ಳೆ ಪ್ರಮಾಣದ ಹುಲ್ಲು ಮತ್ತು ಕಾಳನ್ನು ನಿರೀಕ್ಷಿಸಬಹುದು. ಕೀಟ ಮತ್ತು ರೋಗ ನಿರೋಧಕ ಶಕ್ತಿಯುಳ್ಳ ಈ ತಳಿ 6 ತಿಂಗಳಿಗೆ ಕೊಯ್ಲಿಗೆ ಬರುತ್ತದೆ.

ಲಕ್ಷ್ಮೀ ಕಾಜಲ್

ಕಪ್ಪು ಬಣ್ಣದ ಬೀಜಗಳ, ಪಶ್ಚಿಮ ಬಂಗಾಳ ಮೂಲದ ತಳಿ, ನೀರಿನಲ್ಲಿ ತೇಲುತ್ತಾ ಬೆಳೆಯುವ ಈ ತಳಿಯನ್ನು ಕೊಯ್ಲು ಮಾಡಲು ದೋಣಿ ಬೇಕೇ ಬೇಕು. ಕೊಯ್ಲಿನ ಕಾಲದಲ್ಲಿ ಕಾಳು ಉದುರಿ ಮತ್ತೆ ಮುಂದಿನ ಬಿತ್ತನೆ ಕಾಲದಲ್ಲಿ ತಾನಾಗೇ ಬೆಳೆಯುತ್ತದೆ. ಸದಾ ನೀರು ನಿಲ್ಲುವ, ಪ್ರವಾಹದ ತೊಂದರೆ ಇರುವ ಪ್ರದೇಶಗಳಿಗೆ ಸೂಕ್ತವಾದದ್ದು, ಧೀರ್ಘಾವದಿ ತಳಿ.

ರಾಗಿ

ಪೌಷ್ಟಿಕಾಂಶ ಮತ್ತು ಬರನಿರೋಧಕ ಗುಣ ಇವೆರಡರಿಂದಲೂ ಸಮೃದ್ಧವಾದ ರಾಗಿಯನ್ನು 'ಬಡವರ ಬಂಧು' ಎಂದೇ ಗುರುತಿಸಲಾಗುತ್ತಿದೆ. ದಕ್ಷಿಣ ಕರ್ನಾಟಕದ ಜನರ ಮುಖ್ಯ ಆಹಾರವಾದ ರಾಗಿ ಮುದ್ದೆ; ರಾಗಿಯನ್ನು ಮಳೆ ಆಶ್ರಿತ ಮುಖ್ಯ ಬೆಳೆಯಾಗಿಸಿದೆ. ನೀರಿನ ಪ್ರಮಾಣ ಕಡಿಮೆ ಇರುವಾಗ ಕೆರೆ ಆಶ್ರಿತ ನೀರಾವರಿ ಪ್ರದೇಶಗಳಲ್ಲಿ ಕೂಡ ಬೆಳೆಸಬಹುದು. ರಾಗಿ ಬೆಳೆಯಲ್ಲಿ ವೈವಿಧ್ಯತೆ ಅಪಾರ. ಪ್ರದೇಶದಿಂದ ಪ್ರದೇಶಕ್ಕೆ, ಮಣ್ಣು, ಹವಾಗುಣಗಳ ಬದಲಾವಣೆಗೆ ತಕ್ಕಂತೆ ರಾಗಿಯಲ್ಲಿ ಕೂಡ ಎಣಿಕೆಗೆ ದಕ್ಕದಷ್ಟು ಬೀಜ ವೈವಿಧ್ಯ ಸಾಗಿ ಬಂದಿದೆ. ಇಂಡಾಫ್ ಬಳಕೆಗೆ ಬಂದ ನಂತರ, ರಾಗಿ ವೈವಿಧ್ಯ ರೈತರ ಹೊಲದಿಂದ ಬಹಳಷ್ಟು ಮಾಯವಾಗಿದೆ. ಇಂದು ನಾಟಿ ರಾಗಿ ತಳಿಗಳನ್ನು ಕಾಣುವುದೇ ಅಪರೂಪವಾಗಿದೆ.

ಕರಿಕಡ್ಡಿ ರಾಗಿ

ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತು ತಮಿಳುನಾಡಿನ ಧರ್ಮಪುರಿ ಜಿಲ್ಲೆಯಲ್ಲಿ ಬಳಕೆಯಲ್ಲಿದ್ದ ಕರಿಕಡ್ಡಿ ರಾಗಿ ಬರಪೀಡಿತ ಒಣಭೂಮಿಗಳಿಗೆ ಹೇಳಿ ಮಾಡಿಸಿದ ತಳಿ, ನಾಲ್ಕೂವರೆ ತಿಂಗಳಿಗೆ ಕೊಯ್ಲಿಗೆ ಬರುವ, ಕೀಟ ರೋಗ ನಿರೋಧಕ ಶಕ್ತಿ ಉಳ್ಳ ಕರಿಕಡ್ಡಿರಾಗಿ ಹುಲ್ಲು ಮತ್ತು ಕಾಳಿನ ಇಳುವರಿಗೆ ಕೂಡ ಹೆಸರುವಾಸಿ, ಹಸಿರು ಕಡ್ಡಿ ರಾಗಿ, ಸಣ್ಣ ಕಡ್ಡಿ ರಾಗಿ ಇವೆಲ್ಲಾ ಕರಿಕಡ್ಡಿ ರಾಗಿಯ ಹತ್ತಿರದ ತಳಿಗಳು, ಹೆಚ್ಚು ಕಮ್ಮಿ ಇವೆಲ್ಲಾ ಕರಿಕಡ್ಡಿಯ ಗುಣಗಳನ್ನು ಹೊಂದಿದೆ.

ಕೋಣ ಕೊಂಬಿನ ರಾಗಿ

ಉದ್ದನಾದ ತೆರೆದ ತೆನೆಯ ತಳಿ, ಚಿತ್ರದುರ್ಗ, ತುಮಕೂರು ಜಿಲ್ಲೆಯಲ್ಲಿ ಬಳಕೆಯಲ್ಲಿದ್ದ ಈ ತಳಿ ಇಂದು ಹೆಚ್ಚು ಕಮ್ಮಿ ಇಲ್ಲವಾಗಿದೆ. ಕೆರೆ ಆಶ್ರಿತ ಪ್ರದೇಶಗಳಲ್ಲಿ ಬೇಸಿಗೆ ಬೆಳೆಯಾಗಿ ಬೆಳೆಯಲು ಸೂಕ್ತವಾದ ಈ ತಳಿ, ಒಣಭೂಮಿಯಲ್ಲಿ ಕೂಡ ಬೆಳೆಯ ಬಲ್ಲದು, ಕಾಳುಗಳು ತುಂಬಾ ಗಟ್ಟಿ, ಇಣುಕು ರೋಗ(Neck blast)ಕ್ಕೆ ಸುಲಭವಾಗಿ ತುತ್ತಾಗುವ ಈ ತಳಿ, ನಾಲ್ಕೂವರೆ ತಿಂಗಳಿಗೆ ಕೊಯ್ಲಿಗೆ ಬರುತ್ತದೆ, ಹುಲ್ಲಿನ ಪ್ರಮಾಣ ಮತ್ತು ಗುಣಮಟ್ಟ ಉತ್ತಮ. ಬಿಳಿಬಣ್ಣದ ಕಾಳಿನ, ಮೂರುವರೆ ತಿಂಗಳಿಗೆ ಕೊಯ್ಲಿಗೆ ಬರುವ ಮಜ್ಜಿಗೆ ರಾಗಿ ನೀರಾವರಿ ಪ್ರದೇಶಕ್ಕೆ ಸೂಕ್ತವಾದ ತಳಿ, ಮಜ್ಜಿಗೆ ಬಣ್ಣದ ಕಾಳನ್ನು ಹೊಂದಿದ ಈ ತಳಿಯನ್ನು ದೋಸೆ, ಇಡ್ಲಿ ಮಾಡಲು ಬಳಸಬಹುದು. ಸಾಧಾರಣ ಎತ್ತರದ ಈ ತಳಿಗೆ ಕೀಟ ಮತ್ತು ರೋಗ ಬಾಧೆ ಕೂಡ ಕಮ್ಮಿ.

ದೊಡ್ಡ ತೆನೆ ರಾಗಿ

ಉಗಾಂಡ ಮೂಲದ, ಗುಂಡು ತೆನೆಯ ಕೀಟ ಮತ್ತು ರೋಗ ನಿರೋಧಕ ತಳಿ, ರಾಗಿಗೆ ಸಾಮಾನ್ಯವಾಗಿ ಕಾಡುವ ಇಣುಕು ರೋಗ ಈ ತಳಿಗೆ ಬರುವುದೇ ಇಲ್ಲ, ಹುಲ್ಲು ಮತ್ತು ಕಾಳಿನ ಇಳುವರಿ ಜಾಸ್ತಿ, ರೈತರು ಇಷ್ಟಪಟ್ಟ ಈ ತಳಿ ಬರಪೀಡಿತ ಒಣಭೂಮಿಗೆ ಹೇಳಿ ಮಾಡಿಸಿದ ತಳಿ.

ಗುಟ್ಟೇಕಿಂದಲ ರಾಗಿ

ಮಧುಗಿರಿ, ಹಿಂದೂಪುರ ಪ್ರದೇಶದ ನೀರಾವರಿ ಆಶ್ರಿತ ತಳಿ, ಮೂರುವರೆ ತಿಂಗಳಿಗೆ ಕೊಯ್ಲಿಗೆ ಬರುವ ಗುಂಡು ತೆನೆಯ ಈ ತಳಿ ಇಳುವರಿಗೆ ಹೆಸರುವಾಸಿ, ಬರಗಾಲದ ಹೊಡೆತ ತಾಳಲಾರದು, ರೋಗ ಮತ್ತು ಕೀಟ ನಿರೋಧಕ ತಳಿ.

ತೈದಲು

ಹಳೆ ಹೈದರಾಬಾದ್ ಮೂಲದ ನಾಲ್ಕು ತಿಂಗಳ ಮಳೆ ಆಶ್ರಿತ ತಳಿ, ಗುಂಡು ತೆನೆಯ, ಬರ ನಿರೋಧಕ ತಳಿ, ಕೀಟ ಮತ್ತು ರೋಗ ಬಾಧೆ ಇಲ್ಲ. ಹುಲ್ಲಿನ ಇಳುವರಿ ಸಾಧಾರಣ, ಕಾಳಿನ ಇಳುವರಿ ಉತ್ತಮ.

ಮೂರು ತಿಂಗಳ ರಾಗಿ

ಕೀಟ, ರೋಗ ಮತ್ತು ನಿರೋಧತೆ ಹೊಂದಿದ ಅಲ್ಪಾವಧಿ ತಳಿ. ಒಳ್ಳೆಯ ಇಳುವರಿ ನೀಡಬಲ್ಲ ತಳಿ. ಇದರ ಇಳುವರಿಯನ್ನು ಯಾವುದೇ ಹೆಚ್ಚು ಇಳುವರಿ ಕೊಡುವ ಮಿಶ್ರತಳಿಯೊಂದಿಗೆ ಹೋಲಿಸಬಹುದು.

ಹುಲ್ಲುಪೊರೆ ರಾಗಿ

ನಾಲ್ಕೂವರೆ ತಿಂಗಳಿಗೆ ಕೊಯ್ಲಿಗೆ ಬರುವ, ಮಳೆ ಆಶ್ರಿತ ಪ್ರದೇಶಕ್ಕೆ ಸೂಕ್ತವಾದ ತಳಿ. ಕೆಂಪು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಹುಲ್ಲು ಮತ್ತು ಕಾಳಿನ ಇಳುವರಿ ಸಾಧಾರಣ, ಕೀಟ ಮತ್ತು ರೋಗ ಬಾಧೆ ಕಮ್ಮಿ.

ಕರಿಮುರುಡುಗನ ರಾಗಿ

ಚಿತ್ರದುರ್ಗ ಮೂಲದ, ಮೂರೂವರೆ ತಿಂಗಳ ತಳಿ, ಕಡಿಮೆ ಮಳೆ ಬೀಳುವ ಪ್ರದೇಶಕ್ಕೆ ಸೂಕ್ತವಾದದ್ದು, ಕೊಟ್ಟಿಗೆ ಗೊಬ್ಬರ ಜಾಸ್ತಿಕೊಟ್ಟಷ್ಟೂ ಇಳುವರಿ ಕೂಡ ಜಾಸ್ತಿ ಬರುತ್ತದೆ. ಕೀಟ ಬಾಧೆ ಕಮ್ಮಿ.

ಐಯ್ಯನ ರಾಗಿ

ಹಳೆ ಮೈಸೂರು ಪ್ರದೇಶದಲ್ಲಿ ಬೆಳೆಯುತ್ತಿದ್ದ ತಳಿ, ಇಂದು ಅಪರೂಪವಾಗುತ್ತಿದೆ. ತೆರೆದ ತೆನೆಯ, ಉದ್ದ ಇಣುಕಿನ ಈ ತಳಿಗೆ ಇಣುಕುರೋಗ (Neck blast) ದ ಕಾಟ ಜಾಸ್ತಿ, ಹುಲ್ಲಿನ ಪ್ರಮಾಣ ಜಾಸ್ತಿ, ಕಾಳಿನ ಇಳುವರಿ ಸಾಧಾರಣ.

ಜೋಳ

ಕಪ್ಪು ಮಣ್ಣಿನಲ್ಲಿ ಹುಲುಸಾಗಿ ಬೆಳೆವ ಜೋಳದಲ್ಲಿ, ವೈವಿಧ್ಯತೆ ಅಗಾಧವಾಗಿದೆ. ಕೆಂಪುಮಣ್ಣಿನಲ್ಲಿ, ರಾಗಿಯ ಜೊತೆಗಿನ ಸಾಲು ಬೆಳೆಯಾಗಿ ಬೆಳೆಯುವ ಜೋಳದ ತಳಿಗಳು ಕಾಳಿಗಿಂತ, ದನದ ಮೇವಾಗಿ ಹೆಸರುವಾಸಿ.

ಪುಲಿಯಂಗುಡಿ ಜನ್ನಲು

ಎರಡು ಮೀಟರ್ ಎತ್ತರಕ್ಕೂ ಮೀರಿ ಬೆಳೆವ ಪುಲಿಯಂಗುಡಿ ಜನ್ನಲು ಮೇವಿಗೆ ಹೇಳಿ ಮಾಡಿಸಿದ ತಳಿ. ಕೆಂಪು ಬಣ್ಣದ ಆಕರ್ಷಕ ಕಾಳಿನ ಈ ತಳಿಯ ಕಾಳು ತಿನ್ನಲು ಬರುವುದಿಲ್ಲ. ಗಿಳಿಗಳ ಕಾಟ ವಿಪರೀತ, ಧಾರಾಳವಾಗಿ ದನದ ಮೇವು ಬೀಳುತ್ತದೆ.

ಬಿಳಿ ಜೋಳ

ಮೇವು ಮತ್ತು ಕಾಳು ಎರಡಕ್ಕೂ ಹೆಸರಾದ ಬಿಳಿ ಜೋಳ ತೆರೆದ, ಗೊಂಚಲು ಮಾದರಿ ತೆನೆಯ ತಳಿ, ಇದರ ಕಾಳನ್ನು ನುಚ್ಚಾಗಿ, ರಾಗಿ ಮುದ್ದೆ ಮಾಡಲು ಬಳಸುತ್ತಾರೆ, ಜೋಳದ ದಂಟು ಮೃದುವಾಗಿರುವುದರಿಂದ ದನಗಳಿಗೆ ಪ್ರಿಯವಾದ ಆಹಾರ.

ಪಾಲುಕೊಂಡ ಜೊನ್ನಲು ಮತ್ತು ಪಚ್ಚೆ ಜೊನ್ನಲು

ರೊಟ್ಟಿಗೆ ಬಳಕೆಯಾಗುವ ಪಾಲುಕೊಂಡ ಜೊನ್ನಲು ಮತ್ತು ಪಚ್ಚೆ ಜೊನ್ನಲು ಕಪ್ಪು ಮಣ್ಣಿನಲ್ಲಿ ಮಾತ್ರ ಬೆಳೆಯುವ ತಳಿಗಳು, ದುಂಡು ತೆನೆ, ಸಾಧಾರಣ ಎತ್ತರ ಈ ತಳಿಗಳು, ಇಂದು ಅಪರೂಪವಾಗುತ್ತಿದೆ.

ರಂಗು ಜೋಳ ಮತ್ತು ಕೆಂಪು ಜೋಳ

ರಂಗು ಜೋಳ ಮತ್ತು ಕೆಂಪು ಜೋಳ ಕನಕಪುರದ ಕೆಂಪು ಮಣ್ಣಿಗೆ ಸೂಕ್ತ ತಳಿಗಳು ಮಳೆ ಜಾಸ್ತಿಯಾದರೂ ತಡೆವ ಶಕ್ತಿ ಇದೆ. ಮೇವಿಗೆ ಬಳಕೆಯಾಗುತ್ತದೆ. ರಾಗಿ ಮತ್ತು ಕಡಲೆ ಹೊಲದಲ್ಲಿ ಸಾಲು ಬೆಳೆಯಾಗಿ ಇದನ್ನು ಬಳೆಯಬಹುದು.

ಜಿ. ಕೃಷ್ಣಪ್ರಸಾದ್
ಜೀವವೈವಿಧ್ಯ ಸಂರಕ್ಷಣಾ ಕೇಂದ್ರ
ಮಾರುಪಲ್ಲಿ, ತಳಿ ತಮಿಳುನಾಡು.

ಮರಗಳೂ, ದೇವರೂ ಹಾಗೂ ಅನುಭವ

ವಾಲ್ಮೀಕಿ ಶ್ರೀನಿವಾಸ ಅಯ್ಯಂಗಾರ್. ಅಗ್ನಿಗ್ರಾಮ, ಹಾನಬಾಳ ಅಂಚೆ, ಹಾಸನ ಜಿಲ್ಲೆ - 577 119

ದೂರದ ಮಹಾರಾಷ್ಟ್ರದ ವಿದರ್ಭ ಪ್ರದೇಶದಲ್ಲಿರುವ ಗಿರಿಗಳ ನಡುವೆ ಈ ಹಿಂದೆಯಿದ್ದ ವನದ ವೃಕ್ಷ ಸಂಪತ್ತು ನಾಶವಾಗಿ, ಕಡು ಬೇಸಿಗೆ, ಅತಿ ಕಡಿಮೆ ಮಳೆ, ಅತಿ ಛಳಿ ಇವುಗಳಿಂದ ಈ ಪ್ರದೇಶದ ಜನರು ಪಡುತ್ತಿರುವ ಜಲಕ್ಷಾಮ, ನಿಸರ್ಗ ಸಂಪತ್ತಿನ ಕ್ಷಾಮ, ಅತಿ ಪರಾವಲಂಬನೆ ಇವುಗಳನ್ನು ಪರಿಹರಿಸಿಕೊಳ್ಳಲು ವನ ಸಂರಕ್ಷಣೆ, ವನದ ಅಗತ್ಯತೆಗಳನ್ನು ಕಂಡು ಕೊಂಡಿರುವುದನ್ನು ಕಂಡು ನನಗೆ ಬಹಳ ಆನಂದವಾಯಿತು. ಗ್ರಾಮಸ್ಥರು ವನ ಸಂರಕ್ಷಣೆ ಮಾಡಿಕೊಳ್ಳಲು ದೈವ ಚಿಂತನಾ ಮಾರ್ಗವನ್ನು ಬಯಸಿದುದರಿಂದ, ವನ ದೇವತಾ ಸಂಬಂಧವನ್ನು ನನಗೆ ತಿಳಿದ ಹರುಕು-ಮುರುಕು ಹಿಂದಿ ಮಿಶ್ರಿತ ಮರಾಠಿ ಭಾಷೆಯಲ್ಲಿ ವಿವರಿಸಿದೆನು. ಗ್ರಾಮಸ್ಥರು ವನ-ದೇವತಾ ಪೂಜೆ ಮಾಡಲು ಬಯಸಿ, ಅದರ ವಿಧಿ-ವಿಧಾನ ಹಾಗೂ ದಿನವನ್ನು ನಿಶ್ಚಯಿಸಲು ಕೋರಿದುದರಿಂದ ವೈಶಾಖ ಶುದ್ಧ ದಶಮಿಯಂದು ನೆರವೇರಿಸಲು ತಿಳಿಸಿದೆನು. ಗ್ರಾಮಸ್ಥರು ತಾವೇ ಈ ವನ ದೇವತಾ ಪೂಜೆ ಮಾಡಲು ತಿಳಿಸಿದಾಗ, ಮೊದಲು ಅವರು ಒಪ್ಪಿದರೂ ಸಹ, ನಾನು ಸ್ವಗ್ರಾಮ ಅಗ್ನಿಗೆ ತೆರಳಿದ ನಂತರ, ಮೇಷ ಮಾಸದಲ್ಲಿ, ವನದೇವತಾ ಪೂಜೆಗೆ ಬರಲೇಬೇಕೆಂಬ ಒತ್ತಾಯ ಬಂದಿತು. ತಂಪಾಗಿರುವ ಬೇಸಿಗೆಯನ್ನು ಅಗ್ನಿಯಲ್ಲಿ ಕಳೆಯಲು ಮನಸ್ಸಿದ್ದರೂ ಸಹ, ಜನರ ಒತ್ತಾಯವನ್ನು ಕಡೆಗಣಿಸಲಾಗದೆ, ವೈಶಾಖ ಮಾಸವನ್ನು ಕಡುಬೇಸಿಗೆಯಿರುವ ಖೋರದದಲ್ಲಿ ಕಳೆಯಬೇಕಾಯಿತು.

ನಿಗದಿತ ದಿನವಾದ 5-5-1998 ರಂದು ಶುಕ್ಲ ಪಕ್ಷದ ದಶಮಿಯ ಚಂದ್ರನ ಬೆಳಕಿನಲ್ಲಿ ವನದೇವತಾ ಪೂಜೆಯನ್ನು ನಡೆಸಲು ಗ್ರಾಮದ ಜನರು ಬಲು ಉತ್ಸುಕರಾಗಿದ್ದರು. ಅಂದು ಸೂರ್ಯಾಸ್ತ ಕಾಲಕ್ಕೆ ಸ್ವಲ್ಪ ಮುಂಚೆ ವನದಲ್ಲಿರುವ ಕೆರೆಗೆ ಹೋಗಿ ಎಲ್ಲರೂ ಮಿಂದೆವು. ಇದೊಂದು ಸಾಮೂಹಿಕ ಸ್ನಾನವಾಗಿದ್ದು, ಕೆರೆಯೂ ಸಹ ವಿಶಾಲವಾಗಿದ್ದು, ನೀರು ತುಂಬಿದ್ದುದರಿಂದ ನಮಗಾದ ಆನಂದಕ್ಕೆ ಮಿತಿಯೇ ಇಲ್ಲ. ಆ ಕೆರೆಯ ಸಮೀಪದಲ್ಲಿಯೇ ಇರುವ ಒಂದು ಸಾಮಾನ್ಯ ಎತ್ತರವಿರುವ ಆಲದ ಮರವೇ ವನದೇವತಾ ವೃಕ್ಷವಾಯಿತು. ಇಲ್ಲಿ ಜನರಿಗೆ ಬಂದೊಡನೆ ತಕ್ಷಣ ಬಿಸಿಲಿನ ಝಳ ಕಡಿಮೆಯಾಗಿ, ತಂಪಾದ ಅನುಭವವಾಯಿತು. ಈ ಮರದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಮೂರೂ ದೇವರೂ ಇದ್ದಾರೆಂಬ ನಂಬಿಕೆಯಿದೆ. ಈ ದೈವ ಸಾನ್ನಿಧ್ಯವೇ ನಮಗೆ ತಂಪು ನೀಡುತ್ತದೆ. ಇಷ್ಟು ಸುಲಭವಾಗಿ ಲಭಿಸುವ ಈ ತಂಪನ್ನು ಅನುಭವಿಸಲು ನಾವೇಕೆ ಚಿಂತಿಸಬಾರದು. ಕೃತಕ ತಂಪುಕಾರಕ ಯಂತ್ರ ಹವಾನಿಯಂತ್ರಕಗಳ ಅಗತ್ಯವೇ ನಮಗಿರಲಿಲ್ಲ. ಇಲ್ಲಿ ತಾನಾಗಿಯೇ ಹುಟ್ಟಿ ಬೆಳೆಯುತ್ತಿರುವ ತೇಗ ಮತ್ತು ಮುತ್ತುಗದ ಮರಗಳ ಸಂಖ್ಯೆಯೇ ಅಗಣಿತ. ಇದಕ್ಕೆ ಜೊತೆಯಾಗಿ ಅತ್ತಿ, ಮಾವು, ಹಿಪ್ಪೆ, ಬೇವು, ಹೊಂಗೆ ಹಾಗೂ ಅನ್ಯ ಜಾತಿಯ ಮರಗಳ ಸಂಖ್ಯೆಯೂ ಸಹ ಅಗಣಿತ, ಆದರೆ, ಹಣವೆಂಬಾವುದೋ ಮಾಯೆಗೆ ಸಿಲುಕಿದ ಮಾನವನು ದೇಶದ ಇತರೆಡೆಯಂತೆ, ಇಲ್ಲಿಯೂ ಸಹ ಅಲ್ಪ ಹಣಕ್ಕಾಗಿಯೋ, ಇನ್ನೇನೋ ಆಸೆಗಾಗಿಯೋ ಈ ಮರಗಳನ್ನು ಕಡಿಯುತ್ತಾ ಬಂದಿದ್ದು, ಈಗಿನ ಸ್ಥಿತಿಯಲ್ಲಿ ಕುಡಿಯುವ ನೀರಿಗೂ ಬವಣೆ ಪಡುತ್ತಿದ್ದಾನೆ. ಇಂತಹ ಪರಿಸರದಲ್ಲಿ ಜನರು ಈಗಲಾದರೂ ಸ್ವಲ್ಪ ಮಟ್ಟಿಗೆ ಎಚ್ಚೆತ್ತುಕೊಂಡು ಮರಗಳ ಅಗತ್ಯತೆ, ಅವುಗಳಲ್ಲಿರುವ ದೇವತೆಗಳ ಅನುಗ್ರಹ ಹಾಗೂ ಶಾಪ ಇವುಗಳನ್ನು ಮನಗಾಣುತ್ತಿರುತ್ತಾರೆ. ನಮ್ಮ ಪ್ರಾಚೀನ ಗ್ರಂಥಗಳೂ ಸಹ ಈ ವಿಚಾರವನ್ನು ಹೇಳಿರುತ್ತವೆ. ಉದಾಹರಣೆಗೆ ಅಶ್ವತ್ಥ ವೃಕ್ಷದಲ್ಲಿ ಗುರುವು ಇರುವುನೆಂದೂ, ಹಲಸು ಮರದಲ್ಲಿ ವಿಶ್ವೇದೇವ ಇರುವನೆಂದೂ, ಇತ್ಯಾದಿ ವೃಕ್ಷ ದೈವ ಋಷಿ ಗ್ರಹ ವಿಚಾರವಿದೆ. ಹೀಗೆ ಜನರು ಮರಗಳ ಅವಶ್ಯಕತೆ, ಅದರಲ್ಲಿರುವ ದೇವರು ದೇವತೆಗಳ ಬಗ್ಗೆ ತಿಳಿಯಲು ತಾವಾಗಿಯೇ ಕೋರಿದ್ದು, ನನ್ನ ವಿಚಾರವೂ ಸಹ ಯಾವುದಾದರೂ ವಿಧಾನದಲ್ಲಾಗಲೀ ವೃಕ್ಷ ಸಂರಕ್ಷಣೆಯ ದೃಷ್ಟಿಯಿರುವುದರಿಂದ, ಅವರಿಗೆ ವೃಕ್ಷಾದೇವತಾ ಸಂಬಂಧವನ್ನು ತಿಳಿಸಲು ಉತ್ಸುಕನಾದೆನು.

ಶ್ರೀ ಜಗದೀಶ ಚಂದ್ರ ಬೋಸರು ಸಸ್ಯ, ಗಿಡ, ಮರಗಳೂ ಸಹ ಜೀವಂತ ವಸ್ತುಗಳೆಂದು ತೋರಿಸಿಕೊಟ್ಟಿದ್ದಾರೆಂದು ವಿಜ್ಞಾನಿ ಪಂಡಿತ ವರ್ಗದವರು ತಿಳಿಸಿರುತ್ತಾರೆ. ಆದರೆ, ನಮ್ಮ ದೇಶದ ಬಹಳಷ್ಟು ಮಂದಿಗೆ ಆಧುನಿಕ ವಿಜ್ಞಾನವೆನ್ನುವುದು ಕಬ್ಬಿಣದ ಕಡಲೆಯಾಗಿರುವುದರಿಂದ, ಸಸ್ಯ ವರ್ಗಗಳ ಜೀವ ಸಂಗತಿಯನ್ನು ಸಸ್ಯ ದೈವ ವಿಧಾನದಲ್ಲಿ ನಮ್ಮ ಸಂಪ್ರದಾಯವು ತಿಳಿಸಿರುತ್ತದೆ. ಈ ವಿಚಾರವನ್ನೇ ನಾನು ವಿದರ್ಭ ಪ್ರಾಂತ್ಯದ ಖೋರದ ಗ್ರಾಮ ವಾಸಿಗಳಿಗೆ ತಿಳಿಸಿದುದು. ಈ ವಿಚಾರವನ್ನು ಅನೇಕರು ಅರಿತುಕೊಂಡು ವೃಕ್ಷಗಳಿಗೆ ಪೂಜೆಮಾಡುತ್ತಾ, ಅದನ್ನು ಸಂರಕ್ಷಿಸುತ್ತ, ಅವುಗಳನ್ನು ಕಡಿಯುವ ವಿಧಾನವನ್ನು ಕೈಬಿಟ್ಟರು. ಕರ್ನಾಟಕದ ದಕ್ಷಿಣಭಾಗದ ಹಳೇ ಮೈಸೂರು ಪ್ರಾಂತ್ಯದಲ್ಲಿ ಬೆಳೆಯುವ ಮುತ್ತುಗದ ಮರದ ಉಪಯೋಗ ಈಗೆಷ್ಟು ಮಂದಿಗೆ ಗೊತ್ತು? ಈ ಮುತ್ತುಗವನ್ನು 'ಅಗ್ನಿ' ದೇವತಾ ವೃಕ್ಷವೆಂದು ಹೇಳುತ್ತಾರೆ. ಇದರ ಉಪಯೋಗ ಹೀಗೆ. ಇದು ವಸಂತ ಋತುವಿನ ಬೇಸಿಗೆಯಲ್ಲಿ ಚಿಗುರಿ ಎಲೆ ಬಿಡುತ್ತದೆ. ವೈಶಾಖ-ಜ್ಯೇಷ್ಠ ಮಾಸಗಳಲ್ಲಿ ಇದರ ಎಲೆಗಳನ್ನು ಸಂಗ್ರಹಿಸಿ, ಮನೆಯ ಅಟ್ಟದಲ್ಲಿಡಲಾಗುತ್ತದೆ. ಬೇಕಾದಾಗ ಈ ಎಲೆಯನ್ನು ನೀರಿನಲ್ಲಿ ನೆನಸಿ, ಊಟಕ್ಕಾಗಿ ಎಲೆ ಹಚ್ಚುತ್ತಾರೆ. ಬೇಸಿಗೆಯಲ್ಲಿ ಈ ಮರವು ಎಲೆಯಿಂದ ತುಂಬಿದ್ದು, ತಂಪನ್ನು ನೀಡುತ್ತದೆ. ಮಳೆಗಾಲದಲ್ಲಿ ಎಲೆಯು ಬಲಿತಿರುತ್ತದೆ. ಗುಡುಗು-ಮಿಂಚುಗಳ ಸಮಯದಲ್ಲಿ ಈ ಮರಕ್ಕೆ ಯಾವ ಉಪದ್ರವವೂ ಆಗಲಾಗದುದರಿಂದ, ಗುಡುಗು-ಮಿಂಚುಗಳ ರಕ್ಷಣೆಗಾಗಿ ಜನರು ಈ ಮರದಡಿಯಲ್ಲಿ ಹೋಗಿ ನಿಲ್ಲುವುದು ಒಂದು ಪದ್ಧತಿ. ಈ ಮರದ ಒಣಗಿದ ಕಾಷ್ಠಗಳನ್ನು ಯಾಗ-ಹವನ-ಹೋಮಾದಿಗಳಲ್ಲಿ ಸಮಿತ್ತನ್ನಾಗಿ ಬಳಸುತ್ತಾರೆ. ಈ ಮರದ ಸಮಿತ್ತು ವಾತಾವರಣದಲ್ಲಿಯ ವಾಯುವನ್ನು ಶುದ್ಧಗೊಳಿಸುತ್ತದೆಂದು ಹೇಳುತ್ತಾರೆ. ಇಂತಹ

ಉಪಕಾರಿ ಮರವು ತಾನಾಗಿಯೇ ಬೆಳೆಯುತ್ತಿದ್ದು, ಈ ಖೋರದ ಗ್ರಾಮದ ಜನರು ಈ ಮರದ ಉಪಯೋಗವೇ ತಿಳಿದಿರಲಿಲ್ಲವೆಂದರೆ ನನಗಾದ ಅಚ್ಚರಿ ಅಷ್ಟಿಷ್ಟಲ್ಲ. ಅವರಿಗೆ ಅದರ ಬಹುಪಯೋಗವನ್ನು ತಿಳಿಸಿದರೂ ಅರ್ಥವಾಗಲಿಲ್ಲ. ನಾನೇ ಸ್ವತಃ ಎಲೆಗಳನ್ನು ಕಿತ್ತು ಒಣಗಿಸಿ, ಮತ್ತೆ ನೀರಿನಿಂದ ಅದನ್ನು ಸರಿಮಾಡಿ, ಎಲೆ ಹಚ್ಚಿ ತೋರಿಸಿದ ನಂತರವಷ್ಟೇ ಅವರಿಗೆ ಅದರ ಉಪಯೋಗದ ಅರಿವಾದದ್ದು. ಹಾಗೆಯೇ ಸುಡು ಬಿಸಿಲಿನಲ್ಲಿ ಆ ಮರದಡಿ ಕುಳಿತು ತಂಪನ್ನು ಅನುಭವಿಸಿದ್ದು.

ಈ ಗ್ರಾಮದಿಂದ ಸುಮಾರು ಒಂದು ಮೈಲಿಯಷ್ಟು ದೂರವಿರುವ ವಿಶಾಲವಾದ ಕೆರೆಯಿಂದ ಒಂದೆರಡು ಗ್ರಾಮಗಳಿಗೆ ಬೇಸಿಗೆಯಲ್ಲಿ ನೀರು ಸರಬರಾಜಗುತ್ತದೆ. ಈ ಕೆರೆಯಿಂದ ಖೋರದ ಗ್ರಾಮದ ಭಾವಿ, ಕೊಳವೆ ಭಾವಿಗಳಲ್ಲಿ ಅಂತರ್ಜಲ ಮಟ್ಟ ಕುಸಿದಿಲ್ಲ. ಬೇರೆಡೆ ಜಲಕ್ಷಾಮವಿದ್ದರೆ, ಇಲ್ಲಿನ್ನೂ ಆ ಪರಿಸ್ಥಿತಿಯಿಲ್ಲ. ಈ ಕೆರೆಯನ್ನು ಸಮೀಪದ ಯಾವ ಗ್ರಾಮಸ್ಥರೂ ಬಳಸುತ್ತಿರುವುದನ್ನು ನಾನು ಕಾಣಲಿಲ್ಲ. ಈ ಬೇಸಿಗೆಯಲ್ಲಿ ನನಗೆ ತಂಪು ನೀಡುವ ಆಸರೆಯೆಂದರೆ ಕೆರೆಯಾಗಿತ್ತು. ನಾನು ಅಲ್ಲಿಗೆ ಹೋದ ದಿನದಿಂದ ವಾಸ್ತವ್ಯವಿದ್ದ ದಿನದವರೆವಿಗೂ ಪ್ರತಿದಿನ ಪ್ರಾತಃಕಾಲ, ಸಂಧ್ಯಾಕಾಲ ಸ್ನಾನಗಳು ಕೆರೆಯಲ್ಲಿಯೇ ಆಗುತ್ತಿತ್ತು ನನ್ನನ್ನು ಈ ಕೆಲಸದಲ್ಲಿ ಹಿಂಬಾಲಿಸಿದ ಯುವಕರು ಇದರಿಂದ ತಮಗಾದ ಅನುಕೂಲಗಳಿಗೆ, ಈ ಕೆರೆಯನ್ನು 'ಉಳಿತಾಯ ಬ್ಯಾಂಕು' ಎಂದು ಕರೆದರು. ಏತಕ್ಕೆಂದರೆ, ಹಲ್ಲುಪುಡಿ, ದಂತಕಾಷ್ಠ, ಸಾಬೂನು, ಪಾನೀಯ ಇವುಗಳ ನೇರವಾದ ಉಳಿಕೆ ಹಾಗೂ ಪ್ರತಿದಿನ ಅವರಲ್ಲಿರುತ್ತಿದ್ದ ಉತ್ಸಾಹ ಕೆರೆಯ ದಡದಲ್ಲಿಯ ಹುತ್ತದ ಮಣ್ಣೆ ಎಲ್ಲರಿಗೂ ಹಲ್ಲುಪಡಿ ಹಾಗೂ ಸಾಬೂನು, ಬೇವಿನ ಎಲೆ, ಕಡ್ಡಿ, ಸುಬಾಬುಲ್‌ನ ಕಡ್ಡಿ ಇವುಗಳೇ ದಂತಕಾಷ್ಟಗಳು. ಕೆರೆಯ ನೀರೇ ಬೆಳಗಿನ 'ಚಹಾ' ಇನ್ನು ಬೆಳಿಗ್ಗೆ ಐದು ಘಂಟೆಗೆ ಕೆರೆಗೆ ಹೋಗುತ್ತಿದ್ದುದರಿಂದ ಬೆಳಿಗ್ಗೆ ಏಳು ಘಂಟೆಗೆ ಇತರ ಕೃಷಿ ಕೆಲಸ ಕಾರ್ಯಗಳಲ್ಲಿ ತೊಡಗುವಿಕೆ. ಸ್ನಾನಕ್ಕೆಂದು ಬಾವಿಯಿಂದ ನೀರು ತರುವ ಶ್ರಮ ಹೆಂಗಸಿರಿಗಿಲ್ಲದುದರಿಂದ ಅವರಿಗೆ ಸ್ವಲ್ಪ ನೆಮ್ಮದಿ.

ಈ ಕೆರೆಯ ಸಾಮೂಹಿಕ ಸ್ನಾನವು ಎಲ್ಲರಿಗೂ ಆನಂದ ನೀಡಿತ್ತೆಷ್ಟೆಂದರೆ, ಅಕಾಲ-ವೃದ್ಧರೂ ಸಹ ತಾವಾಗಿಯೇ ಬರುತ್ತಿದ್ದುದು.

ನಿಶ್ಚಿತ ದಿನದಂದು ಸಂಜೆ ಕೆರೆಯಲ್ಲಿ ಸಾಮೂಹಿಕ ಸ್ನಾನದ ನಂತರ ಗಂಗಾ ಪೂಜೆಯಾಯಿತು. ನಂತರ, ವನ ದೇವತಾ ಪೂಜೆ. ಈ ಪೂಜೆಯನ್ನು ಅಲ್ಲಿ ಸೇರಿದವರೆಲ್ಲರೂ ಮಾಡಬೇಕೆಂಬ ಪದ್ಧತಿಯನ್ನು ನಾನು ಸೂಚಿಸಿದೆ. ಹಾಗೆಯೇ ಪ್ರತಿಯೊರ್ವರೂ ಮರದಲ್ಲಿನ ಶಾಂತ ಹಸೆಯ ದೈವಾನುಗ್ರಹವನ್ನು ಪಡೆಯಲು ಸಹ ಅನುಕೂಲವಾಗಿದ್ದಿತು. ನಂತರ ಬೇಯಿಸದೆ ಮಾಡಿದ ಸಿಹಿ ತಿಂಡಿಯ ನೈವೇದ್ಯ ಹಾಗೂ ಪ್ರಸಾದ ವಿನಿಯೋಗ. ಇದು ನಿಜಕ್ಕೂ ಹೇಳಬೇಕೆಂದರೆ, ಗಿರಿಜನರು ಬೆಳದಿಂಗಳಿನಲ್ಲಿ ಮಾಡುವ ಸಾಮೂಹಿಕ ಪೂಜೆ ಹಾಗೂ ಭೋಜನ. ಕಾಡಿನಲ್ಲಿ ಬೆಂಕಿ ಹಚ್ಚಬಾರದೆಂಬ ನನ್ನ ಮನವಿಗೆ ಪುರಸ್ಕರಿಸಿ, ಗ್ರಾಮಸ್ಥರೇ ಮಾಡಿದ ಅಕ್ಕಿಹಿಟ್ಟು, ನೆಲಗಡಲೆ ನುಚ್ಚು, ಯಾಲಕ್ಕಿ ಬೀಜ, ಜೇನುತುಪ್ಪ ಹಾಕಿ ಕಲಸಿ ಮಾಡಿದ ಸಿಹಿ ಉಂಡೆ. ಇದು ಎಷ್ಟು ಸ್ವಾದಭರಿತವಾಗಿತ್ತೆಂದರೆ, ಎಲ್ಲರಿಗೂ ಈ ಪ್ರಸಾದದಿಂದ ತೃಪ್ತಿಯಾಯಿತು. ಈ ಪ್ರದೇಶದಲ್ಲಿ ತೆಂಗಿನಕಾಯಿ ಬೆಳೆಯದುದರಿಂದ, ಅದಕ್ಕೆ ಪರ್ಯಾಯವಾಗಿ ನೆಲಗಡಲೆಯನ್ನು ಕಲ್ಲುಪತ್ತಿನಲ್ಲಿಯೋ ಒರಳಿನಲ್ಲಿಯೋ ಕುಟ್ಟಿ, ಅದರ ನುಚ್ಚನ್ನು ಬಳಸುತ್ತಾರೆ.

ಈ ಖೋರದ ಗ್ರಾಮದ ವನದೇವತಾ ಪೂಜೆಯ ವಿಷಯ ತಿಳಿದ ಇತರ ಗ್ರಾಮಸ್ಥರೂ ಸಹ ವನದೇವತಾ ಪೂಜೆಯನ್ನು ತಾವೂ ಮಾಡಲು ಮುಂದೆ ಬಂದರು. ಖೋಡಪಾಖಂಡಿ, ನಿಂಘಾವನ ಗ್ರಾಮದ ಜನರೂ ಸಹ ಬೇರೊಂದು ದಿನದಂದು ಬಂದು ಗಂಗಾಸ್ನಾನ, ವನದೇವತಾ ಪೂಜೆ ಮಾಡಿದರು. ಅದರಲ್ಲಿಯೂ ಮಹಿಳೆಯರಿಗೆ ಈ ಸಮಾರಂಭದಲ್ಲಿ ಭಾಗವಹಿಸಲು ಬಹಳ ಆನಂದವಾಯಿತು.

ಹೀಗೆ ವನದೇವತೆಗೆಂದು ಮೀಸಲಾದ ಈ ಕಾಡಿನಲ್ಲಿ ಪಕ್ಕದ ನಾಂಜಾಗ್ರಾಮದ ಯಾರೋ ಯುವಕರು ಅವಿವೇಚನೆಯಿಂದ ಮರವನ್ನು ಕಡಿದುದು ನಮಗೆ ತಿಳಿಯಿತು. ಆ ಗ್ರಾಮಸ್ಥರಲ್ಲಿ ಓರ್ವ ಪ್ರಮುಖನಿಗೆ ಈ ವಿಚಾರವನ್ನು ತಿಳಿಸಿದ ನಂತರ, ಅಂದೇ ಸುಡು ಬಿಸಿಲಿನಲ್ಲಿ ಆರು ಜನ ಯುವಕರು ನಾನು ಕುಳಿತಿದ್ದ ಹವಾ ನಿಯಂತ್ರಣ ಅರಳೀ ಮರದ ಬಳಿ ಬಂದರು. ತಮ್ಮ ಪರಿಚಯ ಮಾಡಿಕೊಂಡು, ತಾವೇ ಆ ಮರವನ್ನು ಕಡಿದುದೆಂದೂ, ಮದುವೆಯ ಮಂಟಪಕ್ಕೆಂದು ಕಡಿದುದಾಗಿಯೂ, ತಮಗೆ ಈ ವಿಚಾರ ತಿಳಿಯದೆಂದೂ, ಇನ್ನು ಮುಂದೆ ತಾವು ಈ ಕಾರ್ಯ ಮಾಡುವುದಿಲ್ಲವೆಂದೂ ನಾನು ಅವರನ್ನು ಕ್ಷಮಿಸಬೇಕೆಂದೂ ನನ್ನಲ್ಲಿ ಮನವಿ ಮಾಡಿದರು. ನಾನು ಅವರ ಸರಳ ಹಾಗೂ ನೇರ ನುಡಿಯನ್ನು ಗೌರವಿಸಿ, ಮರಗಳ ದೇವತಾ ಸಂಬಂಧವನ್ನು ವಿವರಿಸಿ, ಅವುಗಳಿಂದ ಹವಾ ನಿಯಂತ್ರಣ ಲಾಭವನ್ನು ಅನುಭವಿಸ ತಿಳಿಸಿದ ನಂತರವಷ್ಟೇ ಅವರಿಗೆ ಮರಗಳ ಬಗ್ಗೆ ಅರಿವಾದುದು. ಅವರನ್ನು ಸಹ ತಾವು ಮರ ಕಡಿಯುವುದಿಲ್ಲವೆಂದು ಶಪಥಮಾಡಿಸಿ, ಅರಳೀ ವೃಕ್ಷಕ್ಕೆ ಅವರಿಂದಲೇ ಪೂಜೆ ಮಾಡಿಸಿ, ಅವರನ್ನು ಕ್ಷಮಿಸಿ ಕಳುಹಿಸಿದೆನು.

ಈ ಘಟನೆಯಾದ ನಂತರ ಸುತ್ತ ಮುತ್ತಲಿನ ಗ್ರಾಮಸ್ಥರೆಲ್ಲರಿಗೂ ಮರಗಳ ಅವಶ್ಯಕತೆಯ ಅರಿವಾಗಿ, ತಮ್ಮ ಹೊಲಗಳಲ್ಲಿರುವ ಮರಗಳನ್ನು ಕಡಿಯಲಾರವೆಂದು ಅವರೇ ತೀರ್ಮಾನಿಸಿದರು. ಹಾಗೆಯೇ ವನದೇವತೆಯಿರುವ ಕಾಡಿನಲ್ಲಿ ಸಹ ತಾವು ಮರ ಕಡಿಯಲಾರೆವೆಂದವರು ಶಪಥ ಮಾಡಿದರು.

ಹೀಗೆ ದೇವರ ಕಾಡಿನ ಸೃಷ್ಟಿಯ ಕೆಲಸ ನನ್ನಿಂದ ಈ ಸಲದ ಖೋರದ ಪ್ರವಾಸದಲ್ಲಾಯಿತು. ಮರದ ಬಗ್ಗೆ ಜನರಿಗೆ ಅರಿವಾದುದು ಅವರಿಂದ ತಾನಾಗಿಯೇ ತಿಳಿದು ಬಂದಿತು. ಇದು ನಿಜಕ್ಕೂ ಸಂತೋಷದ ವಿಷಯವಾಯಿತು. ಈ ರೀತಿಯ ಕಾರ್ಯವು ಇನ್ನೂ ಎಷ್ಟಾಗಬೇಕೋ ?

ವಿ.ಸೂ. : ಲೇಖಕರ ಬಳಿ ಹಸು ಮತ್ತು ತಾಯಂದಿರ ಹಾಲು ಹೆಚ್ಚಿಸಲು ಸಹಾಯವಾಗುವ ಶತಾವರಿ ಗೆಡ್ಡೆ ಲಭ್ಯವಿರುತ್ತದೆ. ಆಸಕ್ತರು ಐಯ್ಯಂಗಾರ್‌ರವರನ್ನು ಸಂಪರ್ಕಿಸಬಹುದು.

ವೃಕ್ಷಾಯುರ್ವೇದ

ಲೇ. ಸುರಪಾಲ (ಸಂಸ್ಕೃತ) ಅನು : ನಳಿನಿ ಸಾಧಲೆ (ಇಂಗ್ಲೀಷ್)

Asian Agri History Foundation, 47th ICRISAT Colony-I Brig. Sayeed Road, Secundarabad - 9. Andhra Pradesh.

ಪ್ರಾಚೀನ ಭಾರತದಲ್ಲಿ ಕೃಷಿ ವಿಜ್ಞಾನ ಹೇಗಿತ್ತು ಎಂದು ತಿಳಿಯಲು ಹಲವು ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿದೆ. ಹೆಚ್ಚು ಜನರಿಗೆ ತಲುಪಿಸಲು ಸುರಾಪಾಲನ ವೃಕ್ಷಾಯುರ್ವೇದವು ಬೃಹತ್ ಸಂಹಿತೆ ಮತ್ತು ಉಪವನ ವಿನೋದಕ್ಕಿಂತ ಹೇಗೆ ಭಿನ್ನವಾಗಿದೆ ಎಂದು ವಿವರಿಸಿದ್ದಾರೆ. ಓದುಗರ ಅನುಕೂಲಕ್ಕೆ ಮೂಲ ತಾಳೆ ಗರಿಯನ್ನು, ಸ್ಕ್ಯಾನ್ ಮಾಡಿ ಮುದ್ರಿಸಲಾಗಿದೆ. ವೃಕ್ಷಗಳ ಮಹತ್ವ ಯಾವ ಮರಗಿಡಗಳು ಮನೆಯ ಯಾವ ದಿಕ್ಕಿನಲ್ಲಿರಬೇಕು, ಮಣ್ಣು, ಗಿಡ ಎಬ್ಬಿಸುವಿಕೆ, ನಾಟಿಕ್ರಮ, ಬೀಜೋಪಚಾರ, ನಾಟಿ ಸಮಯ, ಪಾಲನೆ, ತೋಟಗಾರಿಕಾ ಅದ್ಭುತಗಳು, ಭೂಜಲದ ನೈಸರ್ಗಿಕ ಕುರುಹುಗಳು, ಮಂತ್ರ ತಂತ್ರ ಇತ್ಯಾದಿಗಳನ್ನು ಶ್ಲೋಕಗಳಲ್ಲಿ ವಿವರಿಸಲಾಗಿದೆ.

ಚಿನ್ನಕೊಡುವ ಮರವಾದರೂ ಮನೆಯ ಮೇಲೆ ನೆರಳು ಬೀಳುವ ಹಾಗೆ ಮರಗಳನ್ನು ನೆಡಬಾರದು, ಮಣ್ಣಿನ ಮಹತ್ವವನ್ನು ತಿಳಿಸುತ್ತಾ ಯಾವ ಮಣ್ಣು ಯಾವ ಬೆಳೆಗೆ ಸೂಕ್ತ ಎಂದು ಉದಾಹರಿಸಿದ್ದಾರೆ. ಹಸಿ ಭೂಮಿ ಹಲಸು, ಬಾಳೆ, ದ್ರಾಕ್ಷಿ, ತಾಳೆಗೆ ; ಒಣ ಮಣ್ಣು, ನಿಂಬೆ, ತೇಗ, ನುಗ್ಗೆ, ಬೇಲಕ್ಕೆ, ಸಾಮಾನ್ಯ ಮಣ್ಣು ದಾಳಿಂಬೆ, ಮಾವು, ಸಂಪಿಗೆ ಇತ್ಯಾದಿಗಳಿಗೆ. ಬೀಜೋಪಚಾರ, ನಾಟಿ ಮಾಡುವ ಕ್ರಮಗಳನ್ನು ವಿವರಿಸುತ್ತಾ ಬಾಳೆಯ ಕಂದಿಗೆ ದನದ ಸೆಗಣಿ ಮೆತ್ತಿ ನಾಟಿ, ಬೀಜಗಳಿಗೆ ಹಾಲಿನ ಬೀಜೋಪಚಾರ ಮಾಡಿ ಸೆಗಣಿಯಿಂದ ಉಜ್ಜಿ ಒಣಗಿಸಿ ಬಿದಂಗ *(Embelia ribes)* ದಿಂದ ಉಪಚರಿಸಿ ನಾಟಿ ಮಾಡಲು ಸೂಚಿಸಲಾಗಿದೆ. ನಾಟಿಯ ಕಾಲವನ್ನು ವಿವರಿಸುತ್ತಾ ವೈಶಾಖ, ಮೃಗಶಿರಾ, ಮೂಲ, ಚಿತ್ತ, ಉತ್ತರ, ಉತ್ತರಾಷಾಡಾ, ಉತ್ತರಬಾದ್ರ, ಅನುರಾಧ, ಜೇಷ್ಠ, ಕೃತ್ತಿಕಾ ಉತ್ತಮ ನಕ್ಷತ್ರಗಳು. ಹುಣ್ಣಿಮೆ ಎದುರು, ಸೋಮ, ಬುಧ, ಗುರು, ಶುಕ್ರವಾರಗಳು ಬಿತ್ತನೆಗೆ ಯೋಗ್ಯ ದಿನಗಳು.

ಬೇರೆ ಬೇರೆ ಗಿಡಗಳ ಪಾಲನೆಯನ್ನು ಪ್ರತ್ಯೇಕವಾಗಿ ವಿವರಿಸಲಾಗಿದೆ. ಆದರೆ ಹೆಚ್ಚಿನ ಆರ್ಗಾನಿಕ ಕ್ರಮಗಳು ಪ್ರಾಣಿ, ಪಕ್ಷಿಗಳಲ್ಲದೆ ಮಾನವನ ಮಾಂಸವನ್ನು ಬೇಡುತ್ತವೆ. ಇವು ಈಗ ಪ್ರಾಯೋಗಿಕವಲ್ಲ. ಪ್ರಸ್ತುತ ಪ್ರಯೋಗಿಸಿ ನೋಡಬಹುದಾದ ಕೃಷಿ ಕ್ರಮಗಳಲ್ಲಿ ;

ದ್ರಾಕ್ಷಿಗೆ ಕೋಳಿ ಗೊಬ್ಬರ ಮತ್ತು ಮೀನಿನ ಕೊಬ್ಬಿನ ಅಂಶವಿರುವ ನೀರನ್ನು ಸಿಂಪಡಿಸುವುದು, ಸೌತೆ ಬಳ್ಳಿಗೆ ತಂಗಳು ಅನ್ನದ ನೀರು ಉಪಚಾರ ಇತ್ಯಾದಿಗಳು ಪ್ರಮುಖವಾದವುಗಳು.

ತೋಟಗಾರಿಕಾ ಅದ್ಭುತಗಳನ್ನು ವಿವರಿಸುತ್ತಾ ಅರಶಿನ ಗಿಡವನ್ನು ಬಳ್ಳಿಯಾಗಿಸುವ ಕ್ರಮ ವಿವರಿಸಿದಾರೆ. ತ್ರಿಫಲ ಚೂರ್ಣ, ಎಳ್ಳು, ಬಾರ್ಲಿ, ಉದ್ದು ಮಿಶ್ರಿತ ನೀರಿನ ಉಪಚಾರ ಮತ್ತು ಅರಶಿನ ಪುಡಿಯ ಧೂಪ ಹಾಕುವುದರಿಂದ ಗಿಡ ಬಳ್ಳಿಯಾಗುತ್ತದಂತೆ.

ಲೇಖಕರು ಅನುವಾದ ಪ್ರಸ್ತುತಕ್ಕೆ ಎಷ್ಟು ಸಮಂಜಸ ಎಂದು ವಿಮರ್ಶಿಸಿದ್ದಾರೆ. ವಿವರಿಸಿರುವ ಕೃಷಿ ಕ್ರಮಗಳನ್ನು ವಿಜ್ಞಾನದ ಒರೆಗೆ ಹಚ್ಚಿದ್ದಾರೆ. ಸಸ್ಯಗಳ ಸಸ್ಯ ಶಾಸ್ತ್ರೀಯ ಹೆಸರುಗಳನ್ನು ಕೊಡಲಾಗಿದೆ.

ಡ್ರೈಯಿಂಗ್ ವಿಸ್‌ಡಮ್

ಸಂ. ಅನಿಲ್ ಅಗರ್‌ವಾಲ್, ಸುನೀತಾ ನರೈನ್
ಪ್ರಕಟಣೆ : Centre for Science & Environment 41, Tughalakabad, Institutional Area New Delhi - 10 062.
ಪುಟಗಳು : iv + 404 ಬೆಲೆ : ಸಾಮಾನ್ಯ ರೂ. 209 ಕ್ಯಾಲಿಕೋ ರೂ. 490

ಚಿರಾಪುಂಜಿ, ಈಶಾನ್ಯ ಭಾರತದ ಪುಟ್ಟ ಹಳ್ಳಿ ಪ್ರಪಂಚದಲ್ಲೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿತ್ತು. ಈಗ ಸರಕಾರಿ ದಾಖಲೆಯ ಪ್ರಕಾರ ಅಲ್ಲಿ ನೀರಿಗೆ ಬರ ಎಂದಿದೆ.

ಜೈ ಸಲ್ಮೇರ್, ಥಾರ್ ಮರಭೂಮಿಯ ಹೃದಯದಲ್ಲಿರುವ ಜಿಲ್ಲೆ. ವಾರ್ಷಿಕ ಮಳೆ ಸುಮಾರು 4 ಅಂಗುಲಗಳು. 1987ರ ಬರಗಾಲದಲ್ಲಿ ಸರಕಾರಿ ನೀರಿನ ಕೊಳವೆಗಳು ಬತ್ತಿದ್ದವು. ಆದರೆ ಜನರು ನೀರಿನ ಅಭಾವ ಅನುಭವಿಸಲಿಲ್ಲ. ಜನ ಸಾಂಪ್ರದಾಯಿಕ ಮಳೆ ನೀರಿನ ಸಂಗ್ರಹಣಾ ವಿಧಾನ - 'ಕುಂಡ' ಗಳನ್ನು ನಿರ್ವಹಿಸಿದ್ದರು.

ಇಂದು ನೀರಿಗಾಗಿ ಎಲ್ಲೆಡೆ ಹಾಹಾಕಾರವಿದೆ. ಯಥೇಚ್ಛ ದೊರೆಯುವಲ್ಲಿ ಪೋಲಾಗುತ್ತಿದೆ. ಅಂದ ಮಾತ್ರಕ್ಕೆ ನೀರಿನ ಬಳಕೆ ನಮಗೆ ಗೊತ್ತಿಲ್ಲದ ತಂತ್ರಜ್ಞಾನ ಎಂದಲ್ಲ. ಇತಿಹಾಸವನ್ನು ಅವಲೋಕಿಸಿದರೆ ನೀರು ಸಮೃದ್ಧವಾಗಿ ದೊರೆಯುತ್ತಿದ್ದರೂ ಹೇಗೆ ಯೋಗ್ಯ ರೀತಿಯಲ್ಲಿ ಬಳಸುತ್ತಿದ್ದರು ಎಂದು ತಿಳಿಯುತ್ತದೆ. ಇಂದಿಗೂ ಆ ಅವಶೇಷಗಳು ಅಲ್ಲಲ್ಲಿ ಲಭ್ಯ.

ಸಿ.ಎಸ್.ಇ. ಹೊರತಂದಿರುವ ದೇಶದ ಪರಿಸರ ಸ್ಥಿತಿಯ ಬಗ್ಗೆ ನಾಲ್ಕನೆಯ ವರದಿ, ಭಾರತದ ನೀರಾವರಿಯ ಏಳು ಬೀಳುಗಳ ಒಂದು ಸಮಗ್ರ ನೋಟ. ಬತ್ತಿದ ಕೊಳವೆ, ನಾಲೆ, ಕೆರೆಕುಂಟೆ, ರಾಜಕಾರಣಿಗಳಿಗೆ ಪ್ರಿಯವಾದ ಅಣೆಕಟ್ಟುಗಳ ನಂತರ ನೀರಿನ ಜಾಣತನದ ನಿರ್ವಹಣೆಯ ಬಗ್ಗೆ ವಿಷಾದವಾಗಿ ತಿಳಿಸುವ ಸಲುವಾಗಿ ಈ ಪುಸ್ತಕ, ಪುಸ್ತಕವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿದ್ದು, ಹಳೆಯ ತಂತ್ರಜ್ಞಾನ, ಪ್ರತೀ ಪ್ರದೇಶ ನಿರ್ಮಿಸಿಕೊಂಡಿದ್ದ ತನ್ನದೇ ಆದ ನೀರಿನ ನಿರ್ವಹಣೆ ವ್ಯವಸ್ಥೆಗಳು, ನೀರಿನ ಪೂರೈಕೆಯಲ್ಲಿ ಸರ್ಕಾರದ ಪ್ರವೇಶದಿಂದ ಆದ ಅನಾಹುತಗಳು ಮತ್ತು ಹಳೆಯ ತಂತ್ರಜ್ಞಾನದ, ಪುನರ್ಬಳಕೆಗಾಗಿ ಮಾಡಲಾಗುತ್ತಿರುವ ಪ್ರಯತ್ನಗಳು ಹೇಗೆ ಅನಿಲ್ ಅಗರ್‌ವಾಲ್ ಮತ್ತು ಸುನೀತಾ ನರೈನ್ ತಮ್ಮ 'ಡ್ರೈಯಿಂಗ್ ವಿಸ್‌ಡಮ್' ನಲ್ಲಿ ನೀರಿನ ಬಳಕೆ ಸಾಗಿ ಬಂದಿರುವ ಹಾದಿಯ ಪಾಂಡಿತ್ಯ ಪೂರ್ಣ ಒಳನೋಟ ನೀಡಿದ್ದಾರೆ.

ಇದರಲ್ಲಿ ನೆಲ ನೀರು ಇಂಗಿಸುವ ಬಗ್ಗೆ ಹೆಚ್ಚು ಒತ್ತು ಕೊಡಲಾಗಿದೆ. ಭಾರತದ 15 ಪರಿಸರ ವಲಯದಲ್ಲಿ ಪ್ರಚಲಿತವಿರುವ ಸಾಂಪ್ರದಾಯಿಕ ನೀರು ನಿರ್ವಹಣಾ ವಿಧಾನಗಳು ಜನರಲ್ಲಿ ಬೇರೂರಿರುವ ನಂಬಿಕೆಗಳು ಇತ್ಯಾದಿ ಪರಿಚಯಿಸಲಾಗಿದೆ. ಪ್ರತೀ ಪುಟವೂ ವಿಷಯಗಳಿಂದ, ಅಂಕಿ ಅಂಶಗಳಿಂದ, ವರ್ಣ ಚಿತ್ರ ಮತ್ತು ರೇಖಾ ಚಿತ್ರಗಳಿಂದ ಶ್ರೀಮಂತ.

ನೀರು ಮತ್ತು ಮಣ್ಣಿನ ನಿರ್ವಹಣೆಯ ಬಗ್ಗೆ ಆಸಕ್ತರು, ಸಂಶೋಧಕರು, ರಾಜಕಾರಣಿಗಳು ಸಾಧ್ಯವಾದರೆ ರೈತರು ಓದಲೇ ಬೇಕಾದ ಪುಸ್ತಕ. ಸ್ಥಳೀಯ ತಂತ್ರಜ್ಞಾನದ ಬಳಕೆಯನ್ನು ಪ್ರತಿಪಾದಿಸುವ ಒಂದು ವೇದಿಕೆ.

ವಿಮರ್ಶೆ : ವಾಸುದೇವ ಅದಮಾರು
ಸುಸ್ಥಿರ ಕೃಷಿ ಲೇಖಕರ ಬಳಗ
ಜಿ.ಕೆ.ವಿ.ಕೆ. ಬೆಂಗಳೂರು.

ರೈತರೇ ನಿರ್ಮಿಸಿದ ಚಿಕ್ಕಪಡಸಲಗಿ ಅಣೇಕಟ್ಟು

ಪ್ರಮುಖ ಸ್ಥಳ. ಇಲ್ಲಿಯ ಗೋಲಗುಮ್ಮಟ ಪ್ರಪಂಚದ ಏಳು ವಿಸ್ಮಯಗಳಲ್ಲೊಂದು. ಬಿಜಾಪುರ ಜಿಲ್ಲೆಯಲ್ಲಿ ಕೃಷ್ಣ, ಮಲಪ್ರಭಾ, ಘಟಪ್ರಭಾ, ಭೀಮಾ ಮತ್ತು ದೋಣಿ ನದಿಗಳು ಹರಿಯುವುದರಿಂದಲೇ ಇದನ್ನು 'ಪಂಚನದಿಗಳ ಬೀಡು' ಎನ್ನುವರು. ಆದರೂ ನೀರಿನ ಸಮರ್ಥ ನಿರ್ವಹಣೆ ಇಲ್ಲದಿರುವ ಕಾರಣದಿಂದ ನೀರಾವರಿ ಹಾಗೂ ಕುಡಿಯುವ ನೀರಿಗಾಗಿ ಪರಿತಪಿಸುವ ಪರಿ ಬೆಳೆದು ಬಂದಿದೆ. ಜಮಖಂಡಿ ಮತ್ತು ಅಥಣಿ ತಾಲೂಕುಗಳು ಈ ಸಮಸ್ಯೆಗೆ ಹೊರತೇನಲ್ಲ. 1960 ರಲ್ಲಿ ಕೊಯ್ನಾ ಜಲವಿದ್ಯುತ್ ಯೋಜನೆ ನಿರ್ಮಾಣದ ನಂತರ ಅಣೆಕಟ್ಟಿನ ತಗ್ಗು ಪ್ರದೇಶದಲ್ಲಿ ಬೆಳೆಗಳಿಗೆ ಹಾಗೂ ಜನರಿಗೆ ಬಾಯಾರಿಕೆ ನೀಗುತ್ತಲೇ ಇರಲಿಲ್ಲ. ಈ ಸಮಸ್ಯೆಯ ತೀವ್ರತೆಗೆ ಒಳಪಟ್ಟ ಮುಖ್ಯ ಪ್ರದೇಶಗಳೆಂದರೆ ಜಮಖಂಡಿ ತಾಲೂಕಿನ ಕೃಷ್ಣಾ ನದಿ ದಡದ ಪ್ರದೇಶ ಮತ್ತು ಅಥಣಿ ತಾಲೂಕಿನ ಕೆಲವು ಭಾಗ. ಹಳ್ಳಿಯ ಮಹಿಳೆಯರು ಬರಿ ಕಾಲಿನಲ್ಲಿ, ಉರಿ ಬಿಸಿಲಿನಲ್ಲಿ ಮೈಲುಗಟ್ಟಲೆ ನಡೆದು ಒಂದು ಕೊಡ ನೀರನ್ನು ತರುವಷ್ಟರಲ್ಲಿ ಸಾಕಾಗಿ ಹೋಗುತ್ತಿತ್ತು. ನೀರಿಗಾಗಿ ತಾತ್ಕಾಲಿಕ ಪರಿಹಾರ ಕಂಡುಕೊಂಡರೂ ಯಾವುದೂ ಅಷ್ಟಾಗಿ ಪರಿಣಾಮ ಬೀರಲಿಲ್ಲ. ನೀರಿಗಾಗಿ ಪರಿತಪಿಸುತ್ತಿದ್ದಾಗ ಬಂದ ವಿಪರೀತ ಮಳೆ ಇದ್ದ ಬದ್ದ ಬೆಳೆಯನ್ನೂ ಕೊಚ್ಚಿಕೊಂಡು ಹೋಯಿತು. ಕಾಲನಂತರದಲ್ಲಿ ಬರಗಾಲ. ಈ ಪರಿಸ್ಥಿತಿಯಲ್ಲಿ ಸಣ್ಣ ಹಿಂಡುವಳಿದಾರರು, ಕೂಲಿಯಾಳುಗಳು ನಗರಕ್ಕೆ ವಲಸೆ ಹೋಗಲು ಪ್ರಾರಂಭಿಸಿದರು. ಮಕ್ಕಳಿಗೆ ಸರಿಯಾದ ಶಿಕ್ಷಣ ಸಿಗಲಿಲ್ಲ.

1960ರಲ್ಲಿ ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಈ ಪ್ರದೇಶದ ಜನ ಮುಖ್ಯವಾಗಿ ರೈತರು, ರಾಜ್ಯ ಸರ್ಕಾರಕ್ಕೆ ಜಮಖಂಡಿ ತಾಲೂಕಿನ ಚಿಕ್ಕಪಡಸಲಗಿ ಎಂಬ ಹಳ್ಳಿಯಲ್ಲಿ ಕೃಷ್ಣಾನದಿಗೆ ಅಣೆಕಟ್ಟು ನಿರ್ಮಿಸುವಂತೆ ಬಾರಿಬಾರಿ ಮನವಿ ಸಲ್ಲಿಸಿದರು. ಇದರ ನಿರ್ಮಾಣದಿಂದ ಒಟ್ಟು 26,000 ಎಕ್ರೆಗೆ ನೀರಾವರಿ ಹಾಗೂ ಜಮಖಂಡಿ ತಾಲೂಕಿನ 21 ಹಳ್ಳಿಗಳಿಗೆ ಮತ್ತು ಅಥಣಿ ತಾಲೂಕಿನ 6 ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಸಾಧ್ಯವಿತ್ತು. ರೈತರ ಒತ್ತಾಯದ ಮೇರೆಗೆ 1976 ರಲ್ಲಿ ರಾಜ್ಯ ಸರ್ಕಾರ ಅಣೆಕಟ್ಟು ನಿರ್ಮಾಣ ಕುರಿತಂತೆ 35 ಲಕ್ಷ ರೂಪಾಯಿಯ ಯೋಜನೆಯನ್ನು ಸಿದ್ಧಪಡಿಸಿತು. ಆದರೆ ತಾಂತ್ರಿಕ ಸಮಿತಿಯ ತಪ್ಪು ವರದಿ ಈ ಯೋಜನೆಗೆ ಕೆಂಪು ಬಾವುಟ ತೋರಿಸಿತು. ಮತ್ತೆ 1986 ರಲ್ಲಿ ರಾಜ್ಯ ಸರ್ಕಾರ ಈ ಯೋಜನೆಯ ಅಂದಾಜು ವೆಚ್ಚ 18 ಕೋಟಿ ರೂಪಾಯಿ ಎಂದು ಎಣಿಸಿದರೂ ಅನೇಕ ಕಾರಣಗಳಿಂದ ಈ ಯೋಜನೆ ಕಾರ್ಯರೂಪಕ್ಕೆ ಬರದೆ ನೆನೆಗುದಿಗಳಿದಿತ್ತು.

ರಾಜ್ಯ ಸರ್ಕಾರದಿಂದ ಈ ಯೋಜನೆ ನಿರ್ಲಕ್ಷ್ಯಕ್ಕೊಳಗಾಗಿದ್ದರ ಪರಿಣಾಮವಾಗಿ ರೈತರದಲ್ಲಿ ತೀವ್ರ ಅಸಮಧಾನ ಉಂಟಾಯಿತು. ಇದೇ ಸಮಯದಲ್ಲಿ ರೈತ ಮುಖಂಡ, ಸಮಾಜಸೇವಕ ಶ್ರೀ ಸಿದ್ದುನ್ಯಾಮಗೌಡರವರು ಅಲಗೂರು ಎಂಬ ಹಳ್ಳಿಯಲ್ಲಿ ರೈತರನ್ನೊಟ್ಟುಗೂಡಿಸಿ ನಡೆಸಿದ ಸಭೆ ಮಹತ್ವಪೂರ್ಣ ಹೆಜ್ಜೆಯಾಯಿತು. ಸಿದ್ದುನ್ಯಾಮಗೌಡರ ಯೋಚನೆಯಂತೆ ಜನರೇ ಸ್ವಂತ ಖರ್ಚಿನಿಂದ, ಸ್ವಶ್ರಮದಿಂದ ಅಣೆಕಟ್ಟು ನಿರ್ಮಾಣಕ್ಕೆ ಸಹಕಾರ ನೀಡುವ ಕರೆಗೆ ಸಮ್ಮತಿಸಿದ ರೈತರು ಕೂಡಲೇ ಕಾರ್ಯಮಗ್ನರಾದರು. ಇದರ ಪರಿಣಾಮ ಬೃಹತ್ ರೈತ ಶಕ್ತಿಯ ಸಹಕಾರ ಸಂಘ ಉದಯ ಅದೇ- 'ಕೃಷ್ಣಾ ತೀರ ರೈತ ಸಂಘ'

ನಿವೃತ್ತ ಮುಖ್ಯ ಎಂಜಿನಿಯರ್ ಶ್ರೀ ಅಮ್ಮನಬಾವಿಯವರ ಸಹಾಯದಿಂದ 'ಕೃಷ್ಣಾ ತೀರ ರೈತ ಸಂಘದ' ರೈತರೇ ಸ್ವತಃ ಅಣೆಕಟ್ಟು ನಿರ್ಮಾಣದ ಕುರಿತ ಯೋಜನೆ ತಯಾರಿಸಿ, ರಾಜ್ಯ ಸರ್ಕಾರಕ್ಕೆ ಸಲ್ಲಿಸಿದರು. ರಾಜ್ಯ ಸರ್ಕಾರ ಅಳುಕಿನಿಂದಲೇ ಈ ಯೋಜನೆಗೆ ಹಸಿರು ನಿರಾಶೆ ತೋರಿಸಿತು. ಅದೂ ಸುಮಾರು ಒಂದು ವರ್ಷದ ನಂತರ ! ಜೊತೆಗೆ ರಾಜ್ಯ ಸರ್ಕಾರ ಹಲವು ಕರಾರುಗಳನ್ನೂ ಹಾಕಿತು. ಆ ಕರಾರುಗಳು ಒಪ್ಪಿಕೊಳ್ಳಲು ಕ್ಲಿಷ್ಟವಾಗಿದ್ದರೂ ಕೃಷ್ಣಾತೀರ ರೈತ ಸಂಘ ಅವುಗಳನ್ನು ಒಪ್ಪಿಕೊಂಡು ಮುಂದಿನ ಕಾರ್ಯ ನಡೆಸಲು ದಿಟ್ಟ ಹೆಜ್ಜೆ ಇಟ್ಟಿತು.

ಪಿತಾಮಹನಿಗೆ ನಮನ

ರಾಜ್ಯಸರ್ಕಾರದಿಂದ ಹಸಿರು ನಿಶಾನೆ ದೊರಕ್ಕಿದ್ದೇ ತಡ ಜನರೆಲ್ಲರೂ ಸ್ವಇಚ್ಛೆಯಿಂದ ಒಂದಾಗಿ ಮುಂದಿನ ಕಾರ್ಯಗಳು ಸುಗಮವಾಗುವಂತೆ ಸಹಕರಿಸಿದರು. 1987ರಲ್ಲಿ ಗಾಂಧೀಜಿ ಹುಟ್ಟುಹಬ್ಬದ ಅಕ್ಟೋಬರ್ 2 ರಂದು ಜಾತ್ರೆಯಲ್ಲಿ ಸೇರುವಂತೆ ಸಾವಿರಾರು ಜನರು ಒಂದೆಡೆ ಸೇರಿ ಅಣೆಕಟ್ಟು ನಿರ್ಮಾಣ ಕಾರ್ಯಕ್ಕೆ ಭೂಮಿಪೂಜೆ ನೆರವೇರಿಸಿದರು. ಅಣೆಕಟ್ಟು ನಿರ್ಮಾಣ ಕಾರ್ಯವನ್ನು ಎರಡು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಯಿತು. ಮೊದಲನೇ ಹಂತದಲ್ಲಿ 1998ರ ಜನವರಿಯಿಂದ ಮೇವರೆಗೆ ಕೆಲಸ ನಡೆಯಿತು. ಎರಡನೇ ಹಂತ 1989ರ ಜನವರಿಯಿಂದ ಜೂನ್‌ವರೆಗೆ ಕಾರ್ಯಸಾಧಿಸಿ. ಅಣೆಕಟ್ಟು ಕಾರ್ಯ ಸಂಪೂರ್ಣವಾಯಿತು.

ಧನಶಕ್ತಿ ?

ಧನಸಹಾಯ ನೀಡಲು ರೈತರು, ಇತರರು ನಂಬಿಕೆ, ಆತ್ಮ ವಿಶ್ವಾಸ, ಉತ್ಸಾಹ ಮಾನವೀಯತೆ ದೃಷ್ಟಿಯಿಂದ ಸ್ವಇಚ್ಛೆಯಿಂದ ಮುಂದಾದರು. ಯೋಜನಾ ಕಾರ್ಯಕ್ಕೆ 1 ಕೋಟಿ ರೂಪಾಯಿ ಅಂದಾಜು ವೆಚ್ಚ ಮಾಡಲಾಯಿತು. ಅಣೆಕಟ್ಟಿನಿಂದ ಅನುಕೂಲ ಪಡೆಯುವವರಿಂದ ಒಂದು ಅಶ್ವಶಕ್ತಿ ಪಂಪಸೆಟ್ ನೀರಾವರಿಗೆ 500 ರೂಪಾಯಿ ವಸೂಲಿ ಎಂದು ನಿಗದಿ ಪಡಿಸಲಾಯಿತು. ಯೋಜನೆಯ ಎರಡನೇ ಹಂತದಲ್ಲಿ ಹೆಚ್ಚಿದ ಬೆಲೆಗಳಿಂದಾಗಿ ಹಣಕಾಸಿನ ತೊಂದರೆಯಾಯಿತು. ಆಗ ರೈತರು ಪ್ರತಿ ಹಳ್ಳಿಯ ಮನೆ ಬಾಗಿಲಿಗೆ ಹೋಗಿ ಧನಸಹಾಯ ಬೇಡಿ ಅಣೆಕಟ್ಟು ನಿರ್ಮಾಣ ಕಾರ್ಯಗಳು ಮುಂದುವರಿಯುವಂತೆ ನೋಡಿಕೊಂಡರು.

ಧನ ಸಹಾಯ ನೀಡಿದವರಲ್ಲಿ ಪ್ರಮುಖರು

- 250 ರೈತರು ತಮ್ಮ ಜಮೀನನ್ನು ಸ್ಥಳೀಯ ಪಟ್ಟಣ ಬ್ಯಾಂಕಿನಲ್ಲಿ ಒತ್ತೆಯಿಟ್ಟು ಯೋಜನೆಗೆ ಹಣ ಒದಗಿಸಿದರು.
- ಯೋಜನೆಯಿಂದ ಅನುಕೂಲವಾಗುವ

ರೈತರು, ಜನ ಸಾಮಾನ್ಯರು.

- ವಿದ್ಯಾಸಂಸ್ಥೆಗಳು
- ಜಮಖಂಡಿ, ರಬಕವಿ, ಸಾಂಗ್ಲಿ, ಬನಹಟ್ಟಿ, ಟೆರ್‌ದಾಲ್, ಬಿಜಾಪುರ, ಮುಧೋಳ, ಅಥಣಿಯ ವ್ಯಾಪಾರೀ ಸಂಸ್ಥೆಗಳು
- ಧಾರ್ಮಿಕ ಸಂಸ್ಥೆಗಳು
- ನೇಕಾರರ ಸಂಘ
- ಬ್ಯಾಂಕ್., ಅಂಚೆ ಇಲಾಖೆಯ ನೌಕರರು,
- ವಕೀಲರ ಸಂಘ
- ಬೆಳಗಾವಿಯ ಜಿಲ್ಲಾ ಪರಿಷತ್ತು.
- ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ರಾಜ್ಯದ ಅನೇಕರು.
- CAPART (Council for Advancement of people's action and rural technology - New Delhi)
- ಜಮಖಂಡಿ ಪಟ್ಟಣ ಸಹಕಾರಿ ಬ್ಯಾಂಕ್

ಇಲ್ಲಿ ಹಣದೊಂದಿಗೆ ರೈತ ಶಕ್ತಿಯಲ್ಲಿ ಮೂಡಿದ ಛಲ, ಆತ್ಮ ವಿಶ್ವಾಸ, ಯೋಜನೆಯ ಕಾರ್ಯರೂಪ ಯಶಸ್ವಿಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿತು.

ಕರಸೇವೆ

ಯೋಜನೆ ನಿರ್ಮಾಣ ಕಾರ್ಯದಲ್ಲಿ ಸ್ವ ಇಚ್ಛೆಯಿಂದ ಹಲವಾರು ರೈತರು, ಸ್ವಯಂ ಸೇವಾ ಸಂಸ್ಥೆಗಳು, ಮುಂದೆ ಬಂದರು. ದಿ ಹಿಂದು ಏಕತಾ ಸಮಿತಿ, ಅಂಜಮನ್ ಎ ಇಸ್ಲಾಮ್ ಕಮಿಟಿ, ಮರ್ಚೆಂಟ್ಸ್ ಅಸೋಸಿಯೇಷನ್, ವಿದ್ಯಾ ಸಂಸ್ಥೆಗಳು, ವಿದ್ಯಾರ್ಥಿ ಸಂಘಗಳು, ಆಟೋರಿಕ್ಷಾ ಚಾಲಕರ ಸಂಘ, ಬ್ಯಾಂಕ್ ಮತ್ತು ಅಂಚೆ ಇಲಾಖೆ ನೌಕರರು, ಕೃಷಿ ಮತ್ತು ಕೃಷಿಯೇತರರು ಕೂಲಿಯಾಳುಗಳು, ಜನಸಾಮಾನ್ಯರು ಅತೀವ ಉತ್ಸಾಹದಿಂದ ಸ್ವ ಇಚ್ಛೆಯಿಂದ ಯೋಜನೆಯಲ್ಲಿ ಕೆಲಸಮಾಡಲು ಮುಂದೆ ಬಂದರು. ಈ ರೀತಿಯಿಂದಾಗಿ ಸುಮಾರು 7 ಲಕ್ಷ ರೂಪಾಯಿಯಷ್ಟು ಕೂಲಿಯಾಳುಗಳ ವೆಚ್ಚ ಕಡಿಮೆಯಾಯಿತು. ಇವರೆಲ್ಲರ ಶ್ರಮದಾನದಿಂದಾಗಿ ಅಣೆಕಟ್ಟಿನ ನಿರ್ಮಾಣ ಕಾರ್ಯ ಪೂರ್ಣಗೊಂಡಿತು.

ಅಣೆಕಟ್ಟಿನ ಮುಖ್ಯ ಲಕ್ಷಣಗಳು

❶ ಭಾರತದಲ್ಲೇ ಪ್ರಪ್ರಥಮವಾಗಿ ನಿರ್ಮಾಣಗೊಂಡ ಖಾಸಗಿ ಅಣೇಕಟ್ಟು (ಸರಕಾರದ ಸಹಾಯವಿಲ್ಲದೆ).

❷ ರೈತರಿಂದಲೇ ಹೊರಹೊಮ್ಮಿದ ಯೋಚನೆ, ಯೋಜನೆ, ಜನರ ಸಹಕಾರದಿಂದ ಯೋಜನೆಯ ಕಾರ್ಯ ಸಂಪೂರ್ಣ.

❸ ಸಮಾಧಿಯಂತಿದ್ದ ಆ ಪ್ರದೇಶದಲ್ಲಿ ಸಮೃದ್ಧಿ ನೆಲೆಸುವಂತಾದದ್ದು.

❹ ಕೂಲಿಯಾಳುಗಳ ವೆಚ್ಚ ಗಣನೀಯ ಪ್ರಮಾಣದಲ್ಲಿ ಕಡಿಮೆಮಾಡಿದ್ದು.

❺ ರೈತರು ಸಹಕಾರಿ, ಮುಂದಾಳತ್ವತನ, ಆಸಕ್ತಿ ಉತ್ಸಾಹ ಇತರ ಯಾವುದೇ ರೈತಶಕ್ತಿಗೆ ಮಾದರಿ.

ಯೋಜನೆಯಿಂದ ಫಲಾನುಭವಿಗಳು

ಫಲಾನುಭವಿಗಳು	ಕುಟುಂಬಗಳು	ಒಟ್ಟು ಜಮೀನು (ಎಕರೆ)
ಸಣ್ಣ ಮತ್ತು ಅತಿಸಣ್ಣ ಕುಟುಂಬಗಳು	4582	12193
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು	440	1086
ದೊಡ್ಡ ಹಿಡುವಳಿದಾರರು	1302	12746
1991 ರಿಂದ 1996 ರವರೆಗೆ ನೀರಾವರಿ ಸೌಲಭ್ಯ ವಿಸ್ತಾರಗೊಂಡಿದ್ದು.		8975
ಒಟ್ಟು	6324	35000

ತಾಂತ್ರಿಕ ವಿವರ

ಅಣೆಕಟ್ಟಿನ ಹೆಸರು	:	ಚಿಕ್ಕ ಪಡಸಲಗಿ ಅಣೆಕಟ್ಟು
ನದಿ	:	ಕೃಷ್ಣಾ
ಪ್ರದೇಶ	:	ಚಿಕ್ಕಪಡಸಲಗಿ ಗ್ರಾಮ ಜಮಖಂಡಿ ತಾ॥ ಬಿಜಾಪುರ ಜಿ॥ ಕರ್ನಾಟಕ
ಉದ್ದ	:	430 ಮೀಟರ್
ಉತ್ತರ	:	8 ಮೀಟರ್
ನೀರು ಸಂಗ್ರಹಣಾ ಸಾಮರ್ಥ್ಯ	:	2.8 ಟಿಎಂಸಿ
ಅಗಲ (ಜಲಾಶಯ)	:	0.45 ಕಿ.ಮೀ
ಉದ್ದ (ಜಲಾಶಯ)	:	45 ಕಿ.ಮೀ.
ಯೋಜನಾ ವೆಚ್ಚ	:	1 ಕೋಟಿ
ನಿರ್ಮಾಣದ ಅವಧಿ	:	11 ತಿಂಗಳು

ಕುಡಿಯುವ ನೀರಿನ ಸೌಲಭ್ಯ

❶ ಜಮಖಂಡಿ ಊರಿಗೆ

❷ ಜಮಖಂಡಿ ತಾಲೂಕಿನ 21 ಹಳ್ಳಿಗಳಿಗೆ

❸ ಅಥಣಿ ತಾಲೂಕಿನ 6 ಹಳ್ಳಿಗಳಿಗೆ

❹ 2.5 ಲಕ್ಷ ಜನ ಸಂಖ್ಯೆಗೆ


ಯೋಜನೆಯ ಅರ್ಥಶಾಸ್ತ್ರ

ವಿವರ	1986-87 ನಿರ್ಮಾಣದ ಮೊದಲು	1995-96 ಅಣೆಕಟ್ಟು ನಿರ್ಮಾಣದ ನಂತರ
ನೀರಾವರಿ ಸೌಲಭ್ಯ	8,000-10,000 ಎಕರೆ (8 ತಿಂಗಳಿಗೆ)	35,000 ಎಕರೆ (12 ತಿಂಗಳು)
ಜಮೀನಿನ ಬೆಲೆ	ರೂ. 25,000 - 30,000 ಪ್ರತಿ ಎಕರೆಗೆ	ರೂ.1ಲಕ್ಷ -1.25 ಲಕ್ಷ ಪ್ರತಿ ಎಕರೆಗೆ
ಕಬ್ಬಿನ ಇಳುವರಿ	25-30 ಟನ್ ಪ್ರತಿ ಎಕರೆಗೆ	40-45 ಟನ್ ಪ್ರತಿ ಎಕರೆಗೆ
ಕಬ್ಬು ಬೆಳೆ ಉತ್ಪಾದನೆ	1,75,000 ಟನ್‌ಗಳು	11,25,000 ಟನ್‌ಗಳು
ಆಹಾರ ಧಾನ್ಯದ ಉತ್ಪಾದನೆ.	4000 ಟನ್‌ಗಳು	1,30,000 ಟನ್‌ಗಳು
ನೌಕರಿ ಸೃಷ್ಟಿ	50,000 ದಿನಗಳು	2,25,000 ದಿನಗಳು
ಕೂಲಿಯಾಳು ಬೆಲೆ	15 ರೂ-18 ರೂ ಪ್ರತಿ ದಿನಕ್ಕೆ	40ರೂ-45ರೂ ಪ್ರತಿ ದಿನಕ್ಕೆ

1996ರಲ್ಲಿ ಕೃಷ್ಣಾ ನದಿ ತುಂಬಿ ತುಳುಕಿದಾಗ ಚಿಕ್ಕಪಡಸಲಗಿ ಅಣೆಕಟ್ಟಿಗೆ ಧಕ್ಕೆ ಉಂಟಾಯಿತು. ಆಗಲೂ ಸಹ ರೈತರೇ ಸ್ವತಃ ಸಂಘಟಿಸಿ ಮುಂದಾಳತ್ವ ವಹಿಸಿದರು. ಅಣೆಕಟ್ಟಿನ ದಂಡೆಯನ್ನು ಸ್ವಲ್ಪ ಏರಿಸಿದರು. ಈ ಕೆಲಸದ ಒಟ್ಟು ವೆಚ್ಚದ ಸುಮಾರು ಅರ್ಧದಷ್ಟನ್ನು ಸರ್ಕಾರ ನೀಡಲು ಒಪ್ಪಿತು. ಪ್ರತಿ ಎಕರೆಗೆ ಸಾವಿರ ರೂಪಾಯಿ ಹಣ ರೈತರಿಂದ ವಸೂಲಿ ಮಾಡಿ ವೆಚ್ಚ ಭರಿಸಲು ರೈತರು ಮುಂದಾದರು. ಮತ್ತೆ ಜನರ, ಸಂಘ ಸಂಸ್ಥೆಗಳ ಉತ್ಸಾಹ, ಸಹಾಯ ಅಣೆಕಟ್ಟಿನ ಕೆಲಸಕ್ಕೆ ದೊರಕಿತು. ಈಗ ಈ ಕಾರ್ಯ ಶೇ90 ರಷ್ಟು ಪೂರ್ಣಗೊಂಡಿದೆ. ಒಟ್ಟಿನಲ್ಲಿ ಈ ಚಿಕ್ಕಪಡಸಲಗಿ ಅಣೆಕಟ್ಟು ನಿರ್ಮಿಸಲು ಒಂದಾದ ರೈತ ಶಕ್ತಿ ರೈತರಿಗೆ ಉಪಯುಕ್ತ ವಾಗುವಂತಹ ಇತರ ಕೆಲಸದಲ್ಲೂ ಪ್ರಗತಿ ಸಾಧಿಸಿದೆ.

ಲೇಖನ : ಅನಿಲ್ ಕೌಶಿಕ್ ಬಿ.ಎ.

ಮಾಹಿತಿ : ಆನಂದ ಕೆ. ಜೋಷಿ ಮತ್ತು ಬಿ.ಎಸ್. ಅಪರಂಜಿ.



ಬಾಂಗ್ಲಾದೇಶದ ಚಕ್ಮಾ ಗುಡ್ಡಗಾಡು ಪ್ರದೇಶದ ವಾಸದ ಮನೆ

ಗುಡ್ಡಗಾಡು ಜನರ ವಾಸದ ಮನೆಗಳ ವಿನ್ಯಾಸ, ಅಳತೆ ಹಾಗೂ ಮಾದರಿ ಆಯಾ ಪ್ರದೇಶಗಳನ್ನಾಧರಿಸಿರುತ್ತದೆ. ಈ ಎಲ್ಲಾ ಮನೆಗಳ ಸಾಮಾನ್ಯ ಲಕ್ಷಣವೆಂದರೆ ಅವುಗಳನ್ನು ನೆಲದಿಂದ ಮೇಲೆ ಹುಗಿದ ಗೂಟಗಳ ಮೇಲೆ ನಿರ್ಮಿಸಿರುತ್ತಾರೆ. ಗುಡ್ಡಗಾಡು ಪ್ರದೇಶದಲ್ಲಿ ಈ ಮಾದರಿಯ ಮನೆಗಳನ್ನು ಕಟ್ಟುವುದರಿಂದ ಮನೆ ನಿರ್ಮಾಣ ಹಾಗೂ ನಿರ್ವಹಣೆ ಎರಡೂ ಸುಲಭವೆಂಬುದು ಅಲ್ಲಿಯ ಜನರ ನಂಬಿಕೆ. ಬಾಂಗ್ಲಾದೇಶದ ಚಕ್ಮಾ ಬುಡಕಟ್ಟು ಜನಾಂಗದವರು ಕಟ್ಟುವ ಈ ರೀತಿಯ ಮನೆಗಳಿಗೆ ಸ್ಥಳೀಯವಾಗಿ 'ಅಲಗ್ಗಾರ್' ಅಥವಾ 'ಮಜಗ್ಗಾರ್' ಎಂದು ಕರೆಯುವರು. ಈ ಮನೆಗಳಿಗೆ ಎರಡು ಮೊಗಸಾಲೆ (ವರಾಂಡ)ವಿರುತ್ತದೆ. ಒಂದು, ಮನೆಯ ಮುಂದೆಯೂ ಹಾಗೂ ಇನ್ನೊಂದು ಮನೆಯ ಹಿಂಬದಿಯಿರುತ್ತದೆ. ಮನೆಯ ಮುಂದಿರುವ ವರಾಂಡವನ್ನು 'ಕನಾಹ' ಎಂತಲೂ, ಹಿಂಬದಿಯ ವರಾಂಡವನ್ನು 'ಒಚಲೆಂಗ್' ಎಂತಲೂ ಕರೆಯುವರು. ಮನೆಯ ಮುಖ್ಯ ಕೋಣೆಯನ್ನು 'ಮುರ್‌ಗಾರ್' ಎನ್ನುವರು. ಚಾವಣಿಯನ್ನು ಬಿದಿರಿನಿಂದ ಅಥವಾ ಹುಲ್ಲಿನಿಂದ ಮುಚ್ಚಿರುತ್ತಾರೆ. ಗೋಡೆಯನ್ನು ಬಿದಿರು ಅಥವಾ ಮರದ ಮೇಲೆ ಕಟ್ಟಿರುತ್ತಾರೆ. ಮನೆಯ ನೆಲದ ಕೆಳಗಿನ ಜಾಗದಲ್ಲಿ ಕೋಳಿಸಾಕಣೆ, ಕುರಿ ಸಾಕಣೆ ಮಾಡಿಕೊಂಡಿರುತ್ತಾರೆ. ಮನೆಯನ್ನು ನೆಲದಿಂದ 1.2 - 1.8 ಮೀಟರ್ ಎತ್ತರದಲ್ಲಿ ಕಟ್ಟಿರುತ್ತಾರೆ. ಛಾವಣಿ ಮತ್ತು ನೆಲ ಬಿದಿರಿನಿಂದ. ಮನೆಯ ಉದ್ದ ಸುಮಾರು 4.5 ಮೀ ಈ ತರಹದ ಮನೆಗಳ ಅಗಲ ಉದ್ದಕ್ಕಿಂತ ಜಾಸ್ತಿ. ಮರದ ಏಣಿಯ ಸಹಾಯದಿಂದ ಮನೆಯೊಳಗೆ ಪ್ರವೇಶ ಇದಕ್ಕೆ 'ಸಂಗು' ಎನ್ನುವರು. ಪ್ರತಿಯೊಂದು ಮರದ ಮೆಟ್ಟಿಲಿಗೂ 'ಪೊಯಿಡಾ' ಎನ್ನುವರು.

ಮೂಲ : A compilation of indigenous Technology Knowledge for upland Watershed Management in Bangladesh.

ಅನುವಾದ ಬಿ.ಎ. ಅನಿಲ್‌ಕೌಶಿಕ್

ಮಾನ್ಯರೇ,

ಮೈಸೂರಿನಲ್ಲಿ ಪರಿಸರಾಸಕ್ತ ಕೃಷಿಕರು, ಇನ್ನಿತರರು ಸೇರಿ ಪ್ರತಿ ತಿಂಗಳ ನಾಲ್ಕನೆಯ ಭಾನುವಾರ 'ಗ್ರೀನ್ ಬಜಾರ್' ಎಂಬ ಮಾರುಕಟ್ಟೆ ಏರ್ಪಡಿಸುತ್ತೇವೆ. 'ಹಿತ್ತಲ ಗಿಡ' ಪ್ರತಿಗಳೊಂದಿಗೆ ತಾವು ಇದರಲ್ಲಿ ಭಾಗವಹಿಸಲು ಇಚ್ಛಿಸುವಿರಾ ?

ತಮ್ಮ ವಿಶ್ವಾಸಿ,

ಪದ್ಮಾ ರಾಜಗೋಪಾಲ ಇಲವಾಲ, ಮೈಸೂರು

(ವಂದನೆಗಳು. ಮುಂಬರುವ ತಮ್ಮ 'ಗ್ರೀನ್ ಬಜಾರ್' ಮಾರುಕಟ್ಟೆಯಲ್ಲಿ ಹಿತ್ತಲಗಿಡದ ಸದಸ್ಯರು ಪಾಲ್ಗೊಳ್ಳುತ್ತಾರೆ -*ಸಂ.*)

ಮಾನ್ಯರೇ

ನೀವು 'ಹಿತ್ತಲ ಗಿಡ' ಕನ್ನಡ ಚಾತುರ್ಮಾಸಿಕವನ್ನು ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದೀರಿ. ನಾನು ನಿಮ್ಮ 'ಹನಿ ಬೀ' ಹಾಗೂ 'ಹಿತ್ತಲ ಗಿಡ' ವನ್ನು ಬಹಳ ವರ್ಷಗಳಿಂದ ಓದುತ್ತಿದ್ದೇನೆ. ನನಗೆ ಮತ್ತು ನಮ್ಮ ಗ್ರಾಮಸ್ಥರಿಗೆ ನಿಮ್ಮಗಳ ವಿಚಾರಧಾರೆಯಿಂದ ತುಂಬ ಪ್ರಯೋಜನ ವಾಗಿದೆ. ಹೀಗೆ ಇನ್ನೂ ಚೆನ್ನಾಗಿ ಬರಲೆಂದು ಹಾರೈಸುತ್ತೇವೆ. ಹಾಗೆಯೇ ನಮ್ಮ ಪಂಚಾಯ್ತಿ ಆಫೀಸಿಗೆ ನಿಮ್ಮ 'ಹಿತ್ತಲ ಗಿಡ'ದ ಹಿಂದಿನ ಸಂಚಿಕೆಗಳನ್ನು ನನ್ನ ವತಿಯಿಂದ ಕೊಡುಗೆ ಕೊಡಬೇಕೆಂದು ಇಚ್ಛಿಸುತ್ತೇನೆ. ನಿಮ್ಮ ಹಾಗೂ ಡಾ.ಅನಿಲ್‌ಗುಪ್ತಾರ ಸೇವೆಗೆ ವಂದನೆಗಳು.

ತಮ್ಮ ವಿಶ್ವಾಸಿ

ಎ.ಎಸ್. ಗುರುಸ್ವಾಮಿ ವಕೀಲರು,

ಬಿ.ಬಿ.ಗಾರ್ಡನ್ ರಸ್ತೆ ಮೈಸೂರು - 04.

(ಪತ್ರಿಕೆಗೆ ಮುಂದೆಯೂ ಸಹಕಾರ, ಸಲಹೆ ನೀಡಿ ಹಿತ್ತಲಗಿಡ ಬೆಳೆಸುವಿರೆಂದು ನಂಬಿರುತ್ತೇವೆ.

- *ಸಂ.*)

ಮಾನ್ಯರೇ

ಹಿತ್ತಲಗಿಡ ನೋಡಿದೆ. ಉಪಯುಕ್ತ ಮಾಹಿತಿಗಳಿವೆ. ದೇಸಿ ಪದ್ಧತಿಗೆ ನೀವು ಕೊಡುತ್ತಿರುವ ಗಮನ ಒಳ್ಳೆಯ ಲಕ್ಷಣ.

ವಿಶ್ವಾಸದಿಂದ,

ಬಂದ ಗದ್ದೆ ರಾಧಾಕೃಷ್ಣ, ಸಾಗರ ಶಿವಮೊಗ್ಗ.

ಮಾನ್ಯರೇ

ನೀವು ಕಳಿಸಿದ 'ಹಿತ್ತಲ ಗಿಡ' ಚಾತುರ್ಮಾಸಿಕ ಪತ್ರಿಕೆ ಪೂಜ್ಯ ಗುರುಗಳಿಗೆ ತಲುಪಿದೆ. 'ಹಿತ್ತಲಗಿಡ' ವೈವಿಧ್ಯಮಯ ವಿಷಯ ಗಳೊಂದಿಗೆ ಚೆನ್ನಾಗಿ ಪ್ರಕಟಗೊಂಡಿದೆ. ಕೃಷಿ ಕ್ಷೇತ್ರದಲ್ಲಿ ಸಂಶೋಧಾತ್ಮಕ ಹೊಸ ಲೇಖನಗಳು ಇದರಲ್ಲಿ ಪ್ರಕಟಗೊಂಡಿರು ವುದು ತುಂಬಾ ಸಂತೋಷ ತಂದಿದೆ.

ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು.

ಮಾನ್ಯರೇ,

ಆಧುನಿಕ ಅಪಾಯಕಾರಿ ಸಂಸ್ಕೃತಿಗೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸಲು ಸಹಾಯ ಮಾಡುವ ಈ ನಿಮ್ಮ ಪ್ರಯತ್ನ ಉತ್ತಮವಾದುದು. ನಾನು ತಮ್ಮ ಪತ್ರಿಕೆಯಲ್ಲಿ ನಾಟಿ ವೈದ್ಯ ಪದ್ಧತಿಗಳ ಬಗ್ಗೆ ಬರೆಯಲು ಸಿದ್ಧ. ಇನ್ನೂ ಅನೇಕ ಸಾಂಪ್ರದಾಯಿಕ, ಅಸಾಂಪ್ರದಾಯಿಕ ವ್ಯವಸಾಯ ಪದ್ಧತಿಗಳ ಸಂಗ್ರಹ ನನ್ನಲ್ಲಿದೆ. ಅವಶ್ಯವಿದ್ದರೆ ಸಂಪರ್ಕಿಸಿ ಮತ್ತು ತಮ್ಮ ಅಭಿಪ್ರಾಯ ತಿಳಿಸಿ.

ಪ್ರೀತಿಯಿಂದ

ಜಿ.ಎನ್. ರಾಮಕೃಷ್ಣ ದೊಡ್ಡಬಳ್ಳಾಪುರ

('ಹಿತ್ತಲಗಿಡ'ದ ಕಾರ್ಯವೈಖರಿಗೆ ಹೊಂದಿಕೊಳ್ಳುವಂತಹ ಲೇಖನಗಳನ್ನು ಬರೆಯುವ ಬಗ್ಗೆ ತಾವು ಆಸಕ್ತರಾಗಿರುವುದು ನಿಜಕ್ಕೂ ಸಂತಸದ ವಿಷಯ ತಮ್ಮಲ್ಲಿರುವ ಜ್ಞಾನಭಂಡಾರವನ್ನು ಹಿತ್ತಲಗಿಡದ ಮೂಲಕ ಮೂಲೆಮೂಲೆಯ ರೈತರಿಗೆ ಹಂಚುವುದೇ ನಮ್ಮ ಉದ್ದೇಶ. - *ಸಂ.*)

ಪ್ರಿಯರೇ,

ನಮಸ್ಕಾರ. 'ಹಿತ್ತಲ ಗಿಡ' ಕೃಷಿಕರಿಗೆ ಕೈಗನ್ನಡಿ ಎಂದರೂ ತಪ್ಪಿಲ್ಲ. ಚಾತುರ್ಮಾಸಿಕವಾದರೂ ಜ್ಞಾನ ಸಂಪಾದನೆಗೆ ಕೊರತೆಯಿಲ್ಲ. ಬಹಳ ದಿನಗಳಿಂದ ಹಿತ್ತಲಗಿಡಕ್ಕೆ ಪ್ರಯೋಜನಕಾರಿಯಾದ ಲೇಖನ ಬರೆಯಬೇಕೆಂದಿದ್ದೆ. ಹಿತ್ತಲಗಿಡಕ್ಕಾಗಿ ಕರಿಬೇವಿನ ಎಲೆಯ ಪೌಷ್ಟಿಕ ಮೌಲ್ಯ ಕುರಿತಾದ ಲೇಖನ ಕಳುಹಿಸಿದ್ದೇನೆ. ಓದುಗರಿಗೆ ಅನುಕೂಲವಾಗಲೆಂಬುದು ನನ್ನ ಆಶಯ.

ವಿಶ್ವಾಸದೊಂದಿಗೆ,

ಎಸ್. ರೋಹಿಣಿ ಶರ್ಮ ಅಜ್ಜಂಪುರ

(ವಂದನೆಗಳು. 'ಹಿತ್ತಲ ಗಿಡ'ಕ್ಕೆ ತಮ್ಮಿಂದ ಉತ್ತಮ ಲೇಖನಗಳನ್ನು ನಿರೀಕ್ಷಿಸುತ್ತೇವೆ. -*ಸಂ.*)

ಮಾನ್ಯ ಪ್ರಕಾಶ್‌ರವರಿಗೆ,

ಇಲ್ಲಿ ನಾವು ನಾಸಿಕ ಸೆಂಟ್ರಲ್ ಜೈಲಿನಲ್ಲಿ ನಿಮ್ಮ ಪ್ರಕಾಶಿತ (ಸುಜಬುಜ) ಈ ಹಿಂದಿ ಪುಸ್ತಕ ಓದಿ ನಮಗೆ ಸಂತೋಷವಾಯಿತು. ಇಲ್ಲಿ ನಮಗೆ ಹೊಲ ಮತ್ತು ಗದ್ದೆ ಇದೆ. ಇದರಲ್ಲಿ ನಾವು ಬದನೆ, ಕಡಲೆಕಾಯಿ, ಭತ್ತ ಜೋಳ ರಾಗಿ ಎಲ್ಲಾ ತರಹದ ಬೆಳೆ ಬೆಳೆಸುತ್ತೇವೆ. ಆದರೆ ಇದಕ್ಕೆ ಕೀಟ ತಾಗಿ ಹಾಳಾಗಿವೆ. ಆದ್ದರಿಂದ ಅದನ್ನು ನೋಡಿಕೊಳ್ಳಲಿಕ್ಕೆ ಹೇಗೆ ಎಂದು, ಎಲ್ಲಾ ತರಹದ ಪುಸ್ತಕ ಕಳಿಸಿಕೊಡಿ. ಹಾಗೂ ನಿಮ್ಮ ಪುಸ್ತಕ ಓದಿ ನಾವು ಒಳ್ಳೆಯ ತರಹ ಕೃಷಿಯನ್ನು ಮಾಡಲಿಕ್ಕೆ ತಿಳಿದುಕೊಳ್ಳುತ್ತೇವೆ. ಹಾಗೂ ನಾವು ನಮ್ಮ ಬೇಳೆ ರಕ್ಷಿಸಿಕೊಳ್ಳಬಹುದು. ನೀವು ಪುಸ್ತಕ ಕಳುಹಿಸುವಿರೆಂದು ಭಾವಿಸುತ್ತೇವೆ.

ಸಂಜಯ್ ಆರ್. ಕುಮಾರ್ ಮತ್ತು

ಮಾರುತಿ ಎ.ಸಗ್ರಾಲ್. ನಾಸಿಕ್

ಸೆಂಟ್ರಲ್ ಜೈಲ್ ನಾಸಿಕ್.

(ಈ ಬಗ್ಗೆ Other India Book Store - ICRA, New Tippasandra Post, 'Samskruti' Michael Palya, Bangalore - 72. ಸಂಪರ್ಕಿಸಿ.)

ಪ್ರೀತಿಯ ಡಾ. ಪ್ರಕಾಶ್‌ಗೆ,

ಸುಬ್ಬಯ್ಯನ ನಮಸ್ಕಾರಗಳು. ಹಿತ್ತಲಗಿಡ ಗೌರವ ಪ್ರತಿ ತಲುಪಿದೆ. ಬಹಳ ಸಂತೋಷವಾಯಿತು. ತಮ್ಮ ಪ್ರಯತ್ನಗಳು ಫಲಕಾರಿಯಾಗಲೆಂದು ಕೋರುತ್ತೇನೆ. ಪುಸ್ತಕವು ಉತ್ತಮವಾಗಿದೆ ಮತ್ತು ಮುಂದುವರಿದ ವಿಜ್ಞಾನಯುಗದಲ್ಲೂ ನೀವು ಹಳೆಯ ಪದ್ಧತಿಗಳಿಂದ ಅನುಕೂಲ ಮತ್ತು ಆರೋಗ್ಯಕರವಾದ ಸತ್ವವನ್ನು ನಾವು ಒಪ್ಪಬೇಕಾಗಿದೆ. ನಾನು ಇದೇ ದಿಸೆಯಲ್ಲಿ ಕೃಷಿ ಮತ್ತು ಜಾನುವಾರು, ಕೋಳಿ ಸಾಕಣಿಕೆ ಸಣ್ಣ ಪ್ರಮಾಣದಲ್ಲಿ ತೊಡಗಿದ್ದೇನೆ ನನ್ನ ಅನುಭವಗಳನ್ನು ತಮ್ಮಲ್ಲಿ ಪ್ರಸ್ತುತ ಪಡಿಸಲು ಸಂತೋಷ, ತಮಗೂ, ತಮ್ಮ ಕಾರ್ಯಕ್ರಮಕ್ಕೂ ನನ್ನ ಸಹಕಾರ

ತಮ್ಮ ವಿಶ್ವಾಸಿ

ಆರ್.ಸುಬ್ಬಯ್ಯ ತುಂಗಭದ್ರಾ, ಅಣೆಕಟ್ಟು

(*ತಮ್ಮ ಅನುಭವಯುಕ್ತ ಲೇಖನಗಳನ್ನು ನಾವು ಮತ್ತು ನಮ್ಮ ಓದುಗರು ನಿರೀಕ್ಷಿಸುತ್ತಿದ್ದೇವೆ. ಸಂ*)

ಅರಳಿಕಟ್ಟೆ, ಗೋಷ್ಠಿ

ನವದರ್ಶನಮ್ ಸಭೆ

ಜುಲೈ 19ರ ಭಾನುವಾರ ನವದರ್ಶನಮ್ ಸಂಸ್ಥೆಯ ಸಭೆ ಬೆಂಗಳೂರಿನ ಬಸವನಗುಡಿ ಬಳಿಯ ಈಸ್ಟ್‌ವೆಸ್ಟ್ ಶಾಲೆಯಲ್ಲಿ ಏರ್ಪಾಟಾಗಿತ್ತು. ಶ್ರೀ ಅನಂತು ನವದರ್ಶನಮ್‌ನ್ನು ಪರಿಚಯಿಸುತ್ತಾ ಸ್ವಾಗತಿಸಿದರು. ಕೃಷಿಕ ಗೋಪಾಲ್ ತಮ್ಮ ಸಾವಯುವ ಕೃಷಿ ಅನುಭವಗಳನ್ನು ಹಂಚಿಕೊಂಡರು. ಬಹುಶಃ ಬಳಕೆಯಲ್ಲಿರುವ ಎಲ್ಲಾ ತರಕಾರಿ, ಹಣ್ಣು, ದವಸಧಾನ್ಯಗಳನ್ನು ಇರುವ ಸ್ವಲ್ಪವೇ ಜಾಗದಲ್ಲಿ ಬೆಳೆಯುತ್ತಿರುವ ಶ್ರೀ ಕೆ.ನಾಗರಾಜ್‌ರಾವ್‌ರವರ ಅನುಭವ ಅಚ್ಚರಿ ಹಾಗೂ ಆಸಕ್ತಿಯುಳ್ಳದ್ದಾಗಿತ್ತು. ಸಾವಯವ ಪದಾರ್ಥಗಳ ಮಾರಾಟ ಮಳಿಗೆ - 'Eco Green Grocers'ನ ಪರಿಚಯವಿತ್ತು. ಮಾರಾಟಕ್ಕಾಗಿ ಸಾವಯವ ಕೃಷಿಯಲ್ಲಿ ಬೆಳೆದ ಅನೇಕ ಪದಾರ್ಥಗಳು ಲಭ್ಯವಿತ್ತು. 'ಹನಿಬೀ' ಮತ್ತು 'ಹಿತ್ತಲಗಿಡ' ಪತ್ರಿಕೆಗಳ ಪರಿಚಯವನ್ನು ಈ ಸಭೆಯಲ್ಲಿ ನೆರೆದಿದ್ದವರ ಗಮನಕ್ಕೆ ತರಲಾಯ್ತು.

ಜೀವಧಾರಕ ಕೃಷಿಕೂಟದ

ದಿನಾಂಕ 9.9.98 ರ ಭಾನುವಾರ 'ಹಿತ್ತಲಗಿಡ' ಮೈಸೂರು ಬಳಿಯ ಕೆ.ಹೆಮ್ಮನಹಳ್ಳಿಯ ಡಾ. ಕುಂಬ್ಳೆಯವರ ತೋಟದಲ್ಲಿ ಏರ್ಪಾಡಾಗಿದ್ದ ಜೀವಧಾರಕ ಕೃಷಿ ಕೂಟದ ಏಳನೇ ಸಭೆಯಲ್ಲಿ ಪಾಲ್ಗೊಂಡಿತ್ತು. ಎರಡು ಮೂರು ತಿಂಗಳಿಗೊಮ್ಮೆ ಯಾವುದಾದರೂ ಆಸಕ್ತ ರೈತರ ಜಮೀನಿನಲ್ಲಿ ಈ ಕೂಟ ಸಮಾವೇಶಗೊಳ್ಳುತ್ತದೆ. ಜೀವಧಾರಕ ಕೃಷಿಯ ರೀತಿ ನೀತಿಗಳ ಬಗ್ಗೆ ಚರ್ಚಿಸುತ್ತದೆ. ಊರ, ಪರವೂರ ತಜ್ಞರನ್ನು ಕರೆಸಿ ವಿಚಾರ ಪ್ರದವಾಗಿ ಬೆಳೆಯುತ್ತಿದೆ. ಜೀವಧಾರಕ ಕೃಷಿ ಕೂಟದ ಪರಿಚಯದೊಂದಿಗೆ ಸ್ವಾಗತಿಸಿದವರು ಶ್ರೀ ಕಿಕ್ಕೇರಿ ಸ.ರಮೇಶ್ ತಿಪಟೂರಿನ ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಡಾ. ಜಿ.ಎನ್.ರೆಡ್ಡಿಯವರು ಎರೆಹುಳುವನ್ನು ತೊಟ್ಟಿಯಲ್ಲಿ ಬಿಡುವ ಮೂಲಕ ಕಾರ್ಯಕ್ರಮದ ಉದ್ಘಾಟನೆ. The final empire and the collapse of civilization ಎಂಬ ಪುಸ್ತಕದ ಪರಿಚಯ ನೀಡುತ್ತಾ ಶ್ರೀ ರೆಡ್ಡಿಯವರು ಒಣಭೂಮಿಯಲ್ಲಿ ಸಾವಯವ ಕೃಷಿಯ ಅನುಭವಗಳನ್ನು ಮಂಡಿಸಿದರು.

ಇಂದ್ರಪ್ರಸ್ಥ ಫಾರಂನ ಶ್ರೀ ಎ.ಪಿ. ಚಂದ್ರಶೇಖರ್ ಎರೆಹುಳು ಪ್ರಾಮುಖ್ಯತೆ ಕುರಿತು ಮಾತನಾಡಿದರು. ಕೃಷಿ ಇಲಾಖೆಯಿಂದ ರೈತರಿಗೆ ದೊರಕುವ ಅನುಕೂಲಗಳ ಬಗ್ಗೆ ಶ್ರೀ ಪುರುಷೋತ್ತಮಪ್ಪರವರು ಮಾಹಿತಿ ಒದಗಿಸಿದರು. ನೇಸರ ಸಾವಯುವ ಸೇವಾಸಂಸ್ಥೆಯ ಅಧ್ಯಕ್ಷ ಶ್ರೀ ಯು.ಎನ್. ರವಿಕುಮಾರ್‌ರವರು ಸಂಸ್ಥೆಯ ಉದ್ದೇಶಗಳನ್ನು ವಿವರಿಸಿದರು. ದಿನನಿತ್ಯದ ಆಹಾರದಲ್ಲಿ ಕಲಬೆರೆಕೆ ಪ್ರಮಾಣ ಪತ್ತೆ ಹಚ್ಚುವ ಬಗ್ಗೆ ಮೈಸೂರು ಗ್ರಾಹಕರ ಪರಿಷತ್‌ನ ಶ್ರೀಮತಿ ಉಮಾ ಶೆಣೈಯವರು ನೀಡಿದ ಪ್ರಾತ್ಯಕ್ಷಿಕೆ ನಿಜಕ್ಕೂ ಜನಸಾಮಾನ್ಯರ ಮನ ಮುಟ್ಟುವಂತಿತ್ತು.

ಸಾವಯವ ಕೃಷಿಗೆ ಪೂರಕವಾಗುವ ಹಣ್ಣು, ತರಕಾರಿ, ಔಷಧೀಯ ಬೀಜ ಗಿಡಗಳು, ಜೀವಧಾರಕ ಚಿಂತನೆಯುಳ್ಳ ಮಾಹಿತಿ, ಪುಸ್ತಕಗಳ ಮಾರಾಟಕ್ಕೆ ಸಹ ಸಭೆಯಲ್ಲಿ ಅವಕಾಶವಿತ್ತು.

ಸಾವಯವ ಕೃಷಿಯ ವಿಚಾರ ಸಂಕಿರಣ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಸಾವಯುವ ಕೃಷಿ ಅಭಿವೃದ್ಧಿ ಸಂಘ ಬೆಂಗಳೂರು, ಹಾಗೂ ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಇವರ ಸಂಯುಕ್ತ ಆಶ್ರಯದಲ್ಲಿ ಸಾವಯವ ಕೃಷಿ ಯ ಬಗ್ಗೆ ಒಂದು ದಿನದ ವಿಚಾರ ಸಂಕಿರಣವನ್ನು ದಿನಾಂಕ 12.8.98 ರಂದು ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವಿಚಾರಸಂಕಿರಣದಲ್ಲಿ ವಿಜ್ಞಾನಿಗಳು ಹಾಗೂ ಪ್ರಗತಿಪರ ರೈತರು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಹಿತ್ತಲಗಿಡ ಬಳಗದ ಕಾರ್ಯಾಗಾರ

ತೀರ್ಥಹಳ್ಳಿ ತಾಲ್ಲೂಕು ಸರುಗ್ರಾಮದಲ್ಲಿ ಹಿತ್ತಲಗಿಡ ಬಳಗದ ವತಿಯಿಂದ ಸುಬ್ಬರಾಯಭಟ್ಟರ ಮನೆ ಆವರಣದಲ್ಲಿ ಸಾವಯವ ಕೃಷಿ, ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆ, ಸ್ಥಳೀಯ ಸಂಪನ್ಮೂಲಗಳ ಬಳಕೆ ಹಾಗೂ ಸುಸ್ಥಿರ ಅಭಿವೃದ್ಧಿ ಕುರಿತ ಒಂದು ದಿನದ ಕಾರ್ಯಗಾರ ಮೇ 9 ರ ಶನಿವಾರ ನಡೆಯಿತು. ಕೃಷಿಕ ಬಿ.ಎನ್. ಉಮೇಶ್ ಸ್ವಾಗತಿಸಿದರು. ಗ್ರಾಮದ ಹಿರಿಯರಾದ ವಯೋವೃದ್ಧೆ, ಶ್ರೀಮತಿ ವಿಮಲಮ್ಮರವರು ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯಕ್ರಮದ ಪ್ರಾರಂಭಕ್ಕೆ ಹಾಸನ ಜಿಲ್ಲೆ ಸಂತೇಶಿವರದ ಕೃಷಿಕ ಬಸವರಾಜುರವರು ತಾವು ಬೆಳೆಯುವ ನಾಟಿ ಸಜ್ಜೆ ಬೀಜವನ್ನು ಶ್ರೀಮತಿ ವಿಮಲಮ್ಮನವರಿಗೂ ಹಾಗೂ ಶ್ರೀಮತಿ ವಿಮಲಮ್ಮನವರು ಹಳೆಯ ಭತ್ತದ ತಳಿ ಜೋಳಗವನ್ನು ಬಸವರಾಜುರವರಿಗೂ ಪರಸ್ಪರ ವಿನಿಮಯ ಮಾಡಿಕೊಂಡರು. ಹಿತ್ತಲಗಿಡ ಪತ್ರಿಕೆ ಬೆಳೆದು ಬಂದ ದಾರಿ, ಪತ್ರಿಕೆಯ ಉದ್ದೇಶಗಳು, ನಾಟಿ ಪದ್ಧತಿಗಳ ವೈಜ್ಞಾನಿಕ ಸಂಶೋಧನೆ ಕುರಿತು ಪತ್ರಿಕೆಯ ಗೌರವ ಸಂಪಾದಕ ಡಾ. ಟಿ.ಎನ್. ಪ್ರಕಾಶ್‌ಕಮ್ಮರಡಿ ಮಾತನಾಡಿದರು. ವರ್ತೂರಿನ ಸಾವಯವ ಕೃಷಿ ಋಷಿ ಶ್ರೀ ಎಲ್.ನಾರಾಯಣರೆಡ್ಡಿಯವರು ತಮ್ಮ ಅನುಭವ ಹಂಚಿಕೊಂಡರು. ಶ್ರೀ ಬಿ.ಎಸ್.ದಿನೇಶ್ ಸಾವಯುವ ಕೀಟನಾಶಕವಾಗಿ ಮುಕ್ಕಡಕ ಸಸ್ಯದ ಬಳಕೆ ಕುರಿತು ಮಾಹಿತಿ ನೀಡಿದರು. ಸಂತೇಶಿವರದ ಬಸವರಾಜು ಸಾವಯುವ ಕೃಷಿ ಅನುಭವಗಳನ್ನು ಮನಮುಟ್ಟುವಂತೆ ಪ್ರಸ್ತುತಪಡಿಸಿದರು. ಬೆಂಗಳೂರು ಕೃಷಿ ವಿವಿಯ ಸಸ್ಯರೋಗ ವಿಭಾಗದ ಪ್ರೊ. ಎಸ್.ಸಿ. ಚಂದ್ರಶೇಖರ್‌ರವರು ಸಸ್ಯ ಜನ್ಯ ಕೀಟ ರೋಗನಾಶಕಗಳ ವ್ಯವಸ್ಥಿತ ಬಳಕೆ, ಪ್ರಯೋಗಾಲಯದಲ್ಲಿ ಅವುಗಳ ಪರೀಕ್ಷೆ ಕುರಿತು ರೈತರಿಗೆ ಮಾರ್ಗದರ್ಶನ ಮಾಡಿದರು. ಮಧ್ಯಾಹ್ನ, ಸೇರಿದ್ದ ರೈತರನ್ನು ಐದು ಗುಂಪುಗಳನ್ನಾಗಿ ವಿಂಗಡಿಸಲಾಯಿತು. ಮೊದಲನೆಯದರಲ್ಲಿ ನಾಟಿ ಆಹಾರ ಪದ್ಧತಿಗಳ ಕುರಿತು ಚರ್ಚಿಸಲಾಯಿತು. ಆ ಗುಂಪಿನಿಂದ ಶ್ರೀಮತಿ ಗಾಯತ್ರಿ ದಿನೇಶ್‌ರವರು ಮಹಿಳೆಯರೊಡನೆ ಚರ್ಚೆಯಿಂದ ದೊರೆತ ಕೆಲವು ನಾಟಿ ನಳಪಾಕಗಳ ಬಗ್ಗೆ, ಮನೆ ಮದ್ದು, ಕೈತೋಟ ನಿರ್ವಹಣೆ ಕುರಿತು ವಿಚಾರ ಮಂಡಿಸಿದರು. ಎರಡನೇ ಗುಂಪು ಶ್ರೀ ಕೆ.ಜಿ. ಶ್ರೀಧರ್‌ರವರ ನೇತೃತ್ವದಲ್ಲಿ ಸಭೆ ಸೇರಿ ಪಶ್ಚಿಮ ಘಟ್ಟಗಳ

ಉಳಿವು, ಸೊಪ್ಪಿನ ಬೆಟ್ಟ, ಎಂ.ಪಿ.ಎಂ ಕಾಡುಗಳ ಬಗ್ಗೆ ಸುಧೀರ್ಘ ಚರ್ಚೆ ನಡೆಸಿತು. ಮೂರನೇ ಗುಂಪು ಕೃಷಿಕ ಕೆ.ಟಿ.ನಾಗರಾಜ್ ಮುಂದಾಳತ್ವದಲ್ಲಿ ಸಭೆ ಸೇರಿ ಹಿತ್ತಲಗಿಡ ಪತ್ರಿಕೆಯಿಂದ ರೈತರಿಗೆ ದೊರೆಯುವ ಮಾಹಿತಿಗಳು, ಪತ್ರಿಕೆ ಅಭಿವೃದ್ಧಿ, ರೈತರಿಂದ ಪ್ರತಿಕ್ರಿಯೆ, ರೈತರ ನಿರೀಕ್ಷೆ ಬಗ್ಗೆ ಚರ್ಚಿಸಿದರು. ನಾಲ್ಕನೇ ಗುಂಪು ಕರ್ನಾಟಕ ರಾಜ್ಯ ರೈತ ಸಂಘದ ಶ್ರೀ ಕಂಬಳಿಗೆರೆ ರಾಜೇಂದ್ರ ನೇತೃತ್ವದಲ್ಲಿ ಒಂದೆಡೆ ಸೇರಿ, ಗ್ಯಾಟ್ ಒಪ್ಪಂದ, ಬೌದ್ಧಿಕ ಆಸ್ತಿಯ ಹಕ್ಕು ಹಾಗೂ ಇವುಗಳಿಂದ ಸಾಂಪ್ರದಾಯಿಕ ಜ್ಞಾನಕ್ಕೆ ಹಾಗೂ ಜೀವ ವೈವಿಧ್ಯತೆಗೆ ಬರುವ ಕುತ್ತುಗಳ ಬಗ್ಗೆ ಚರ್ಚೆ ನಡೆಸಿದರು. ಐದನೆಯ ಗುಂಪಿನಲ್ಲಿ ಹಲವು ರೈತರು ಬಿ.ಎಸ್.ದಿನೇಶ್‌ರವರ ಮುಂದಾಳತ್ವದಲ್ಲಿ ಸಭೆ ಸೇರಿ ಮುಕ್ಕಡಕ ಎಲೆ ದ್ರಾವಣವನ್ನು ಭತ್ತದ ಬೆಳೆಗೆ ಸಿಂಪಡಿಸುವ ಬಗ್ಗೆ ಸಾಮೂಹಿಕ ಪ್ರಯೋಗ ನಡೆಸುವ ಬಗ್ಗೆ ತೀರ್ಮಾನ ಕೈಗೊಂಡರು.

ದರಲಗೋಡಿನ ಸಾವಯವ ಕೃಷಿಕ ಶ್ರೀ ನಾರಾಯಣ ಜೋಯ್ಸ್ ಸಾವಯವ ಭತ್ತದ ಕೃಷಿ ಬಗ್ಗೆ ಅನುಭವ ಹಂಚಿಕೊಂಡರು, ಸರು ಗ್ರಾಮದ ಶ್ರೀಧರಗೌಡ ಅಧ್ಯಕ್ಷತೆ ವಹಿಸಿದ್ದ ಕಾರ್ಯಾಗಾರದಲ್ಲಿ ಸುಮಾರು ನೂರೈವತ್ತು ರೈತರು ಭಾಗವಹಿಸಿದ್ದರು. ಸ್ನಾತಕೋತ್ತರ ಕೃಷಿ ವಿದ್ಯಾರ್ಥಿ ಬಿ.ಎ.ಅನಿಲ್‌ಕೌಶಿಕ್ ಕಾರ್ಯಕ್ರಮ ನಿರೂಪಿಸಿದರು.

ಪ್ರೊ. ಗುಪ್ತಾರ ಶೋಧ ಯಾತ್ರೆ

ಜನಸಾಮಾನ್ಯ ಅನುಶೋಧನೆಗಳನ್ನು, ದೇಶಿಯ ಜ್ಞಾನ, ತಂತ್ರ ಜ್ಞಾನ ವ್ಯವಸ್ಥೆಯನ್ನು ಆಯಾ ಸ್ಥಳದಲ್ಲೇ ಜನರೊಡನೆ ಬೆರೆತು ಚರ್ಚಿಸಿ ಅರಿಯುವ ಪ್ರಯತ್ನವಾಗಿ ಹನಿ ಬೀ ಸಂಪಾದಕರಾದ ಪ್ರೊ. ಅನಿಲ್‌ಗುಪ್ತಾರವರು ಕಾಲ್ನಡಿಗೆಯಲ್ಲಿ ಇದೇ ಮೇ 15 ರಿಂದ 23 ರವರೆಗೆ ಗುಜರಾತಿನ ಸೌರಾಷ್ಟ್ರ ಪ್ರಾಂತ್ಯದಲ್ಲಿ 250 ಕಿ.ಮೀ.ಗಳ 50 ಕ್ಕೂ ಮಿಕ್ಕ ಹಳ್ಳಿಗಳಲ್ಲಿ ಶೋಧ ಯಾತ್ರೆಯನ್ನು ಪೂರೈಸಿರುವರು. ಅದೂ ತಡೆಯಲಾರದ ಕಡು ಬೇಸಿಗೆಯಲ್ಲಿ. ಪ್ರತಿ ಹಳ್ಳಿಯಲ್ಲೂ ದೇಶೀಯ ಜ್ಞಾನದ ಬಗ್ಗೆ ಮಾಹಿತಿ ನೀಡುವ ವ್ಯಕ್ತಿಗಳನ್ನು ಗುರುತಿಸುತ್ತಾ ಅವರನ್ನು ಸೃಷ್ಟಿ ಸಂಸ್ಥೆಯ ಪ್ರಕಟಣೆಗಳ ಬಹುಮಾನ ನೀಡಿ ಗೌರವಿಸುತ್ತಾ, ಪ್ರೊ. ಗುಪ್ತಾರವರ ತಂಡ ಮುಂದುವರೆಯಿತು. ಇದೇ ರೀತಿ ಹಲವು ಹಳ್ಳಿಗಳಲ್ಲಿ ಜೀವ ವಿವಿಧತೆ ಅನ್ವೇಷಣಾ ಸ್ಪರ್ಧೆ ; ದೇಶೀಯ ಪದ್ಧತಿಯಲ್ಲಿ ಅಡುಗೆ ಮಾಡುವ, ಕಸೂತಿ ಹೆಣೆಯುವ ಸ್ಪರ್ಧೆಗಳನ್ನೂ ಏರ್ಪಡಿಸಲಾಯ್ತು ಒಂದು ಹಳ್ಳಿಯಲ್ಲಿ 104 ವರ್ಷದ ವಯೋವೃದ್ಧನ ಅನುಭವವನ್ನು ಕೇಳಿ ತಿಳಿಯಲಾಯ್ತು. ಅನಿಲ್‌ಗುಪ್ತಾರ ಈ ಯಾತ್ರೆಯ ಮುಖ್ಯ ಶೋಧನೆಗಳೆಂದರೆ, ಪ್ರತಿ ಹಳ್ಳಿಯಲ್ಲೂ ಕನಿಷ್ಟ ಒಬ್ಬ ರೈತರಾದರೂ ರಾಸಾಯನಿಕ ಕೃಷಿಗೆ ಇತೀಶ್ರೀ ಹೇಳಿ ಸಾವಯವ ಕೃಷಿಗೆ ಬಂದಿರುವುದು ; ಹಲವು ಹಳ್ಳಿಗರು ದೇಶೀಯ ಕೃಷಿ ಕ್ರಮ ನಾಟಿ ಜ್ಞಾನದ ಬಗ್ಗೆ ಮಾಹಿತಿ ಹೊಂದಿದ್ದು ಸ್ಥಳೀಯ ಜನರಿಗೆ ಅಪಾರ ಸೇವೆ ನೀಡುತ್ತಿದ್ದರೂ ಅವರ ಬಗ್ಗೆ ಕಿಂಚಿತ್ತು ಗೌರವ, ಅವರ ಸೇವೆ ಬಗ್ಗೆ ಶ್ಲಾಘನೆಯ ಮನೋಭಾವ ವ್ಯಕ್ತವಾಗ ದಿರುವುದು. ಆದರೆ ಹೊರಗಿ ನವರೇನಾದರೂ ಆ ದೇಶೀಯ ಜ್ಞಾನ, ಅಥವಾ ವ್ಯಕ್ತಿಯನ್ನು ಗುರುತಿಸಿ ಪ್ರಶಂಸಲ್ಪಟ್ಟಿದ್ದೇ ಆದಲ್ಲಿ ಅದು ಸ್ಥಳೀಯರಲ್ಲಿ ಅಷ್ಟೇ ಅಪಾರ ಆಸಕ್ತಿ ತಳಿಸುವಂತೆ ಮಾಡುತ್ತದೆ. ಜೊತೆಗೆ ಪ್ರೊ. ಗುಪ್ತಾರವರ ತಂಡ ಕಂಪ್ಯೂಟರ್ ದೃಶ್ಯಾವಳಿ ವಿಡಿಯೋ ಚಿತ್ರ, ಪೋಸ್ಟರ್‌ಗಳನ್ನು ಎಲ್ಲೆಡೆ ಬಳಸಿದ್ದು ಜನಗಳನ್ನು ಅಪಾರವಾಗಿ ಆಕರ್ಷಿಸುವಂತೆ ಮಾಡಿರುತ್ತದೆ.

ಮುಂದಿನದ್ದು

ಭಾರತೀಯ ಸಂಪ್ರದಾಯಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳ ತೃತೀಯ ಕಾಂಗ್ರೆಸ್

ಅಕ್ಟೋಬರ್ 28 ರಿಂದ ನವೆಂಬರ್ 2

ವಾರಣಾಸಿ.

ಇದಕ್ಕೆ ಲೋಕ ವೈದ್ಯರ ಮಹಾಧಿವೇಶನ ಎಂದು ನಾಮಾಂಕಿತ ನೀಡಿರುವರು. ಈ ತೃತೀಯ ಕಾಂಗ್ರೆಸ್ಸಿನಲ್ಲಿ ಮುಂಬೈ ಮತ್ತು ಮದ್ರಾಸಿನ ಈ ಹಿಂದಿನ ಎರಡು ಕಾಂಗ್ರೆಸ್‌ಗಳ ಸಂವಾದ, ಚರ್ಚೆಗಳು, ಮುಂದುವರೆಯಲಿದೆ. ಜೊತೆಗೆ ನಾಟೀವೈದ್ಯರು, ರೈತರು, ಕರಕುಶಲಕರ್ಮಿಗಳು, ಆದಿವಾಸಿಗಳು, ಮಹಿಳೆಯರು, ಇವರೇ ಮೊದಲಾದ ದೇಶೀಯ ಜ್ಞಾನ, ತಂತ್ರಜ್ಞಾನಗಳನ್ನು ಬೆಳೆಸಿ ಉಳಿಸಿರುವ ನಾಟೀ ಜನರನ್ನು ಅಪಾರ ಪ್ರಮಾಣದಲ್ಲಿ ಕಲೆ ಹಾಕಲು ಉದ್ದೇಶಿಸಲಾಗಿದೆ. ಕೃಷಿ, ಕೈಗಾರಿಕೆಗಳಿಂದ ಹಿಡಿದು ಕರಕುಶಲಕರ್ಮಿಗಳು, ಮಹಿಳೆಯರ ವರಗೆ ಮುಖ್ಯ ತತ್ವಗಳ ಮೇಲೆ ಗೋಷ್ಠಿಗಳು ನಡೆಯಲಿವೆ. ಜೊತೆಗೆ 'ಹನಿಬೀ' ಜಾಲದ ಪ್ರತ್ಯೇಕ ಗೋಷ್ಠಿಯೊಂದನ್ನು ನಿಯೋಜಿಸಲಾಗಿದ್ದು, ಹಿತ್ತಲ ಗಿಡವೂ ಸೇರಿದಂತೆ ಉಳಿದ ಹನಿ ಬೀ ಯ ಸಹೋದರ ಪತ್ರಿಕೆಗಳು ತಮ್ಮ ಅನುಭವವನ್ನು ಹಂಚಿಕೊಳ್ಳಲಿವೆ. ಆಸಕ್ತರು Varanasi Secretariate, Traditional S & T Congress, Gandhian Institute of Studies, P.B.No.1116, Raghat, Varanasi - 2210001 ಇವರನ್ನು ಸಂಪರ್ಕಿಸಬಹುದು.

ಪರಿಸರ ಮತ್ತು ಆರೋಗ್ಯ ಕುರಿತ ಅಂತರಾಷ್ಟ್ರೀಯ ಸಮ್ಮೇಳನ

ಡಿ. 14-16, 1998 ಬೆಂಗಳೂರು.

ಈ ಕೈಗಾರಿಕಾಕರಣ, ನಗರೀಕರಣ, ಹಾಗೇ ರಾಸಾಯನಿಕ ಕೃಷಿಗಳ ಇತಿ ಮಿತಿ ಇಲ್ಲದ ಬೆಳವಣಿಗೆ ನಮ್ಮ ಪರಿಸರದ ಮೇಲೆ ಅಂತಿಮವಾಗಿ ನಮ್ಮ ಆರೋಗ್ಯದ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಬೆಳಕು ಚೆಲ್ಲಲು ಈ ಸಮ್ಮೇಳನ ಉದ್ದೇಶಿಸಿದೆ. ಇದರಲ್ಲಿ ವಾಯು, ನೀರು, ಆಹಾರ, ಶಬ್ದ ಮತ್ತು ಮಣ್ಣಿನ ಮಾಲಿನ್ಯತೆಗಳ ಬಗ್ಗೆ ಕೇಂದ್ರೀಕರಿಸಿದ ಗೋಷ್ಠಿಗಳಲ್ಲಿ ವಿವರವಾದ ಚರ್ಚೆ ನಡೆಯಲಿದೆ. ಭಾರತೀಯ ವಿಜ್ಞಾನದ ಸಂಸ್ಥೆಯ ಆವರಣದಲ್ಲಿರುವ ಈ ಸಮ್ಮೇಳನವನ್ನು ಕರ್ನಾಟಕ ಪರಿಸರ ಸಂಶೋಧನಾ ಪೀಠ ಮತ್ತು ಪರಿಸರ ವಿಜ್ಞಾನ ಪರಿಷತ್‌ಗಳು ಜಂಟಿಯಾಗಿ ಸಂಯೋಜಿಸಿ ರುತ್ತದೆ. ಆಸಕ್ತರು Ms. Shanthi Ashok, Programme Co-ordinator, Lakeside Medical Centre & Hospital, No.33/4, Meanee Avenue Road, Bangalore - 560 042, ಇವರನ್ನು ಸಂಪರ್ಕಿಸಬಹುದು.

ಪತ್ರಿಕೆ ನೊಂದಣಿ ಸಂಖ್ಯೆ 66842/96

ತೆರದ ಅಂಚೆ

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	40 ರೂ	400 ರೂ
ರೈತರು	50 ರೂ	500 ರೂ
ಇತರರು	60 ರೂ	600 ರೂ
ಸಂಸ್ಥೆಗಳು	350 ರೂ	2500 ರೂ
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಹಿತ್ತಲಗಿಡ ರೈತ, ವಿಜ್ಞಾನಿ, ವಿದ್ಯಾರ್ಥಿ ಸ್ವಯಂಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನ

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್ / ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡು ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಇದನ್ನು ಸ್ಪಷ್ಟವಾಗಿ ತಿಳಿಸ ತಕ್ಕದ್ದು.

ಗೆ _ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _

_ _ _ _ _ _ _ _ _ _ _ _ _ _

ವಿಳಾಸ
ಡಾ. ಟಿ.ಎನ್.ಪ್ರಕಾಶ್ ಕಮ್ಮರಡಿ, ಸಹಾಯಕ ಪ್ರಾಧ್ಯಾಪಕ
ಗೌರವ ಸಂಪಾದಕ ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ
ಬೆಂಗಳೂರು - 560 065.

Printed by Sri S. Sridhar, Published by Smt. K. Meenakshi (Owner), printed at Navbharath Enterprises, No. 10, Sirur Park B Street, Seshadripuram, Bangalore - 560 020 and Published at No. 399, 14 - B Cross, New Town Yelhanka, Bangalore - 560 064. Edited by Dr. T.N. Prakash ವಿ.ಸೂ. : ಹಿತ್ತಲಗಿಡದ ಈ ಸಂಚಿಕೆಯನ್ನು ಕಬ್ಬಿನ ತ್ಯಾಜ್ಯ Bagasse, ಕಾಗದದಿಂದ ಮುದ್ರಿಸಲಾಗಿದೆ.